Editor: NITYANANDASWAMI Publisher: U. BASAVARAJA RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ದುಡಿಯುವ ಜನರ ಪ್ರಾಣಮಿತ್ರ

ಸಂಪುಟ–18 | ಸಂಚಿಕೆ–26 | ಜೂನ್ 24–30, 2024 | ಪುಟ 16 | ರೂ.10/–
Volume-18 | Issue-26 | June 24-30, 2024 | Pages:16 | Price: 10/-

ಚಳವಳಿಗಳೇ ಬಿಜೆಪಿಯನ್ನು ಸೋಲಿನ ಅಂಚಿಗೆ ತಳ್ಳಿದವು



ಲೋಕಸಭೆಯನ್ನು ತಲುಪಿದ ರೈತರ ಎರಡು ಗಟ್ಟಿ ಧ್ವನಿಗಳು

ಮೋಹನ್ ಭಾಗವತ್ 'ಹಿತವಚನ'ದ ಹಿಂದೆ ಕರಾಮತ್ತು...

ಅಂಗನವಾಡಿ ನೌಕರರ ಹೋರಾಟಕ್ಕೆ ಜಯ:





ಶಾಲಾಪೂರ್ವ ಶಿಕ್ಷಣ ಅಂಗನವಾಡಿಗಳಲ್ಲೇ ಉಳಿಸಲು ಸರ್ಕಾರದ ನಿರ್ಧಾರ





ದೆಹಲಿ: ಪಟ್ಟು ಬಿಡದ ಗಟ್ಟಿ ಹೋರಾಟಕ್ಕೆ ಜಯ ಆರೋಗ್ಯ ಇಲಾಖೆಯ ಗುತ್ತಿಗೆ ನೌಕರರು ಖಾಯಂ

ತಮ್ಮ ಪ್ರಾಣವನ್ನೇ ಒತ್ತೆ ಇಟ್ಟು ಜನರ ಜೀವ ರಕ್ಷಣೆ ಮಾಡುವ ದೆಹಲಿಯ ಆರೋಗ್ಯ ಕಾರ್ಯಕರ್ತರು ಐತಿಹಾಸಿಕ ಜಯ ಸಾಧಿಸಿದ್ದಾರೆ. 28 ವರ್ಷಗಳಿಂದ ಗುತ್ತಿಗೆ ಕಾರ್ಮಿಕರಾಗಿದ್ದ ಅವರೀಗ ಬಲಿಷ್ಟ ಚಳುವಳಿ ನಡೆಸಿ ಖಾಯಂ ಹುದ್ದೆಗಳ ನೇಮಕಾತಿ ಆದೇಶ ಪಡೆದುಕೊಂಡಿದ್ದಾರೆ.

ದೆಹಲಿ ಮುನಿಸಿಪಲ್ ಕಾರ್ಪೋರೇಷನ್ (ಎಂಸಿಡಿ)ನ ಆರೋಗ್ಯ ಇಲಾಖೆಯು ಜೂನ್ 6, 2024 ರಂದು ಸುದೀರ್ಘ ಕಾಲದಿಂದ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದ 3,049 ಆರೋಗ್ಯ ಕಾರ್ಯಕರ್ತರ ಕೆಲಸ ಮಾಡುತ್ತಿರುವ ಉದ್ಯೋಗಿಗಳನ್ನು ಖಾಯಂ ಮಾಡಿ ಆದೇಶ ನೀಡಿತು. ಎಂಸಿಡಿ ಯ ಆರೋಗ್ಯ ಇಲಾಖೆಯಲ್ಲಿ ಹೊಸದಾಗಿ ಖಾಯಂ ಹುದ್ದೆಗಳನ್ನು ಸೃಷ್ಟಿ ಮಾಡುವಂತೆ ಮಾಡಿ, ತಮ್ಮ ಉದ್ಯೋಗಗಳನ್ನು ಖಾಯಂಗೊಳಿಸಿಕೊಂಡ ನೌಕರರ ಈ ಯಶಸ್ವಿ ಹೋರಾಟವು ದೆಹಲಿ ರಾಜ್ಯ ಸರಕಾರ ಮತ್ತು ದೆಹಲಿ ಮುನಿಸಿಪಲ್ ಕಾರ್ಪೋರೇಷನ್‌ಗಳ ನಡುವೆ ತೂಗುಯ್ಯಾಲೆಯಾಡಿದಂತಿದ್ದ ಈ ಆರೋಗ್ಯ ಕಾರ್ಯಕರ್ತರ ಉದ್ಯೋಗಕ್ಕೆ ಸ್ಥಿರತೆಯನ್ನೂ ನೀಡಿದೆ.

ಈ ಚಳುವಳಿ ಕೇವಲ ದೆಹಲಿಯಲ್ಲಿ ಮಾತ್ರವಲ್ಲ, ಇಡೀ ದೇಶದ ನಾನಾ ರಾಜ್ಯಗಳಲ್ಲಿ, ನಾನಾ ಇಲಾಖೆಗಳು ಮತ್ತು ವಿಭಾಗಗಳಲ್ಲಿ ಗುತ್ತಿಗೆ ಪದ್ಧತಿಯಡಿ ಕೆಲಸ ಮಾಡುತ್ತಾ ಖಾಯಮಾತಿಗಾಗಿ ಹೋರಾಡುತ್ತಿರುವ ಹೋರಾಟನಿರತ ಉದ್ಯೋಗಿಗಳಿಗೆ ಹೊಸ ಸ್ಫೂರ್ತಿ ನೀಡಿದೆ. ಭರವಸೆಯ ಹೊಸ ಕಿರಣಗಳನ್ನು ಹುಟ್ಟು ಹಾಕಿದೆ.

ದೆಹಲಿಯ ಆರೋಗ್ಯ ರಕ್ಷಕರು

ಡೆಂಗ್ಯೂ, ಕಾಲರಾ, ಮಲೇರಿಯಾ, ಚಿಕನ್ ಗುನ್ಯಾ, ಪ್ಲೇಗ್, ಜಾಂಡಿಸ್ ಮುಂತಾದ ಸಾಂಕ್ರಾಮಿಕ ರೋಗಗಳು, ಖಾಯಿಲೆಗಳು ಹರಡದಂತೆ ನಿಯಂತ್ರಣದ ಕೆಲಸ ಮಾಡುವ ಈ ಉದ್ಯೋಗಿಗಳನ್ನು 'ಸಾಂಕ್ರಾಮಿಕ ರೋಗವಾಹಕಗಳ ನಿಯಂತ್ರಕರು' (Domestic Breeding Checkers-DBCS) ಎಂಬ ಹೆಸರಿನಿಂದ ಕರೆಯಲಾಗುತ್ತಿದೆ. ಸ್ವತಃ ಸುಮಾರು 52 ಉದ್ಯೋಗಿಗಳು ಸಾಂಕ್ರಾಮಿಕ ರೋಗಗಳಿಗೆ ಬಲಿಯಾದರೂ, ಈ ಕಾರ್ಮಿಕರ ಕೆಲಸ ಹಲವು ದಶಕಗಳಿಂದಲೂ ದೆಹಲಿಯ ಜನರ ಆರೋಗ್ಯ ರಕ್ಷಣೆಯ ವಿಷಯದಲ್ಲಿ ನಿರ್ಣಾಯಕ ಪಾತ್ರ ವಹಿಸಿದೆ. ದೆಹಲಿಯ ನಾನಾ ಭಾಗಗಳಲ್ಲಿ ಮನೆ ಮನೆಗೆ ತೆರಳಿ, ಸಾಂಕ್ರಾಮಿಕ ರೋಗಗಳ ಹರಡುವಿಕೆಗೆ ಕಾರಣವಾಗುವ ಸೊಳ್ಳೆ, ನೊಣ ಇತ್ಯಾದಿ ಕ್ರಿಮಿಗಳು ಉತ್ಪತ್ತಿಯಾಗುವಂತಹ ಪರಿಸ್ಥಿತಿಯನ್ನು, ಇಲಿ ಮುಂತಾದ ಪ್ರಾಣಿಗಳ ಸಂತತಿ ಬೆಳೆಯಲು ಕಾರಣವಾಗುವಂತಹ ಸ್ಥಿತಿಗತಿಯನ್ನು ನಿವಾರಿಸುವಂತೆ ಜನರಿಗೆ ತಿಳುವಳಿಕೆ ಕೊಡುವುದು, ಅಂತಹ ಪರಿಸ್ಥಿತಿ ಇರುವ ಮನೆಗಳಲ್ಲಿ ನೀರಿನ ಟ್ಯಾಂಕು, ಗಾಳಿ ತಂಪುಮಾಡುವ ಕೂಲರ್ ಇತ್ಯಾದಿಗಳಲ್ಲಿ ನಿಂತ ನೀರಿಗೆ ಔಷಧಿಯನ್ನು ಹಾಕಿ ಅಪಾಯ ನಿವಾರಿಸುವುದು, ಮನೆ ಮತ್ತು ಬಡಾವಣೆಗಳಲ್ಲಿ ಕಾಪಾಡಿಕೊಳ್ಳಬೇಕಾದ ಸ್ವಚ್ಚತೆಯ ಅರಿವು ಮೂಡಿಸುವುದು ಇವರ ಬಹುಮುಖ್ಯವಾದ ಕೆಲಸ. ಕಳೆದ ಇಪ್ಪತ್ತೆಂಟು ವರ್ಷಗಳಿಂದ ಈ ನೌಕರರು ಈ ಕೆಲಸವನ್ನು ಅತ್ಯಂತ ಪರಿಣಾಮಕಾರಿಯಾಗಿ, ಯಶಸ್ವಿಯಾಗಿ ನಿಭಾಯಿಸುತ್ತಾ ಬರುತ್ತಿದ್ದಾರೆ.

'ಮಲೇರಿಯಾ ನಿಯಂತ್ರಕರು'

1996 ರಲ್ಲಿ ದೇಶದ ರಾಜಧಾನಿ ಸಾಂಕ್ರಾಮಿಕ ಡೆಂಗ್ಯೂ ಮತ್ತು ಮಲೇರಿಯ ಜ್ವರದಿಂದ ತತ್ತರಿಸಿತ್ತು. ಅಗ ದೆಹಲಿಯ ಮುನಿಸಿಪಲ್ ಕಾರ್ಪೋರೇಷನ್‌ನ ಆರೋಗ್ಯ ಇಲಾಖೆಯು 'ಮಲೇರಿಯಾ ನಿಯಂತ್ರಕರು' ಎಂಬ ಹೆಸರಿನಲ್ಲಿ ಈ ನೌಕರರನ್ನು ದಿನಗೂಲಿ ಆಧಾರದ ಮೇಲೆ ನೇಮಕ ಮಾಡಿಕೊಂಡಿತು. 1998 ರಲ್ಲಿ ಇವರನ್ನು 'ಸಾಂಕ್ರಾಮಿಕ ರೋಗವಾಹಕಗಳ ನಿಯಂತ್ರಕರು– ಡಿ.ಬಿ.ಸಿ.ಎಸ್.' ಎಂದೂ, 2000 ದಲ್ಲಿ 'ಆರೋಗ್ಯ ಕಾರ್ಯಕರ್ತರು' ಎಂದೂ ಹೆಸರಿಸಲಾಯಿತು. ಮತ್ತೆ 2006 ರಲ್ಲಿ 'ಡಿ.ಬಿ.ಸಿ.ಎಸ್.' ಎಂದು ಮರುನಾಮಕರಣ ಮಾಡಲಾಯಿತು.

ವರ್ಷದಿಂದ ವರ್ಷಕ್ಕೆ ಹೆಸರುಗಳಲ್ಲಿ ಏನೇನೋ ಬದಲಾವಣೆ ಬಂದಿತಾದರೂ ಈ ಉದ್ಯೋಗಿಗಳಿಗೆ ಸೇವಾ ಭದ್ರತೆ ಮಾತ್ರ ದೊರೆಯಲಿಲ್ಲ. ಮೃತರ ಕುಟುಂಬಗಳಿಗೆ ಸೂಕ್ತ ಪರಿಹಾರವೂ ದೊರೆಯಲಿಲ್ಲ. ಮತ್ತೊಂದೆಡೆ ಕೆಲಸಗಳ ಹೊರೆ ಮಾತ್ರ ಏರುತ್ತಾ ಹೋಯ್ತು. 2006 ರ ನಂತರ ಇವರ ಕೆಲಸವು ಮಾರಣಾಂತಿಕ ರೋಗ ನಿಯಂತ್ರಣದ 'ಸ್ವಚ್ಚ ಸರ್ವೇಕ್ಷಣಾ ಅಭಿಯಾನ' ಮಾತ್ರ ಆಗಿ ಉಳಿಯಲಿಲ್ಲ. ದೆಹಲಿ ಕಾರ್ಪೋರೇಷನ್‌ನ ಮನೆ ತೆರಿಗೆ ಸಂಗ್ರಹ, ಟೋಲ್ ಸುಂಕ ಸಂಗ್ರಹ, ಕಟ್ಟಡಗಳ ನಿಗಾವಣೆ ಮುಂತಾದ ಹೊಣೆಗಳಿಗೂ ಕೆಲಸ ವಿಸ್ತರಿಸಿತು. 2020 ರಲ್ಲಿ ಕೊರೊನ ನಿಯಂತ್ರಣವೂ ಸೇರಿತು. ಈ ಉದ್ಯೋಗಿಗಳು ದೀರ್ಘಕಾಲಿಕ ಸ್ವರೂಪದ ಮತ್ತು ನಾನಾ ವೈವಿಧ್ಯತೆಯ ಕೆಲಸಗಳನ್ನು ಮಾಡುತ್ತಿದ್ದರೂ ಸಹ ಇವರನ್ನು ದಿನಗೂಲಿ ಕಾರ್ಮಿಕರನ್ನಾಗಿಯೇ ಮುಂದುವರಿಸಲಾಗಿತ್ತು. ಅಲ್ಲದೇ ಇವರಿಗೆ ಅರೆ–ಕುಶಲ ಕಾರ್ಮಿಕರಿಗೆ ನಿಗದಿಯಾದ ಕನಿಷ್ಟ ವೇತನವನ್ನು ಮಾತ್ರವೇ ಕೊಡುತ್ತಾ ಬರಲಾಗಿತ್ತು.

ರಾಜಕೀಯ ಮಹತ್ವ

ಈ ಹೋರಾಟದ ಗೆಲುವು ಕಾರ್ಮಿಕ ಚಳುವಳಿಯ ದೃಷ್ಟಿಯಿಂದಲೂ ಮಹತ್ವದ್ದು. ರಾಜಕೀಯ ದೃಷ್ಟಿಯಿಂದಲೂ ಮಹತ್ವದ್ದು. ಹೆಹಲಿಯ ಲೆಫ್ಟಿನೆಂಟ್ ಗವರ್ನರ್ ಮೂಲಕ ಬಿಜೆಪಿ ನೇತೃತ್ವದ ಕೇಂದ್ರ ಸರಕಾರವು ದೆಹಲಿ ರಾಜ್ಯ ಸರಕಾರಕ್ಕೆ ನಿರಂತರವಾದ ಕಿರುಕುಳ ಕೊಡುತ್ತಾ ದಬ್ಬಾಳಿಕೆ ನಡೆಸುತ್ತಿರುವುದು, ರಾಜ್ಯ ಸರಕಾರದ ಹಕ್ಕುಗಳನ್ನು ದಮನ ಮಾಡುತ್ತಿರುವುದು, ಬಿಜೆಪಿಯ ವಿರೋಧ ಪಕ್ಷವಾದ ಆಪ್ ಪಕ್ಷದ ಮುಖಂಡರಾದ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಅಬಕಾರಿ ನೀತಿಗೆ ಸಂಬಂಧಿಸಿದಂತೆ ಭ್ರಷ್ಟಾಚಾರದ ಆರೋಪ ಹೊರಿಸಿ ಜೈಲಿಗೆ ತಳ್ಳಿರುವುದು ಇವೆಲ್ಲವೂ ಈಗಾಗಲೇ ಜಗಜ್ಜಾಹೀರಾಗಿರುವ ವಿಷಯಗಳು. ಇದೇ ಬಿಜೆಪಿ ಸರಕಾರವು ದೆಹಲಿ ಮುನಿಸಿಪಲ್ ಕೌನ್ಸಿಲ್‌ನ ಆಡಳಿತವನ್ನು ಸಹ ತನಗೆ ಬೇಕಾದಂತೆ ನಿಯಂತ್ರಿಸಲು, ನೀತಿಗಳನ್ನು ತಿರುಚಲು ಪ್ರಯತ್ನಿಸುತ್ತಲೇ ಬಂದಿದೆ. ಈ ಅವಧಿಯಲ್ಲಿ ದೆಹಲಿ ಆರೋಗ್ಯ ಕಾರ್ಯಕರ್ತರ ಚಳುವಳಿಯನ್ನು ದಮನ ಮಾಡಲು, ಬೇಡಿಕೆಗಳನ್ನು ಒಪ್ಪಿಕೊಳ್ಳದಂತೆ ಮಾಡಲು ಕೇಂದ್ರ ಸರಕಾರವೂ ಸಾಕಷ್ಟು ಕುತಂತ್ರಗಳನ್ನು ನಡೆಸಿ ಒತ್ತಡಗಳನ್ನು ಹೇರಿದೆ. ಇನ್ನು ಬಿಜೆಪಿಯೇತರ ಸರಕಾರವಾದರೂ ಆಪ್ ಸರಕಾರ ಸಹ ವರ್ಗ ಹಿತಾಸಕ್ತಿಯ ವಿಷಯ ಬಂದಾಗ ದೃಢವಾದ, 'ದುಡಿಯುವ ವರ್ಗದ ಪರ'ವಾದ ನಿಲುವು ಹೊಂದಿಲ್ಲ ಎಂಬುದು ಈ ಹೋರಾಟದಿಂದ ಇನ್ನಷ್ಟು ಚೆನ್ನಾಗಿ ಮನದಟ್ಟಾಗಿದೆ. ದುಡಿಯುವ ಜನರ ನ್ಯಾಯಬದ್ಧ ಬೇಡಿಕೆಗಳನ್ನು ಒಪ್ಪಿಕೊಳ್ಳದೇ ಮೊಂಡು ಧೋರಣೆ ಅನುಸರಿಸುವುದು, ಬೇಡಿಕೆ ಒಪ್ಪಿಕೊಳ್ಳುವುದು ಅನಿವಾರ್ಯ ಎಂಬ ಪರಿಸ್ಥಿತಿ ಬಂದರೂ ಒಪ್ಪಿಕೊಳ್ಳದೇ ಹೊಯ್ದಾಡುವುದು, ಒಪ್ಪಿಕೊಂಡ ಬೇಡಿಕೆಗಳನ್ನು ಈಡೇರಿಸಲೂ ಸಹ ಅನಗತ್ಯವಾದ, ವಿಪರೀತ ವಿಳಂಬ ಮಾಡುವುದು ಈ ಎಲ್ಲವುಗಳೂ ಆಪ್ ಸರಕಾರದ 'ವರ್ಗ ಗುಣ' ಏನು ಎಂದು ಈ ಪ್ರಕರಣದಲ್ಲಿ ಸ್ಪಷ್ಟಪಡಿಸಿವೆ.

ಜಾಗತೀಕರಣದ ಯುಗದಲ್ಲಿ..

ತೊಂಬತ್ತರ ದಶಕದಿಂದ ದೇಶದಲ್ಲಿ ಜಾಗತೀಕರಣ–ಉದಾರೀಕರಣ ಮತ್ತು ಖಾಸಗೀಕರಣದ ಶಖೆ ಆರಂಭವಾದ ಮೇಲೆ ದಿನೇ ದಿನೇ ಉದ್ಯೋಗ ಭದ್ರತೆ ಎಂಬುದು ಮರೀಚಿಕೆಯಾಗುತ್ತಿದೆ. ಸರಕಾರಿ ರಂಗದಲ್ಲಿ ಖಾಯಂ ಹುದ್ದೆಗಳು ರದ್ದಾಗುತ್ತಾ ಉದ್ಯೋಗಾವಕಾಶಗಳು ಕಡಿಮೆಯಾಗುತ್ತಿವೆ. ಖಾಸಗಿ ರಂಗದಂತೆಯೇ, ಸರಕಾರದ ನಾನಾ ಇಲಾಖೆಗಳಲ್ಲೂ ಸಹ ಖಾಯಂ ಸ್ವರೂಪದ ಕೆಲಸಗಳಲ್ಲೂ ಗುತ್ತಿಗೆ ನೇಮಕಾತಿಯು ಖಾಯಂ ಹುದ್ದೆಗಳನ್ನು ನುಂಗುತ್ತಾ ಬರುತ್ತಿದೆ. ಈ ವಿದ್ಯಮಾನ ದೇಶದ ಉದ್ದಗಲ ಕಂಡುಬರುತ್ತಿದೆ.

ಇಂತಹ ಸನ್ನಿವೇಶದಲ್ಲಿ ದಿನಗೂಲಿ ಪದ್ಧತಿ, ಗುತ್ತಿಗೆ ಕಾರ್ಮಿಕ ಪದ್ಧತಿ ಮುಂತಾದ ಅನ್ಯಾಯದ ನೀತಿಗಳ ವಿರುದ್ಧ, ಉದ್ಯೋಗ ಭದ್ರತೆಗಾಗಿ ಹೋರಾಟಕ್ಕೆ ಧುಮುಕಿರುವ ದೇಶದ ಕಾರ್ಮಿಕ ವರ್ಗಕ್ಕೆ ಇಂತಹ ಒಂದು ಉತ್ತಮ ಯಶಸ್ಸು ಈಗ ಅಗತ್ಯವಾಗಿತ್ತು. ದೆಹಲಿ ಆರೋಗ್ಯ ಕಾರ್ಯಕರ್ತರ ಈ ಹೋರಾಟದ ವಿಜಯ ಅಂತಹ ಒಂದು ಮಾದರಿಯನ್ನು ಒದಗಿಸಿದೆ.

ಇತ್ತೀಚಿನ ಲೋಕಸಭಾ ಚುನಾವಣೆಯ ಫಲಿತಾಂಶ ಒಂದು ಹಂತದವರೆಗೆ ಜನರ ಬದುಕಿನ ಬವಣೆಗಳನ್ನು ಮುಂಚೂಣಿಗೆ ತಂದು ನಿಲ್ಲಿಸಿದೆ. ಜನರನ್ನು ಒಡೆದು ಆಳುವ ಬಿಜೆಪಿ ಕೂಟದ ಕುತಂತ್ರಗಾರಿಕೆ ವಿರುದ್ಧ ಎಚ್ಚರಿಕೆಯನ್ನೂ ನೀಡಿದೆ. ಜನಚಳುವಳಿಗಳು ಈ ಪ್ರಕ್ರಿಯೆಯನ್ನು ಇನ್ನಷ್ಟು ಮುಂದಕ್ಕೊಯ್ಯಲು ಇಂತಹ ಯಶಸ್ವಿ ಚಳುವಳಿಯಿಂದ ಸಾಕಷ್ಟು ಅನುಕೂಲವಾಗಲಿದೆ.

ಹೋರಾಟದ ಹೆಜ್ಜೆಗಳು

ಇದು ಸುಮಾರು ಏಳು ವರ್ಷಗಳಷ್ಟು ಕಾಲ ನಡೆದ ಸುದೀರ್ಘ ಹೋರಾಟದ ಯಶಸ್ಸು. 2017 ರಲ್ಲಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್(ಸಿಐಟಿಯು)ಗೆ ಸೇರ್ಪಡೆ ಹೊಂದಿದ 'ಆಂಟಿ–ಮಲೇರಿಯಾ ಏಕ್ತಾ ಕರ್ಮಾಚಾರಿ ಯೂನಿಯನ್'(ಎಎಂಇಕೆಯು) ಎಂಬ ಕಾರ್ಮಿಕ ಸಂಘಟನೆ ಅಡಿಯಲ್ಲಿ ದೆಹಲಿಯ ಈ ಆರೋಗ್ಯ ಕಾರ್ಯಕರ್ತರು ಸಂಘಟಿತರಾದರು. ಉದ್ಯೋಗ ಭದ್ರತೆ, ಖಾಯಮಾತಿಗಾಗಿ 2017 ರಲ್ಲಿ ಹಲವಾರು ಹೋರಾಟಗಳು ನಡೆದವು. ಅದೇ 2017 ರಲ್ಲೇ ಕಾರ್ಪೋರೇಷನ್‌ನ ಆಡಳಿತವು ಕಾರ್ಮಿಕರೊಂದಿಗೆ ಲಿಖಿತ ಒಪ್ಪಂದಕ್ಕೆ ಬರುವಂತೆ ಮಾಡುವಲ್ಲಿ ಚಳುವಳಿ ಯಶಸ್ವಿಯಾಯಿತು. ಕಾರ್ಪೋರೇಷನ್ ಆಡಳಿತವು ತನ್ನ ಆರೋಗ್ಯ ಇಲಾಖೆಯ ಖಾಲಿ ಇರುವ ಖಾಯಂ ಹುದ್ದೆಗಳಿಗೆ ಈ ಆರೋಗ್ಯ ಕಾಯಕರ್ತರನ್ನು

ಪುಟ 11 ಕ್ಕೆ

ಪೆಟ್ರೋಲ್ ದರ ಏರಿಕೆ ಮತ್ತು ಬಿಜೆಪಿ ನಾಯಕರ ಕಪಟತನದ ಪ್ರತಿಭಟನೆ

ಸಿ.ಸಿದ್ದಯ್ಯ

ರಾಜ್ಯದ ಕಾಂಗ್ರೆಸ್ ಸರ್ಕಾರ ಜೂನ್ 15 ರಂದು ಲೀಟರ್ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಕ್ರಮವಾಗಿ ರೂ. 3 ಮತ್ತು ರೂ. 3.02 ರಷ್ಟು ಮೌಲ್ಯವರ್ಧಿತ ತೆರಿಗೆಯನ್ನು (ವ್ಯಾಟ್) ಹೆಚ್ಚಿಸಿದೆ. ಇದರಿಂದಾಗಿ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ವ್ಯಾಟ್ ಕ್ರಮವಾಗಿ ಶೇ.29.84 ಮತ್ತು ಶೇ.18.44 ಕ್ಕೆ ಹೆಚ್ಚಿದೆ. ಇದರ ನಂತರ ಬೆಂಗಳೂರಿನಲ್ಲಿ ಈಗ ಪೆಟ್ರೋಲ್ ಬೆಲೆ ಲೀಟರ್‌ಗೆ 102.86 ರೂ. ಮತ್ತು ಡೀಸೆಲ್ ಬೆಲೆ ಲೀಟರ್ ಗೆ 88.94 ರೂ. ಅಗಿದೆ.

ಬೆಲೆ ಏರಿಕೆಯಿಂದ ತತ್ತರಿಸುತ್ತಿರುವ ರಾಜ್ಯದ ಜನತೆಯ ಮೇಲೆ ಬಿಜೆಪಿಯವರಿಗೆ ಇದ್ದಕ್ಕಿದ್ದಂತೆ ಕನಿಕರ ಹುಟ್ಟಿಕೊಂಡಿದೆ. ರಾಜ್ಯದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ವಿರುದ್ದ ಬಿಜೆಪಿ ಧ್ವನಿ ಎತ್ತಿದೆ, ರಾಜ್ಯದ ಹಲವೆಡೆಗಳಲ್ಲಿ ಪ್ರತಿಭಟನೆಯನ್ನೂ ಮಾಡಿದೆ. ಈ ತೆರಿಗೆ ಹೆಚ್ಚಳದಿಂದ ಅಗತ್ಯ ವಸ್ತುಗಳ ಬೆಲೆಗಳು ಏರಿಕೆಯಾಗುತ್ತವೆ ಎಂದು ಬಿಜೆಪಿ ನಾಯಕರು ಆರೋಪಿಸಿದ್ದಾರೆ. ಬಿಜೆಪಿ ನಾಯಕ ಆರ್. ಅಶೋಕ ಅವರು ಎಂದಿನ ತಮ್ಮದೇ 'ಶೈಲಿ'ಯಲ್ಲಿ "ಕಾಂಗ್ರೆಸ್ಸಿನವರು ಜನರ ತಲೆ ಮೇಲೆ ಚಪ್ಪಡಿ ಕಲ್ಲನ್ನೇ ಹಾಕಿದ್ದಾರೆ, ತೈಲ ಬೆಲೆ ಏರಿಕೆಯಿಂದ ಅಗತ್ಯ ವಸ್ತುಗಳ ಬೆಲೆಯೂ ಜಾಸ್ತಿ ಆಗುತ್ತದೆ, ಸಿದ್ದರಾಮಯ್ಯನಿಗೆ ಮಾನ, ಮರ್ಯಾದೆ ಏನಾದರೂ ಇದೆಯಾ?...." ಹೀಗೆ ತಮ್ಮ ಸಿಟ್ಟನ್ನು ಹೊರಹಾಕಿದ್ದಾರೆ. ಬಿಜೆಪಿಯ ಇತರೆ ಕೆಲ ನಾಯಕರ ಮಾತುಗಳೂ ಇದೇ ದಾಟಿಯಲ್ಲಿದ್ದವು. ರಾಜ್ಯ ಸರ್ಕಾರವನ್ನು ಈ ರೀತಿ ದೂರುವಾಗ ಇವರ ಮುಖದಲ್ಲಿ ಆಕ್ರೋಶ ಎದ್ದು ಕಾಣುತ್ತಿತ್ತು. ಜನರ ಸಂಕಷ್ಟಗಳು ಬಿಜೆಪಿ ನಾಯಕರನ್ನು ಎಷ್ಟೊಂದು ತಟ್ಟಿದೆ ಅನಿಸುವಂತಿತ್ತು ಇವರ ಮಾತುಗಳು ಮತ್ತು ಹಾವಭಾವಗಳು!!!

ಇದರಿಂದ ಸರಕು ಸಾಗಾಣಿಕೆ ವೆಚ್ಚ ಹೆಚ್ಚಾಗಿ ಸರಕುಗಳ ಬೆಲೆ ಏರಿಕೆಗೆ ಕಾರಣವಾಗುತ್ತದೆ, ರಸ್ತೆ ಪ್ರಯಾಣ ದರ ಏರಿಕೆಗೆ ಕಾರಣವಾಗುತ್ತದೆ, ಈಗಾಗಲೇ ಬೆಲೆ ಏರಿಕೆಯಿಂದ ತತ್ತರಿಸಿರುವ ಜನತೆಗೆ ರಾಜ್ಯದ ಕಾಂಗ್ರೆಸ್ ಸರ್ಕಾರ ಗಾಯದ ಮೇಲೆ ಬರೆ ಎಳೆದಂತಾಗಿದೆ. ಇದೆಲ್ಲವೂ ಸತ್ಯ. ಆದರೆ, ಸರ್ಕಾರ ಐದು ಗ್ಯಾರಂಟಿ ಯೋಜನೆಗಳಿಗಾಗಿ ಪ್ರತಿ ವರ್ಷ 50 ಸಾವಿರ ಕೋಟಿ ರೂಪಾಯಿ ಹಣ ಬೇಕಾಗುತ್ತದೆ. ಇದನ್ನು ಸರಿದೂಗಿಸಲು ಮತ್ತು ಇತರೆ ಅಭಿವೃದ್ಧಿ ಕಾರ್ಯಗಳಿಗೆ ಆದಾಯ ಕ್ರೋಢೀಕರಿಸಲು ತೆರಿಗೆ ಹೆಚ್ಚಳ ಅನಿವಾರ್ಯ ಎಂದು ಸರ್ಕಾರ ತನ್ನ ನಡೆಯನ್ನು ಸಮರ್ಥಿಸಿಕೊಳ್ಳುತ್ತಿದೆ. ಜನಸಾಮಾನ್ಯರಿಗೆ ಹೊರೆಯಾಗದಂತೆ, ರಾಜ್ಯ ಸರ್ಕಾರದ ಯೋಜನೆಗಳಿಗೆ ಹಣದ ಕೊರತೆಯಾಗದಂತೆ, ಸಂಪನ್ಮೂಲ ಕ್ರೋಢೀಕರಣ ಹೇಗೆಂಬುದರ ಬಗ್ಗೆ ಸಲಹೆ ನೀಡಬೇಕಿರುವುದು ವಿರೋಧ ಪಕ್ಷಗಳಿರಬೇಕಾದ ನಿಜವಾದ ಕಾಳಜಿ. ಆದರೆ, ಈ ಮಾತನಾಡುವಾಗಲೂ ರಾಜ್ಯ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳನ್ನು ಬಿಜೆಪಿ ನಾಯಕರು ಟೀಕಿಸುತ್ತಾರೆ!!

ಕಚ್ಚಾ ತೈಲದ ಆಮದು ಬೆಲೆ ಪ್ರಪಂಚದಾದ್ಯಂತ ಕುಸಿಯುತ್ತಿರುವ ಸಮಯದಲ್ಲಿ ಮೋದಿ ಸರ್ಕಾರವು ವಾಸ್ತವವಾಗಿ ಇಂಧನದ ಮೇಲಿನ ತೆರಿಗೆಯನ್ನು ಹೆಚ್ಚಿಸಿತು. ರಷ್ಯಾ–ಉಕ್ರೇನ್ ಯುದ್ಧದ ಸಮಯದಲ್ಲಿಯೂ, ಆಮದು ಮಾಡಿಕೊಂಡ ಅಗ್ಗದ ರಷ್ಯಾದ ಕಚ್ಚಾ ತೈಲದ ಪ್ರಯೋಜನಗಳನ್ನು ಇಂಧನದ ಚಿಲ್ಲರೆ ಮಾರಾಟದ ಬೆಲೆಗೆ ವರ್ಗಾಯಿಸಲಾಗಿಲ್ಲ. ಇದು ಒಟ್ಟಾರೆ ಅಗತ್ಯ ವಸ್ತುಗಳ ಬೆಲೆ ಏರಿಕೆ ಮತ್ತು ಹಣದುಬ್ಬರ ದರವನ್ನು ನಿರಂತರವಾಗಿ ಹೆಚ್ಚುವಂತೆ ಮಾಡಿತು.

ನಿಜವಾಗಿಯೂ ಬಿಜೆಪಿ ನಾಯಕರು ಜನರ ಸಂಕಷ್ಟಗಳಿಗೆ ಮರುಗುತ್ತಿದ್ದಾರೆಯೇ? ಪೆಟ್ರೋಲ್, ಡೀಸಲ್ ಬೆಲೆ ಏರಿಕೆ ಜನರನ್ನು ಭಾದಿಸುತ್ತಿವೆ ಎಂದು ಇವರಿಗೆ ನಿಜವಾಗಿಯೂ ಅನಿಸುತ್ತಿದೆಯೇ? ಖಂಡಿತಾ ಇಲ್ಲ. ಬಿಜೆಪಿಯವರಿಗೆ ಆ ರೀತಿ ಅನಿಸಿದ್ದರೆ, ಹತ್ತು ವರ್ಷಗಳಿಂದ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಪೆಟ್ರೋಲಿಯಂ ಪದಾರ್ಥಗಳ ಮೇಲೆ ವಿಪರೀತ ತೆರಿಗೆ ಹೆಚ್ಚಳ ಮಾಡಿದಾಗ, ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ ಕುಸಿದ ಸಂದರ್ಭದಲ್ಲಿಯೂ, ರಷ್ಯಾ–ಉಕ್ರೇನ್ ನಡುವಿನ ಬಿಗುವಿನ ವಾತಾವರಣದಿಂದಾಗಿ ರಷ್ಯಾ ತೈಲವನ್ನು ಕಡಿಮೆ ಬೆಲೆಯಲ್ಲಿ ಆಮದು ಮಾಡಿಕೊಂಡರೂ, ಅದರ ಇಳಿಕೆಯ ಲಾಭವನ್ನು ತೈಲ ಕಂಪನಿಗಳು ಗ್ರಾಹಕರಿಗೆ ವರ್ಗಾಯಿಸದಿದ್ದಾಗ?. ಇಂತಹ ಯಾವುದೇ ಸಂದರ್ಭದಲ್ಲಿಯೂ ಬಿಜೆಪಿ ಒಮ್ಮೆಯೂ ಪ್ರತಿಭಟನೆ ಮಾಡಲಿಲ್ಲ. ಕನಿಷ್ಟ ಪಕ್ಷ, ಇದು ಜನರಿಗೆ ಹೊರೆಯಾಗುತ್ತದೆ ಎಂದು ಬಾಯಿಮಾತಿಗಾದರೂ ರಾಜ್ಯದ ಬಿಜೆಪಿ ನಾಯಕರು ಹೇಳಲಿಲ್ಲ.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ (ಸಿಪಿಎಂ) ಹೇಳುವಂತೆ, ಜನಸಾಮಾನ್ಯರ ಕೊಳ್ಳುವ ಶಕ್ತಿ ಅಲ್ಪ ಮಟ್ಟಿಗಾದರೂ ವೃದ್ಧಿಸಬೇಕಾದರೆ, ಜನರ ಬದುಕಿಗೆ ಒಂದಷ್ಟು ನೆರವಾಗುತ್ತಿರುವ 'ಗ್ಯಾರಂಟಿ'ಗಳು ಮುಂದುವರಿಯಬೇಕು. ಕೇಂದ್ರದಿಂದ ರಾಜ್ಯಕ್ಕೆ ಬರಬೇಕಾದ ತೆರಿಗೆ ಪಾಲು ಮತ್ತು ಅನುದಾನಗಳನ್ನು ಒತ್ತಡದಿಂದ ಪಡೆಯುವ ಮೂಲಕ ಮತ್ತು ತೆರಿಗೆ ಸಂಗ್ರಹದಲ್ಲಿನ ಸೋರಿಕೆ ಮತ್ತು ಭ್ರಷ್ಟಾಚಾರಗಳನ್ನು ತಡೆಯುವ ಮೂಲಕ ಸರ್ಕಾರಕ್ಕೆ ಅಗತ್ಯವಾದ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಳ್ಳಬೇಕು.

ಬಿಜೆಪಿ ಹೋರಾಟದಲ್ಲಿ ಪ್ರಮಾಣಿಕತೆ ಇದೆಯೇ?

ವಿರೋಧ ಪಕ್ಷಗಳು ಸರ್ಕಾರದ ಜನವಿರೋಧಿ ಕ್ರಮಗಳನ್ನು ವಿರೋಧಿಸುವುದು ಸರಿಯಾದ ವಿಧಾನವೇ ಆಗಿದೆ. ಆದರೆ, ಬಿಜೆಪಿಯವರ ಈ ಹೋರಾಟದಲ್ಲಿ ನಿಜವಾಗಿಯೂ ಪ್ರಮಾಣಿಕತೆ ಇದೆಯೇ? ಬೆಲೆ ಏರಿಕೆಯಿಂದ ತತ್ತರಿಸುತ್ತಿರುವ ರಾಜ್ಯದ ಜನರ ನೋವನ್ನು ನಿಜವಾಗಿಯೂ ಅರಿತು, ಜನರನ್ನು ಅದರಿಂದ ಬಿಡುಗಡೆ ಮಾಡಬೇಕು ಎಂಬ ನಿಜವಾದ ಕಾಳಜಿ ಬಿಜೆಪಿಯವರಿಗೆ ಇದೆಯೇ? ಕಳೆದ ಹತ್ತು ವರ್ಷಗಳಿಂದ ಬೆಲೆ ಏರಿಕೆ ವಿರುದ್ದ ಹೋರಾಟ ನಡೆಸದ ಬಿಜೆಪಿಗೆ ಈಗ ಲೋಕಸಭಾ ಚುನಾವಣೆಯಲ್ಲಿ ಒಂದಷ್ಟು ಸ್ಥಾನಗಳನ್ನು ಕಳೆದುಕೊಂಡ ನಂತರ ಜ್ಞಾನೋದಯವಾಯಿತೆ? ಅಥವಾ ಕಾಂಗ್ರೆಸ್ ಆಡಳಿತದ ರಾಜ್ಯ ಸರ್ಕಾರ ತೆರಿಗೆ ಹೆಚ್ಚಳ ಮಾಡಿದ್ದು ಮಾತ್ರವೇ ಜನತೆಗೆ ಹೊರೆ, ಬಿಜೆಪಿ ಆಡಳಿತದ ಕೇಂದ್ರ ಅಥವಾ ಈ ಹಿಂದೆ ರಾಜ್ಯದಲ್ಲಿ ಬಿಜೆಪಿ ಆಡಳಿತದಲ್ಲಿನ ಸಂದರ್ಭದಲ್ಲಿ ಆದ ಬೆಲೆ ಏರಿಕೆ ರಾಜ್ಯದ ಜನತೆಗೆ ಹೊರೆಯಲ್ಲವೆ?

ಬಿಜೆಪಿಯವರಿಗೆ ಖಂಡಿತವಾಗಿಯೂ ಜನಪರ ಕಾಳಜಿ ಇಲ್ಲ. ಅಂತಹ ಕಾಳಜಿ ಅವರಿಗಿದ್ದರೆ, ಮೋದಿ ನೇತೃತ್ವದ ಕೇಂದ್ರ ಸರ್ಕಾರ ಕಳೆದ ಹತ್ತು ವರ್ಷಗಳಲ್ಲಿ ಮಾಡಿರುವ ಪೆಟ್ರೋಲಿಯಂ ಪದಾರ್ಥಗಳ ಬೆಲೆ ಏರಿಕೆಯ ವಿರುದ್ದ, ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಮೋದಿ ಸರ್ಕಾರ ಹಲವು ಪಟ್ಟು ತೆರಿಗೆ ಹೆಚ್ಚಳ ಮಾಡಿ ಬೆಲೆ ಏರಿಕೆಗೆ ಕಾರಣವಾದಾಗ, ಅಡುಗೆ ಅನಿಲದ ಬೆಲೆ ಮೂರು ಪಟ್ಟು ಹೆಚ್ಚಾದಾಗ ರಾಜ್ಯದ ಬಿಜೆಪಿ ನಾಯಕರು ಒಂದೇ ಒಂದು ದ್ವನಿ ಎತ್ತಲಿಲ್ಲವೇಕೆ? ಮೋದಿ ಸರ್ಕಾರದ ತೆರಿಗೆ ಹೆಚ್ಚಳ ಮತ್ತು ಪೆಟ್ರೋಲ್, ಡೀಸೆಲ್, ಅಡುಗೆ ಅನಿಲದ ಬೆಲೆ ಹೆಚ್ಚಳವನ್ನು ಬಿಜೆಪಿಯವರು ಸಮರ್ಥಿಸಿಕೊಂಡಿದ್ದನ್ನು ನೋಡಿದ್ದೇವೆ. ರಾಜ್ಯ ಸರ್ಕಾರದ ತೆರಿಗೆ ಹೆಚ್ಚಳದ ವಿರುದ್ದ ಹೋರಾಟ ನಡೆಸುವ ಇದೇ ಸಂದರ್ಭದಲ್ಲಿಯೇ ಟೋಲ್ ರಸ್ತೆಗಳಲ್ಲಿ ಟೋಲ್ ದರವನ್ನು ಶೇ.5 ರಷ್ಟು ಏರಿಕೆ ಮಾಡಿರುವ ಬಗ್ಗೆ ಬಿಜೆಪಿ ನಾಯಕರು ಮಾತನಾಡಲಿಲ್ಲ.

ಕಚ್ಚಾ ತೈಲದ ಬೆಲೆ ಇಳಿದರೂ ಇಲ್ಲಿ ಇಳಿಕೆಯಾಗಲಿಲ್ಲ

ಕಚ್ಚಾ ತೈಲದ ಆಮದು ಬೆಲೆ ಪ್ರಪಂಚದಾದ್ಯಂತ ಕುಸಿಯುತ್ತಿರುವ ಸಮಯದಲ್ಲಿ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ವಾಸ್ತವವಾಗಿ ಇಂಧನದ ಮೇಲಿನ ತೆರಿಗೆಯನ್ನು ಹೆಚ್ಚಿಸಿತು. ರಷ್ಯಾ–ಉಕ್ರೇನ್ ಯುದ್ಧದ ಸಮಯದಲ್ಲಿಯೂ ಸಹ, ಆಮದು ಮಾಡಿಕೊಂಡ ಅಗ್ಗದ ರಷ್ಯಾದ ಕಚ್ಚಾ ತೈಲದ ಪ್ರಯೋಜನಗಳನ್ನು ಇಂಧನದ ಚಿಲ್ಲರೆ ಮಾರಾಟದ ಬೆಲೆಗೆ ವರ್ಗಾಯಿಸಲಾಗಿಲ್ಲ. ಇದು ಒಟ್ಟಾರೆ ಹಣದುಬ್ಬರ ದರವನ್ನು ನಿರಂತರವಾಗಿ ಹೆಚ್ಚುವಂತೆ ಮಾಡಿತು. ಜನವರಿ 2014 ರಿಂದ ಜನವರಿ 2023 ರವರೆಗೆ ಶೇಕಡಾವಾರು ಆಧಾರದ ಮೇಲೆ ಲೆಕ್ಕಹಾಕಲಾದ ರಾಜ್ಯ ಸರ್ಕಾರದ ವ್ಯಾಟ್‌ಗಿಂತ ಕೇಂದ್ರೀಯ ಅಬಕಾರಿ ಸುಂಕಗಳು ಹೆಚ್ಚಿನ ಪಾಲನ್ನು ಹೊಂದಿವೆ.

ರೂ. 3.56 ಇದ್ದ ಅಬಕಾರಿ ಸುಂಕ 31.83 ಕ್ಕೆ ಏರಿತ್ತು

2014 ರಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಾಗ ಪೆಟ್ರೋಲ್ ಮೇಲಿನ ಅಬಕಾರಿ ಸುಂಕವು ಲೀಟರ್ ಗೆ ರೂ 9.48 ಮತ್ತು ಡೀಸೆಲ್ ಮೇಲೆ ರೂ.3.56 ಆಗಿತ್ತು, ಅದು ಮೇ 2020 ರಲ್ಲಿ ಕ್ರಮವಾಗಿ ರೂ.32.98 ಮತ್ತು ರೂ.31.83 ರ ವರೆಗೂ ಏರಿತ್ತು. ಅಂದರೆ, 2020ರ ಆಗಸ್ಟ್ ವರೆಗಿನ 6 ವರ್ಷಗಳ ಮೋದಿ ಆಡಳಿತದಲ್ಲಿ ಪೆಟ್ರೋಲ್ ಮೇಲಿನ ಅಬಕಾರಿ ಸುಂಕವನ್ನು ಹಿಂದಿನದಕ್ಕಿಂತ 23.50 ರೂ. ಹಾಗೂ ಡೀಸೆಲ್ ಮೇಲಿನ ಅಬಕಾರಿ ಸುಂಕವನ್ನು 28.27 ರೂಪಾಯಿ ಹೆಚ್ಚಳ ಮಾಡಲಾಗಿತ್ತು.

ಆಗಸ್ಟ್ 2022 ರಲ್ಲಿ, ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಖಾತೆ ರಾಜ್ಯ ಸಚಿವ ರಾಮೇಶ್ವರ್ ತೇಲಿ ಅವರು ಸಂಸತ್ತಿಗೆ ನೀಡಿದ ಲಿಖಿತ ಉತ್ತರದ ಪ್ರಕಾರ, ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕವನ್ನು ಕ್ರಮವಾಗಿ 13 ರೂಪಾಯಿ ಮತ್ತು 16 ರೂಪಾಯಿಗಳನ್ನು ನವೆಂಬರ್ 2021 ಮತ್ತು ಮೇ 2022 ರ ನಡುವೆ ಕಡಿತಗೊಳಿಸಲಾಯಿತು.

ಸಚಿವರ ಉತ್ತರದ ಪ್ರಕಾರ ಪೆಟ್ರೋಲ್ ಮೇಲಿನ ಅಬಕಾರಿ ಸುಂಕವು 2022 ರ ಆಗಸ್ಟ್‌ನಲ್ಲಿ ಲೀಟರ್ ಗೆ 19.90 ರೂ ಮತ್ತು ಡೀಸೆಲ್ ಮೇಲೆ 15.80 ರೂ. ಇತ್ತು. ಅಬಕಾರಿ ಸುಂಕ ಕಡಿತದ ಹೊರತಾಗಿಯೂ, ಕಳೆದ 10 ವರ್ಷಗಳ ಹಿಂದಿನ ಅಬಕಾರಿ ತೆರಿಗೆ (9.48 ರೂ.)ಗಿಂತ ಪೆಟ್ರೋಲ್ ಮೇಲೆ 10.42 ರೂ. ಹಾಗೂ ಡೀಸೆಲ್ ಮೇಲೆ (3.56 ರೂ.) 12.24 ರೂ. ಹೆಚ್ಚಾಗಿದೆ. ಅಬಕಾರಿ ಸುಂಕವನ್ನು ಪೆಟ್ರೋಲ್ ಮತ್ತು ಡೀಸೆಲ್ ನ ಮೂಲಬೆಲೆಗೆ ನಿಗದಿ ಮಾಡುವುದರಿಂದ ರಾಜ್ಯ ಸರ್ಕಾರಗಳು ಶೇಕಡಾವಾರು ವಿಧಿಸುವ ವ್ಯಾಟ್ ಸಹಾ ಹೆಚ್ಚಾಗುತ್ತದೆ.

ಅಂತರಾಷ್ಟ್ರೀಯ ಮಾರುಕಟ್ಟೆ ದರಕ್ಕೆ ಅನುಗುಣವಾಗಿ ಎಂದಿದ್ದರು

ಸುಮಾರು ಒಂದು ದಶಕದ ಹಿಂದೆ ಪೆಟ್ರೋಲಿಯಂ ಪದಾರ್ಥಗಳ ಮೇಲಿದ್ದ ಸರ್ಕಾರದ ನಿಯಂತ್ರಣ ಹಿಂಪಡೆದು, ಅವುಗಳ ದರ ನಿಗದಿಯನ್ನು ತೈಲ ಕಂಪನಿಗಳಿಗೆ ಬಿಟ್ಟಾಗ ಸರ್ಕಾರ ಹೇಳಿದ್ದು ಹೀಗೆ: "ಸಾರ್ವಜನಿಕ ವಲಯದ ತೈಲ ಮಾರುಕಟ್ಟೆ ಕಂಪನಿಗಳು (OMC ಗಳು) ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳ ಬಗ್ಗೆ ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳುತ್ತವೆ. ದೇಶದಲ್ಲಿನ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳು ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಆಯಾ ಉತ್ಪನ್ನಗಳ ಬೆಲೆಗೆ ಸಂಬಂಧಿಸಿವೆ."

ಆದರೆ, ಮೋದಿ ಸರ್ಕಾರ ಮಾಡಿದ್ದೇ ಬೇರೆ. ಅಂತರಾಷ್ಟ್ರೀಯ ತೈಲ ಬೆಲೆಯಲ್ಲಿನ ಆ ಕುಸಿತದ ಲಾಭ ಜನರಿಗೆ ತಲುಪುವುದನ್ನು ತಡೆದ ಮೋದಿ ಸರ್ಕಾರವು, ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕವನ್ನು ಹೆಚ್ಚಿಸಿತು. ಕೇಂದ್ರ ಸರ್ಕಾರವು ನವೆಂಬರ್ 2014 ಮತ್ತು ಜನವರಿ 2016 ರ ನಡುವೆ 10 ಸಂದರ್ಭಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕವನ್ನು ಹೆಚ್ಚಿಸಿದೆ.

ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಕುಸಿದಾಗ,

ಪುಟ 10 ಕ್ಕೆ



‘ಮೋಹನ್ ಭಾಗವತ್’ ಹಿತವಚನದ ಹಿಂದೆ...



ಅವರು ನಿರೀಕ್ಷಿಸಿದ 400 ಪ್ಲಸ್ ಸ್ಥಾನಗಳು ಬಾರದಿರುವುದೇ ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರೆಸ್ಸೆಸ್)ದ ಆಕ್ರೋಶಕ್ಕೆ ಕಾರಣವಾಗಿದೆ. 400 ಸ್ಥಾನಗಳು ಬಂದರೆ ಏನೇನು ಮಾಡಬೇಕು ಎಂದು ತಾವು ಹಾಕಿಕೊಂಡಿದ್ದ ಬ್ಲೂ ಪ್ರಿಂಟ್ ಕೈಬಿಡಬೇಕಾಗಿದೆಯಲ್ಲಾ ಎಂಬುದೇ ಅವರ ಚಿಂತೆಗೆ ಕಾರಣ. ಈಗ ಅದರ ನಾಯಕರು ಇದ್ದಕ್ಕಿದ್ದಂತೆ ಮಣಿಪುರದ ಬೆಂಕಿಯ ಬಗ್ಗೆ ಮಾತನಾಡುತ್ತಿರುವುದು ಅಚ್ಚರಿ ಮೂಡಿಸಿದೆ! ಸಾಲದೆಂಬಂತೆ "ರಾಜಕೀಯದಲ್ಲಿ ಎದುರಿನ ಪಕ್ಷ ಯಾವಾಗಲೂ ವಿರೋಧ ಪಕ್ಷವಾಗುತ್ತದೆಯೇ ಹೊರತು ಶತ್ರುಪಕ್ಷ ಅಲ್ಲ. ಎದುರಾಳಿಯನ್ನು ವಿರೋಧಿಗಳಂತೆ ನೋಡಬೇಡಿ’’ ಎಂದೂ ಭಾಗವತ್ ಬಿಜೆಪಿಗೆ ಹಿತವಚನ ನೀಡುತ್ತಾರೆ!! ಇವೆಲ್ಲಾ ಈಗ ಯಾಕೆ? ಬಿಜೆಪಿಗೆ ಆದ ಸೋಲಿನಿಂದ ತಾನು ತಪ್ಪಿಸಿಕೊಳ್ಳಲೆಂದೇ? ಅಥವಾ ತಪ್ಪು ಬಿಜೆಪಿಯದ್ದೇ ಹೊರತು ತಮ್ಮದಲ್ಲ ಎಂದು ಹೇಳಿಕೊಳ್ಳುವುದಕ್ಕಾಗಿಯೇ? ಬಹುಶಃ ಜನರ ವಿಶ್ವಾಸ ಕಳೆದುಕೊಳ್ಳುತ್ತಿದ್ದೇವೆ ಎಂಬ ಸತ್ಯವನ್ನು ಮರೆಮಾಚಲು ಹೊರಟಿದ್ದಾರೇನೋ..!

ಸಿಚಿ

“ಭಾರತೀಯ ಜೀವನ ವಿಧಾನದಲ್ಲಿ ಘನತೆ ಎನ್ನುವುದು ಒಂದು ಭಾಗ. ಆ ಘನತೆ ನಮ್ಮ ಸಂಸ್ಕೃತಿ. ನಮ್ಮ ಧರ್ಮ. ಸೇವಕನಿಗೆ ಅಹಂಕಾರ ಇರಬಾರದು, ನಡವಳಿಕೆಯಲ್ಲಿ ಸಭ್ಯತೆ, ಘನತೆ ಇರಬೇಕು. ಸಭ್ಯತೆಯನ್ನು ಪಾಲಿಸುವವನು ಕೆಲಸ ಮಾಡಿಕೊಂಡೇ ಹೋಗುತ್ತಾನೆ ವಿನಃ ನಾನು ಮಾಡಿದೆನು ಎಂದು ಅಹಂಕಾರ ಪಡುವುದಿಲ್ಲ. ಹಾಗೆಯೇ ಎಲ್ಲವನ್ನೂ ನಾನೇ ಎಂದು ಅಹಂಕಾರ ಪಡುವವನಿಗೆ ನಾನು ಪ್ರಜಾಸೇವಕ ಎಂದು ಹೇಳುವ ಅರ್ಹತೆ ಇಲ್ಲ...”

ಕೇಂದ್ರದಲ್ಲಿ ಹೊಸ ಸಮ್ಮಿಶ್ರ ಸರ್ಕಾರ ರಚನೆಯಾಗಿ, ಹೊಸ ಸಚಿವ ಸಂಪುಟ ರಚನೆಯಾಗುತ್ತಿದ್ದ ಸಂದರ್ಭದಲ್ಲಿ, ಆರೆಸ್ಸೆಸ್ ನ ಸರಸಂಘಚಾಲಕ ಮೋಹನ್ ಭಾಗವತ್ ಮಾಡಿದ ವ್ಯಾಖ್ಯಾನಗಳಿವು. ಈ ಮಾತುಗಳು ಯಾರನ್ನು ಉದ್ದೇಶಿಸಿವೆ? ಅವರು ಅಷ್ಟಕ್ಕೇ ನಿಲ್ಲಲಿಲ್ಲ. “ವರ್ಷಗಳಿಂದ ಮಣಿಪುರ ಶಾಂತಿಗಾಗಿ ಎದುರು ನೋಡುತ್ತಿದೆ. 10 ವರ್ಷಗಳಿಂದ ಅಲ್ಲಿ ಶಾಂತಿ ನೆಲೆಸಿತ್ತು. ಹಳೆಯ ಬಂದೂಕು ಸಂಸ್ಕೃತಿ ಮುಗಿದಿದೆ. ಆದರೆ ಒಂದು ವರ್ಷದ ಹಿಂದೆ ಅಲ್ಲಿ ಹೇಗೆ ಅಶಾಂತಿ ಉಂಟಾಯಿತೋ ಗೊತ್ತಿಲ್ಲ, ಆದರೆ ಆ ಬೆಂಕಿ ಇನ್ನೂ ಉರಿಯುತ್ತಿದೆ..." ಎಂದು ಹೇಳಿದರು. ಇವರು ಯಾರ ಬಗ್ಗೆ ಹೇಳುತ್ತಿದ್ದಾರೆಂದು ಈಗ ಅರ್ಥವಾಗಿರಬೇಕಲ್ಲವೇ?!

ಭಾಗವತ್ ಇನ್ನೂ ಮುಂದುವರಿದು: "ರಾಜಕೀಯದಲ್ಲಿ ಎದುರಿನ ಪಕ್ಷ ಯಾವಾಗಲೂ ವಿರೋಧ ಪಕ್ಷವಾಗುತ್ತದೆಯೇ ಹೊರತು ಶತ್ರುಪಕ್ಷ ಅಲ್ಲ. ಎದುರಾಳಿಯನ್ನು ವಿರೋಧಿಗಳಂತೆ ನೋಡಬೇಡಿ. ಅವರು ಇನ್ನೊಂದು ಕೋನವನ್ನು ತೋರಿಸುತ್ತಾರೆ. ವ್ಯವಸ್ಥೆಯಲ್ಲಿ ಆ ಅವಕಾಶ ಸದಾ ಇರಬೇಕು. ಎರಡು ಪಕ್ಷಗಳ ನಡುವೆ ಇರಬೇಕಿರುವುದು ಪೈಪೋಟಿಯೇ ವಿನಃ ಯುದ್ಧವಲ್ಲ” ಎಂಬ ಹಿತವಚನವನ್ನೂ ನೀಡಿದರು!!

ರಾಷ್ಟ್ರೀಯ ಸ್ವಯಂಸೇವಕ ಸಂಘ ಸಿದ್ಧಾಂತಿ ಇಂದ್ರೇಶ್ ಕುಮಾರ್ ಅವರು “ಹೆಚ್ಚು ಅಹಂಕಾರ ತೋರಿದ ಆಡಳಿತ ಪಕ್ಷ ಬಹುಮತದ ಕೊರತೆ ಅನುಭವಿಸಿದೆ. ರಾಮ ಅವರನ್ನು 241 ಸ್ಥಾನಕ್ಕೆ ನಿಲ್ಲಿಸಿದ” ಎಂದಿರುತ್ತಾರೆ.

ಸಂಘ ಮತ್ತು ಅದರ ಎಲ್ಲಾ ಪರಿವಾರವನ್ನು ಬದಿಗೆ ಸರಿಸಿ "ಮೋದಿ ಗ್ಯಾರಂಟಿ" ಎಂದು ಘೋಷಿಸಿದವರು ಯಾರು? ಸುಳ್ಳು, ಅರ್ಧಸತ್ಯ, ವಿಭಜಕ, ದ್ವೇಷಪೂರಿತ ಭಾಷಣಗಳಿಂದ ವಿಷವನ್ನು ಉಗುಳಿದ್ದು ಯಾರು? ಮಣಿಪುರದ ಹತ್ಯಾಕಾಂಡವನ್ನು ಕಣ್ಣೆತ್ತಿಯೂ ನೋಡದೆ ಇದ್ದವರು ಯಾರು? ಕೇಸುಗಳ ಮೂಲಕ, ಜೈಲಿಗೆ ಕಳುಹಿಸಿ, ವಿವಿಧ ರೀತಿಯಲ್ಲಿ ಕಿರುಕುಳ ನೀಡಿ, ಹಲವರನ್ನು ಭಯಭೀತರನ್ನಾಗಿಸಿದ್ದು, ಕೊನೆಗೆ ಕೆಲವು ಪ್ರತಿಪಕ್ಷಗಳ ಬ್ಯಾಂಕ್ ಖಾತೆಗಳನ್ನು ಸ್ತಬ್ಧಗೊಳಿಸಿದ್ದು... ಚುನಾವಣೆಯಲ್ಲಿ ಪ್ರತಿ ಪಕ್ಷಗಳು ಹೋರಾಡುವ ಅವಕಾಶವೇ ಇಲ್ಲದಂತೆ ಮಾಡುವಲ್ಲಿ ಯಾರ ಕುತಂತ್ರವಿದೆ? ಎಲ್ಲವೂ ಬಹಿರಂಗ ರಹಸ್ಯವೇ ಅಲ್ಲವೇ. ಆದ್ದರಿಂದ ಭಾಗವತ್ ಅವರ ಆಕ್ರೋಶ ಯಾರನ್ನು ಉದ್ದೇಶಿಸಿದೆ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಮೋದಿ ಅಥವಾ ಬಿಜೆಪಿಯ ಯಾವುದೇ ನಾಯಕರಾದರೂ ಆರೆಸ್ಸೆಸ್ ಒಪ್ಪಿಗೆ ಪಡೆಯದೇ ಇವೆಲ್ಲವನ್ನೂ ಮಾಡಲಾದೀತೇ? ಅಥವಾ ಜನರು ಇದನ್ನೆಲ್ಲಾ ನಂಬಬೇಕು ಎನ್ನುತ್ತಾರೆಯೇ?

ಸೋಲುವ ಮುನ್ಸೂಚನೆ ಸಿಕ್ಕಿತ್ತು

ಚುನಾವಣೆ ಸಮಯದಲ್ಲಿ ಹೊಸ ರೀತಿಯ ಪ್ರಚಾರ ಮುನ್ನೆಲೆಗೆ ಬಂದಿತ್ತು. ಮೋದಿ ತಂಡ ಮತ್ತು ಆರೆಸ್ಸೆಸ್ ನಾಯಕತ್ವದ ನಡುವೆ ಭಿನ್ನಾಭಿಪ್ರಾಯ ಹೆಚ್ಚುತ್ತಿದೆ ಎಂಬುದು ಆ ಪ್ರಚಾರದ ಸಾರಾಂಶ. ಈ ಬಾರಿ ಮೋದಿಯವರು ಕೇಳುತ್ತಿರುವ 400 ಸ್ಥಾನಗಳನ್ನಲ್ಲ, ಅವರು ಹೇಗೆ ಬಹುಮತ ಪಡೆಯುತ್ತಾರೆ ಎಂಬುದನ್ನು ಕಾದು ನೋಡಬೇಕಿದೆ ಎಂದು ಎರಡನೇ ಶ್ರೇಯಾಂಕದ ಆರೆಸ್ಸೆಸ್ ನಾಯಕರೊಬ್ಬರು ಪತ್ರಿಕಾಗೋಷ್ಠಿಯಲ್ಲಿ ಸವಾಲು ಹಾಕಿರುವ ವಿಡಿಯೋ ವೈರಲ್ ಆಗುವಂತೆ ನೋಡಿಕೊಂಡರು. ಆರೆಸ್ಸೆಸ್ ಅನ್ನು ಮರೆತು ಮೋದಿಯವರು ತಮ್ಮ ಸ್ವಂತ ಇಮೇಜನ್ನು ಪ್ರಚಾರ ಮಾಡಿಕೊಳ್ಳುತ್ತಿದ್ದಾರೆ,... ಹೀಗೆ ಪ್ರಚಾರ ನಡೆಯಿತು.

ಆರೆಸ್ಸೆಸ್ ಸಹಾಯವಿಲ್ಲದೆ ಬಿಜೆಪಿ...?

ಆರೆಸ್ಸೆಸ್ ಮತ್ತು ಬಿಜೆಪಿ ನಡುವಿನ ಸಂಬಂಧದ ಬಗ್ಗೆ ವಾಜಪೇಯಿ ಯುಗ ಮತ್ತು ಮೋದಿ ಯುಗ ನಡುವಿನ ವ್ಯತ್ಯಾಸದ ಬಗ್ಗೆ ಕಳೆದ ವಾರ ಇಂಡಿಯನ್ ಎಕ್ಸ್‌ಪ್ರೆಸ್ ಮ್ಯಾಗಜೀನ್ ನ ಪ್ರಶ್ನೆಗೆ ಪ್ರತಿಕ್ರಿಯಿಸಿದ ಜೆಪಿ ನಡ್ಡಾ, "ಬಿಜೆಪಿ ಶಕ್ತಿ ಕಡಿಮೆ ಇದ್ದ ಆರಂಭದಲ್ಲಿ ಆರೆಸ್ಸೆಸ್ ಅಗತ್ಯವಿತ್ತು. ಈಗ ಬಿಜೆಪಿ ಬಲ ಹೆಚ್ಚಿದೆ. ಹಾಗಾಗಿ ಆರೆಸ್ಸೆಸ್ ಸಹಾಯವಿಲ್ಲದೆ ಬಿಜೆಪಿ ಕಾರ್ಯ ನಿರ್ವಹಿಸಲಿದೆ" ಎಂದರು. ಬಿಜೆಪಿ ರಾಜಕೀಯ ಕ್ಷೇತ್ರದಲ್ಲಿ ಮತ್ತು ಆರೆಸ್ಸೆಸ್ ಸೈದ್ಧಾಂತಿಕ ಕ್ಷೇತ್ರದಲ್ಲಿ ಕೆಲಸ ಮಾಡುವ ಸಂಘಟನೆಯಾಗಿದೆ ಎಂದು ಹೇಳಿದರು. ನಡ್ಡಾ ಅವರ ಪ್ರತಿಕ್ರಿಯೆಗಳು ಎರಡು ಅಂಶಗಳನ್ನು ಪ್ರಸ್ತುತಪಡಿಸುತ್ತವೆ. ಬಿಜೆಪಿಗೆ ಆರೆಸ್ಸೆಸ್ ಬೆಂಬಲ ಅಗತ್ಯವಿಲ್ಲ ಎಂಬುದು ಒಂದು. ಎರಡನೆಯದು ಆರೆಸ್ಸೆಸ್ ಪುರೋಹಿತಶಾಹಿ ಸಂಘಟನೆಯಲ್ಲ! ಇದಕ್ಕೆ ವ್ಯತಿರಿಕ್ತವಾಗಿ, ಬಿಜೆಪಿ ರಾಜಕೀಯ ಸಂಘಟನೆಯಂತೆ, ಆರೆಸ್ಸೆಸ್ ಸೈದ್ಧಾಂತಿಕ ಸಂಘಟನೆಯಾಗಿದೆ. ಇದುವರೆಗೆ ಬಿಜೆಪಿಯ ಯಾವ ನಾಯಕರೂ ಆರೆಸ್ಸೆಸ್ ಸಂಘಟನೆಯನ್ನು ಕೀಳಾಗಿ ಕಂಡಿಲ್ಲ. ಆರೆಸ್ಸೆಸ್ ಅನುಮತಿ ಇಲ್ಲದೆ ನಡ್ಡಾ ಈ ರೀತಿ ಮಾತನಾಡುವ ಸಾಧ್ಯತೆ ಇಲ್ಲ. ಇದು, ಆರೆಸ್ಸೆಸ್ ಪ್ರಚಾರದಲ್ಲಿ ತೊಡಗಿದ್ದರೆ ಬಿಜೆಪಿ 400 ಸ್ಥಾನಗಳನ್ನು ಗೆಲ್ಲುತ್ತಿತ್ತು ಎಂದು ಬಿಂಬಿಸುವ ಪ್ರಯತ್ನವಲ್ಲದೆ ಬೇರೇನಲ್ಲ.

ಭಾಗವತ್ ಹೇಳಿದ್ದು ಅಕ್ಷರಶಃ ಸತ್ಯವಾದರೂ...

ಭಾಗವತ್ ಅವರ ಇಂತಹ ‘ಆಕ್ರಮಣ’ದ ಮಾತುಗಳಲ್ಲಿ ಇರುವ ಅಂಶಗಳು ಅಕ್ಷರಶಃ ಸತ್ಯವಾದರೂ, ಇದರಲ್ಲಿ ಪ್ರಾಮಾಣಿಕತೆಯಂತೂ ಕಾಣುವುದಿಲ್ಲ. ಯಾಕೆಂದರೆ ಇದೆಲ್ಲಾ ಅವರ ಒಳಗೊಳ್ಳುವಿಕೆ ಇಲ್ಲದೆ ನಡೆದಿದೆಯೇ? ಹಾಗೆ ನಡೆಯಲು ಸಾಧ್ಯವಿದೆಯೇ? ಆರೆಸ್ಸೆಸ್ ನ ಕೈವಾಡವಿಲ್ಲದೆ ಮೋದಿಯವರು ತಮ್ಮನ್ನು ತಾವು ದೈವಾಂಶಸಂಭೂತ ಎಂದು ಘೋಷಿಸಿಕೊಂಡಿದ್ದಾರೆಯೇ? ಆದರೂ ಈ ಹತ್ತು ವರ್ಷದಿಂದ ಇಲ್ಲದಿದ್ದದ್ದು ಇವರಿಗೆ ಫಲಿತಾಂಶ ಬಂದ ನಂತರ ಏಕೆ ಜ್ಞಾನೋದಯವಾಗಿದೆ? ಜೂನ್ 4 ರ ಮೊದಲು, ಯಾಕೆ ಈ ರೀತಿಯ ಹಿತೋಪದೇಶದಲ್ಲಿ ದೋಷಾರೋಪಣೆ ಹೊರಗೆ ಬರಲಿಲ್ಲ? ಅಸಲಿಗೆ ವಿಭಜಕ ದ್ವೇಷಸಿದ್ಧಾಂತ ಮತ್ತು ಫ್ಯಾಸಿಸ್ಟ್ ಪ್ರವೃತ್ತಿಗಳ ಮೂಲ ಆರೆಸ್ಸೆಸ್ ನವರೇ ಅಲ್ಲವೇ?

ಬಿಜೆಪಿ ಆರೆಸ್ಸೆಸ್ ನ ರಾಜಕೀಯ ವಿಭಾಗ

ವಾಸ್ತವವಾಗಿ, ಆರೆಸ್ಸೆಸ್ ಅಡಿಯಲ್ಲಿರುವ 250 ಸಂಸ್ಥೆಗಳಲ್ಲಿ ಬಿಜೆಪಿಯೂ ಒಂದು. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ, ಬಿಜೆಪಿ ಎನ್ನುವುದು ಆರೆಸ್ಸೆಸ್ ನ ರಾಜಕೀಯ ವಿಭಾಗ ಮಾತ್ರ. ಬಿಜೆಪಿಗೆ ಸೈದ್ಧಾಂತಿಕ ನಾಯಕತ್ವ ನೀಡುವುದು ಆರೆಸ್ಸೆಸ್. ಅದಕ್ಕೆ ಸರ್ವೋಚ್ಚ ನಾಯಕ ಸರಸಂಘಚಾಲಕ. ಆದ್ದರಿಂದ ಬಿಜೆಪಿ ಮತ್ತು ಆರೆಸ್ಸೆಸ್ ಅನ್ನು ಬೇರೆಬೇರೆಯಾಗಿ ನೋಡಲಾಗುವುದಿಲ್ಲ. ಮೇಲಾಗಿ ಈ ಸರಸಂಘಚಾಲಕರ ಎದುರು ಮತ್ತು ಅವರ ಪ್ರಮುಖ ಸ್ಥಾನವಾದ ನಾಗ್ಪುರ ಕೇಂದ್ರಕ್ಕೆ ಎದುರು ಬಿಜೆಪಿಯಲ್ಲಿ ಯಾರೂ ನಿಲ್ಲುವಂತಿಲ್ಲ ಎಂಬ ಪ್ರತೀತಿ ಇದೆ. ಹೀಗಿರುವಾಗ, ಸಂಘದ ಈ ಸರ್ವೋಚ್ಚ ನಾಯಕ ಈಗ ಯಾಕಾಗಿ ಚಿಂತಿಸುತ್ತಿದ್ದಾರೆ? ನಾಗ್ಪುರಕ್ಕೂ ದೆಹಲಿಗೂ ನಡುವೆ ಅಂತರ ಹೆಚ್ಚುತ್ತಿದೆಯೇ? ನಾಗ್ಪುರದ ಆಧಿಪತ್ಯಕ್ಕೆ ಸವಾಲಾಗಿ ದೆಹಲಿಯಲ್ಲಿ ಅಧಿಕಾರ ಬಲವರ್ಧನೆಯಾಗುತ್ತಿದೆಯೇ? ಇದನ್ನು ಯಾರಾದರೂ ನಂಬಬಹುದೇ?

400 ಪ್ಲಸ್ ಬಾರದಿರುವುದೇ ಆಕ್ರೋಶಕ್ಕೆ ಕಾರಣ

ಇನ್ನು ಆರೆಸ್ಸೆಸ್ ಅಧಿಕೃತ ನಿಯತಕಾಲಿಕೆ ‘ಆರ್ಗನೈಸರ್’ ಪ್ರಕಟಿಸಿದ ಒಂದು ಲೇಖನವನ್ನು ಕೂಡಾ ಇಲ್ಲಿ ಉಲ್ಲೇಖಿಸಬಹುದಾಗಿದೆ. ಸಂಘದ ಹಿರಿಯ ನಾಯಕ ರತನ್ ಶಾರ್ದ ಅವರು ಬರೆದಿರುವ ಈ ಲೇಖನದಲ್ಲಿ ಅತಿಯಾದ ಆತ್ಮವಿಶ್ವಾಸದಿಂದಾಗಿಯೇ ಬಿಜೆಪಿ ಹೆಚ್ಚು ಸ್ಥಾನ ಗಳಿಸಲಾಗಿಲ್ಲ ಎಂದು ಪ್ರಸ್ತಾಪಿಸಿದ್ದಾರೆ. ವಾಸ್ತವವಾಗಿ ಬಿಜೆಪಿ ಅಧಿಕಾರ ಕಳೆದುಕೊಂಡಿಲ್ಲ. ಅವರು ನಿರೀಕ್ಷಿಸಿದ 400 ಪ್ಲಸ್ ಬಾರದಿರುವುದೇ ಅವರ ಆಕ್ರೋಶಕ್ಕೆ ಕಾರಣವಾಗಿದೆ. 400 ಸ್ಥಾನಗಳು ಬಂದರೆ ಏನೇನು ಮಾಡಬೇಕು ಎಂದು ತಾವು ಹಾಕಿಕೊಂಡಿದ್ದ ಬ್ಲೂ ಪ್ರಿಂಟ್ ಕೈಬಿಡಬೇಕಾಗಿದೆಯಲ್ಲಾ ಎಂಬುದೇ ಅವರ ಚಿಂತೆಗೆ ಕಾರಣ. ಮಣಿಪುರದಲ್ಲಿ ಮೈಥಿಸ್ ಮತ್ತು ಕುಕಿಗಳ ನಡುವೆ ಘರ್ಷಣೆಯನ್ನು ಸೃಷ್ಟಿಸುವುದು ಆರೆಸ್ಸೆಸ್ ಆಟದ ಯೋಜನೆಯ ಒಳಸಂಚಿನ ಭಾಗವೇ ಆಗಿದೆ. ಈಗ ಆರೆಸ್ಸೆಸ್ ನಾಯಕರು ಇದ್ದಕ್ಕಿದ್ದಂತೆ ಮಣಿಪುರದ ಅಶಾಂತಿಯ ಬಗ್ಗೆ ಮಾತನಾಡುತ್ತಿರುವುದು ಅಚ್ಚರಿ ಮೂಡಿಸಿದೆ!

ವಾಸ್ತವವಾಗಿ, ಸಂಘದ ಹಿರಿಯ ನಾಯಕರ ‘ಕಾಳಜಿ’ ಹೊಂದಿರುವಂತೆ ತೋರಿಕೆಗಳು ಇದೇ ಮೊದಲನೆಯದೇನಲ್ಲ. ಇದು ಹತ್ತು ವರ್ಷಗಳ ಹಿಂದೆಯೇ ಪ್ರಾರಂಭವಾಗಿದೆ. ಕೇಸರಿ ಹಿರಿಯರ ಕಣ್ಣೆದುರೇ ಅವರ ಕಣ್ ಸನ್ನೆಯಲ್ಲೇ ಎಲ್ಲವೂ ನಡೆಯುತ್ತಿವೆ. ಆದರೆ ಈ ಕೆಲಸಗಳು ಈಗಷ್ಟೇ ಶುರುವಾಗಿದ್ದು, ಈಗಷ್ಟೇ ಗುರುತಿಸಿದವರಂತೆ ಸಂಘದ ಹಿರಿಯರು ಮಾತನಾಡುತ್ತಿರುವುದು ವಿಪರ್ಯಾಸ. ಇಷ್ಟಕ್ಕೂ ಈ ರೀತಿಯ ಗದ್ದಲವೆಲ್ಲಾ ಯಾಕೆ? ಬಿಜೆಪಿಗೆ ಆದ ಸೋಲಿನಿಂದ ತಾನು ತಪ್ಪಿಸಿಕೊಳ್ಳಲೆಂದೇ? ಅಥವಾ ತಪ್ಪು ಬಿಜೆಪಿಯದ್ದೇ ಹೊರತು ತಮ್ಮದಲ್ಲ ಎಂದು ಹೇಳಿಕೊಳ್ಳುವುದಕ್ಕಾಗಿಯೇ? ಬಹುಶಃ ಜನರ ವಿಶ್ವಾಸ ಕಳೆದುಕೊಳ್ಳುತ್ತಿದ್ದೇವೆ ಎಂಬ ಸತ್ಯವನ್ನು ಮರೆಮಾಚಲು ಹೊರಟಿದ್ದಾರೇನೋ..!

ಆರ್‌ಎಸ್‌ಎಸ್ ಗೆ ಹೊಸದೇನಲ್ಲ

ಇದು ಆರ್‌ಎಸ್‌ಎಸ್ ಗೆ ಹೊಸದೇನಲ್ಲ. ಆ ಸಂಘ ಕಪಟತನದಿಂದಲೇ ಹುಟ್ಟಿದ್ದು. ಸಾವರ್ಕರ್ ಅಂಡಮಾನ್ ಜೈಲಿನಲ್ಲಿದ್ದಾಗ ಕ್ಷಮೆಯಾಚನೆಗಾಗಿ ಬರೆದ ಪತ್ರಗಳು, ಅದರಲ್ಲಿ ಬ್ರಿಟಿಷ್ ವಸಾಹತುಶಾಹಿ ಆಡಳಿತಗಾರರಿಗೆ ಅವರು ತೋರಿದ ರಾಜಭಕ್ತಿ ಈ ಕಪಟತನಕ್ಕೆ ಮೊದಲ ಉದಾಹರಣೆಯಾಗಿದೆ. ಜನರಲ್ಲಿ ಸ್ವಾತಂತ್ರ್ಯದ ಹಂಬಲ ಇದ್ದುದರಿಂದ ಅವರು ಮೊದಲು ಸ್ವಾತಂತ್ರ್ಯ ಹೋರಾಟದ ಕ್ಷೇತ್ರಕ್ಕೆ ಪ್ರವೇಶಿಸಿದರು. ಬಂಧನವನ್ನು ಅನುಭವಿಸಿ ಹೊರ ಬಂದ ಸಾವರ್ಕರ್ ನಂತರ ವಸಾಹತುಶಾಹಿ ದೊರೆಗಳಿಗೆ ಸೇವಕರಾದರು. ಆರ್.ಎಸ್.ಎಸ್. ನ ಮೂಲ ಸಂಸ್ಥಾಪಕ ಮತ್ತು ಸಿದ್ಧಾಂತವಾದಿ ಎಂದು ಪರಿಗಣಿಸಲ್ಪಟ್ಟಿರುವ ಸಾವರ್ಕರ್ ತೋರಿದ ಬೂಟಾಟಿಕೆ ಆರ್.ಎಸ್.ಎಸ್. ಸಂಘಟನೆಯ ನರನಾಡಿಗಳಲ್ಲಿ ಬೆರೆತುಹೋಗಿದೆ.

ಮುಸ್ಲಿಂ ಲೀಗ್ ಜೊತೆಗೆ ಅಧಿಕಾರ ಹಂಚಿಕೊಂಡಿತ್ತು

ಜನರಲ್ಲಿ ಮುಸ್ಲಿಮರ ವಿರುದ್ಧ ವಿಷಪೂರಿತ ಪ್ರಚಾರವನ್ನು ಹರಡಿದ ಸಂಘಪರಿವಾರ, ಸಿಂದ್ ಮತ್ತು ಬಂಗಾಳದ ಪ್ರಾಂತೀಯ ಸರ್ಕಾರಗಳಲ್ಲಿ (Provincial Government) 1946 ರಲ್ಲಿ ಮುಸ್ಲಿಂ ಲೀಗ್ ಜೊತೆಗೆ ಅಧಿಕಾರವನ್ನು ಹಂಚಿಕೊಂಡ ಹಿಂದೂ ಮಹಾಸಭಾ ಸಮ್ಮಿಶ್ರ ಸರ್ಕಾರಗಳನ್ನು ರಚಿಸಿತು.

ಅಖಂಡ ಭಾರತದ ಬಗ್ಗೆ ಪ್ರಚಾರ ಮಾಡಿ ಅಫ್ಘಾನಿಸ್ತಾನದಿಂದ ಬರ್ಮಾದವರೆಗೆ ಇರುವ ಇಡೀ ಉಪಖಂಡ ಎಂದಿಗೂ ಹಿಂದೂ ದೇಶ ಎಂದು ಸುಳ್ಳು ಪ್ರಚಾರ ಮಾಡುವುದು ಆರ್.ಎಸ್.ಎಸ್. ನೀತಿಯಾಗಿದೆ. ಆದರೆ ಮುಸ್ಲಿಮ್ ಲೀಗ್ ನಂತೆ ಎರಡು ರಾಷ್ಟ್ರಗಳ ಸಿದ್ಧಾಂತವನ್ನು ಬಲಪಡಿಸಿ ದೇಶದ ವಿಭಜನೆಗೆ ಕೊಡುಗೆ ನೀಡಿತು.

ದೇಶದ ವಿಭಜನೆಯ ನಂತರ, ಆರ್.ಎಸ್. ➚

ಪ್ರಗತಿಪರ ಚಳುವಳಿಯ ಕಾಲದ ಪ್ರಮುಖ ಸಾಹಿತಿ ನಿರಂಜನರ ಜನ್ಮ ಶತಮಾನೋತ್ಸವ ವರ್ಷವಿದು. ಜೂನ್ 15, 1924 ರಲ್ಲಿ ಜನಿಸಿದ ಕುಳಕುಂದ ಶಿವರಾಯರು 'ನಿರಂಜನ'ರಾಗಿ ಕನ್ನಡ ಸಾಹಿತ್ಯಕ್ಕೆ ಮರೆಯಲಾರದ ಕೊಡುಗೆ ಕೊಟ್ಟವರು. 'ಚಿರಸ್ಮರಣೆ'ಯ ಲೇಖಕನ ಅಕ್ಷರ ಸ್ಮರಣೆ ಇದು.

ಚಿರಸ್ಮರಣೆಯ ಕನ್ನಡಿಯಲ್ಲಿ ನಿರಂಜನ

ಜಿ.ಎನ್. ಮೋಹನ್

ನಾನು ಮೊದಲ ಬಾರಿ ಮಂಗಳೂರಿಗೆ ಕಾಲಿಟ್ಟ ತಕ್ಷಣ ನೋಡಲು ಬಯಸಿದ್ದು ಅಲ್ಲಿನ ಕೋರ್ಟು ಹಾಗೂ ಜೈಲನ್ನು. ಇದನ್ನು ತಿಳಿದಾಕ್ಷಣ ಮಂಗಳೂರಿಗೆ ಮೊದಲ ಬಾರಿ ಬರುತ್ತಿದ್ದಾನೆ ಎಂದು ಅಲ್ಲಿನ ಪಣಂಬೂರು ಬೀಚ್, ಮಂಗಳಾದೇವಿ–ಕದ್ರಿ ದೇಗುಲ, ಸೋಮೇಶ್ವರದ ಕಡಲು ತೋರಿಸಲು ಉತ್ಸಾಹದಿಂದ ಕಾಯುತ್ತಿದ್ದ ಗೆಳೆಯರು ಗೊಂದಲಕ್ಕೆ ಬಿದ್ದರು. ಆದರೆ ಆ ಗೊಂದಲ ನನಗೆ ಖಂಡಿತಾ ಇರಲಿಲ್ಲ, ನಾನು ಮೊದಲು ನೋಡಬೇಕಾಗಿದ್ದದ್ದೇ ಆ ಎರಡು ಸ್ಥಳಗಳನ್ನು.

ಅದಕ್ಕೆ ಕಾರಣವಿತ್ತು. ನಿರಂಜನರು ಬರೆದ 'ಚಿರಸ್ಮರಣೆ' ನನ್ನನ್ನು ಇನ್ನಿಲ್ಲದಂತೆ ಕಾಡಿತ್ತು. ಆ ಅಪ್ಪು, ಆ ಚಿರಕುಂಡ, ಕುಞಂಬು, ಅಬೂಬಕರ್, ಮಾಸ್ತರ್, ಜಾನಕಿ, ಆ ಕಣ್ಣ ಪಂಡಿತ ಎಲ್ಲರೂ ನನ್ನೊಳಗೆ ಸದ್ದಿಲ್ಲದಂತೆ ಬಂದು ಸೇರಿಕೊಂಡಿದ್ದರು. ಅಕ್ಷರ ಗೊತ್ತಿಲ್ಲದ, ಮೈತುಂಬಾ ಮುಚ್ಚಿ ಗೊತ್ತಿಲ್ಲದ, 'ತಂಬುರಾನೆ' ಎಂದು ಒಡೆಯನನ್ನು ಕರೆದು ಗೊತ್ತಿದ್ದ ತಮ್ಮನ್ನು 'ಅಡಿಯನ್' ಎಂದು ಕರೆಸಿಕೊಂಡು ಮಾತ್ರ ಗೊತ್ತಿದ್ದ, ಒಂದು ಬುಡ್ಡಿ ದೀಪ ಹಚ್ಚಲು ಹನಿ ಸೀಮೆಎಣ್ಣೆಗೂ ಒದ್ದಾಡುತ್ತಿದ್ದ, ಮನೆಯ ಮುಂದಿನ ಬಾವಿಯಿಂದ ನೀರು ಸೇದಲೂ ಆಗದಂತೆ ಬಹಿಷ್ಕಾರಕ್ಕೆ ಒಳಗಾಗಿದ್ದ ಊರು ತನ್ನ ಆಕ್ರೋಶವನ್ನೆಲ್ಲಾ ಮುಷ್ಟಿಗಿಳಿಸಿಕೊಂಡು ಎದ್ದು ನಿಂತಿತ್ತು. ಅಕ್ಷರ ಗೊತ್ತಿಲ್ಲದ ಕಯ್ಯೂರಿನ ಜನತೆ ಬ್ರಿಟನ್ನಿನವರೆಗೂ ಸುದ್ದಿಯಾಗಿಬಿಟ್ಟರು. ಒಬ್ಬ ಪೊಲೀಸ್ ನೀರಿಗೆ ಹಾರಿ ಸತ್ತಿದ್ದೇ ನೆಪವಾಗಿ ಪೊಲೀಸರ ದಂಡು 'ಜನ್ಮಿ' ಎನಿಸಿಕೊಂಡ ಕಯ್ಯೂರ ಜಮೀನ್ದಾರರ ಜೊತೆ ಕೈಜೋಡಿಸಿ ಬೆಳಕಿಗಾಗಿ ಹಂಬಲಿಸಿದವರನ್ನು ಕಂಡ ಕಂಡಲ್ಲಿ ಹೊಸಕಿ ಹಾಕಲು ಆರಂಭಿಸಿದರು. ನಾಲ್ವರು ರೈತ ಹೋರಾಟಗಾರರನ್ನು ಗಲ್ಲಿಗೇರಿಸಲಾಯಿತು.

ಇನ್ನೂ ಕಾಲೇಜು ಓದುತ್ತಿದ್ದ ದಿನಗಳಲ್ಲಿ ಅಣ್ಣನ ಕಪಾಟಿನಿಂದ ಇಳಿಸಿಕೊಂಡ 'ಚಿರಸ್ಮರಣೆ' ನನ್ನನ್ನು ಇನ್ನಿಲ್ಲದಂತೆ ಕದಡಿಹಾಕಿತ್ತು. ನಾವೂ ವಿದ್ಯಾರ್ಥಿ ಚಳವಳಿಯಲ್ಲಿ ಮುಷ್ಟಿ ಕಟ್ಟಿ ಎದುರಿಗಿದ್ದವರ ಅನ್ಯಾಯವನ್ನು ಪ್ರಶ್ನಿಸುತ್ತಾ ಓಡಾಡುತ್ತಿದ್ದ ಕಾಲ ಅದು. 'ಚಿರಸ್ಮರಣೆ' ಈ ಕಾರಣಕ್ಕಾಗಿ ಒಂದು ತೂಕ ಹೆಚ್ಚೇ ಇಷ್ಟವಾಗಿತ್ತು.

ಇದು ಒಂದು ಕಾಲ್ಪನಿಕ ಕಾದಂಬರಿ ಅಲ್ಲ ಎಂದು ಗೊತ್ತಾದದ್ದು ನಿರಂಜನರೇ ಮತ್ತೆ ಇಡೀ 'ಚಿರಸ್ಮರಣೆ'ಗೆ ಭಿತ್ತಿಯಾಗಿ ನಿಂತ ಕಯ್ಯೂರಿನ ಬಗ್ಗೆ ಅಲ್ಲಿನ ಕರಾಳ ನೀತಿಯ ಬಗ್ಗೆ, ಆದ ಬಂಡಾಯದ ಬಗ್ಗೆ, ಹರಿಯುತ್ತಿರುವ ತೇಜಸ್ವಿನಿ ನದಿಯ ಬಗ್ಗೆ, 'ಚಿರಸ್ಮರಣೆಯ ಕಯ್ಯೂರು' ಎನ್ನುವ ಪುಟ್ಟ ಕೃತಿಯನ್ನು ಬರೆದಾಗ, 'ಸಮುದಾಯ' ಪ್ರಕಾಶನ ಪ್ರಕಟಿಸಿದ ಈ ಕಿರು ಹೊತ್ತಿಗೆ ನನ್ನೊಳಗೆ ಇನ್ನೊಂದೇ ರೀತಿಯ ಬೆಳಕಿನ ದೊಂದಿಯನ್ನು ಹಿಡಿಯಿತು. ಹಾಗಾಗಿ ಆ ಕೃತಿಯನ್ನೇ ಗೂಗಲ್ ಮ್ಯಾಪ್ ಎನ್ನುವಂತೆ ಹಿಡಿದುಕೊಂಡು ಮಂಗಳೂರಿಗೆ ಕಾಲಿಟ್ಟಿದ್ದೆ.

ಸುಳ್ಯದ ಕುಕ್ಕೆ ಸುಬ್ರಹ್ಮಣ್ಯಕ್ಕೆ ತೀರಾ ಸಮೀಪದ 'ಕುಲ್ಕುಂದ' ನಿರಂಜನರ ಊರು. ಅದು ಯಾವಾಗ ಮತ್ತು ಹೇಗೆ ಕುಳಕುಂದವಾಯಿತೋ ಗೊತ್ತಿಲ್ಲ. ಶಿವರಾಯ ಜೊತೆಗೆ ಕುಳಕುಂದ ಸೇರಿತು. ಹೈಸ್ಕೂಲ್ ಶಿಕ್ಷಣಕ್ಕಾಗಿ ಬಾಲಕ ಶಿವರಾಯ ನೆರೆಯ ನೀಲೇಶ್ವರಕ್ಕೆ ಹೋದ. ಅದು ಕಯ್ಯೂರಿನ ಒಡಲಲ್ಲಿ ಬೆಂಕಿಯ ಬೀಜ ಬಿದ್ದಿದ್ದ ಕಾಲ. ಅಲ್ಲಿನ ನರಳಾಟ, ಮುಷ್ಟಿ ಕಟ್ಟಿ ಎದ್ದು ನಿಂತ ಯುವಕರ ಗುಂಪು ಎಲ್ಲವನ್ನೂ ಈ ಶಿವರಾಯ ನೋಡಿದರು. ಹತ್ತನೇ ತರಗತಿ ಮುಗಿದ ತಕ್ಷಣ ಓದನ್ನು ಅಲ್ಲಿಗೆ ಕೈಬಿಟ್ಟ ಶಿವರಾಯ ಮಂಗಳೂರಿನಲ್ಲಿದ್ದ 'ರಾಷ್ಟ್ರಬಂಧು' ಪತ್ರಿಕೆಯಲ್ಲಿ ಕೆಲಸ ಮಾಡಲು ಹೊರಟು ಬಂದರು.

ನಿರಂಜನರು ಹೇಳುತ್ತಾರೆ: 'ನಾನು ಮಂಗಳೂರಿಗೆ ಹೊರಟಾಗ ಶಾಲೆಯ ಪ್ರಮಾಣ ಪತ್ರವನ್ನು ಖಂಡಿತಾ ಒಯ್ಯಲಿಲ್ಲ. ಆದರೆ, ಕಯ್ಯೂರಿನ ಕಿಡಿಯೊಂದನ್ನು ಹೊತ್ತೊಯ್ಯಲು ಮರೆಯಲಿಲ್ಲ.' ಹೀಗೆ ಮಂಗಳೂರಿಗೆ ಬಂದಿಳಿದ ನಿರಂಜನರು ಕಯ್ಯೂರನ್ನು ಬಿಟ್ಟು ಬಂದರೂ ಕಯ್ಯೂರು ಇವರನ್ನು ಬಿಟ್ಟರಲಿಲ್ಲ, ರಾಷ್ಟ್ರಬಂಧು ಪತ್ರಿಕೆಗೆ ಇವರು ವರದಿ ಮಾಡಬೇಕಾಗಿ ಬಂದದ್ದು ಇದೇ ಕಯ್ಯೂರಿನ ರೈತ ವೀರರ ವಿಚಾರಣೆಯನ್ನು. 60 ರೈತ ವೀರರನ್ನು ದಸ್ತಗಿರಿ ಮಾಡಿ ಅವರನ್ನು ಮಂಗಳೂರಿನ ಜೈಲಿನಲ್ಲಿ ಇರಿಸಲಾಗಿತ್ತು. ಅಲ್ಲಿನ ನ್ಯಾಯಾಲಯದಲ್ಲಿ ಅವರ ವಿಚಾರಣೆ ಜರುಗುತ್ತಿತ್ತು. ನಿರಂಜನರು ಜೈಲು ಹಾಗೂ ಕೋರ್ಟು ಎರಡರಲ್ಲೂ ರೈತ ವೀರರ ಸಂಗಾತಿಯಾದರು. ಅಷ್ಟೇ ಅಲ್ಲ ಈ ರೈತ ವೀರರನ್ನು ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿ. ಸಹಿ ಸಂಗ್ರಹ ಚಳವಳಿಯನ್ನೇ ಆರಂಭಿಸಿದರು.

ಅದು ಸರಿ, ಕುಳಕುಂದದ ಈ ಶಿವರಾಯ ನಿರಂಜನ ಆಗಿದ್ದು ಹೇಗೆ? ಆಗಿನ ಅವಿಭಜಿತ ಭಾರತ ಕಮ್ಯುನಿಸ್ಟ್ ಪಕ್ಷ 'ಜನಶಕ್ತಿ' ಎನ್ನುವ ಪತ್ರಿಕೆಯನ್ನು ಆರಂಭಿಸಿತ್ತು. ಪತ್ರಿಕೆ ಆರಂಭವಾದ ಒಂದು ವರ್ಷಕ್ಕೇ ಅದರಲ್ಲಿನ ಹರಿತ ವಿಶ್ಲೇಷಣೆಗಳಿಂದ ಬೆಚ್ಚಿದ ಸರಕಾರ ಅದನ್ನು ನಿಷೇಧಿಸಿತ್ತು. ಜನಶಕ್ತಿ ಭೂಗತ ಪತ್ರಿಕೆಯಾಗಿ ಮುಂದುವರಿಯಿತು. ಆಗಲೇ ಕುಳಕುಂದ ಶಿವರಾಯರು 'ನಿರಂಜನ' ಎನ್ನುವ ಹೆಸರನ್ನಿಟ್ಟುಕೊಂಡು ಜನಶಕ್ತಿಗೆ ಬರೆಯಲು ಆರಂಭಿಸಿದ್ದು, ಕುಳಕುಂದ ಶಿವರಾಯ ಹೆಸರು ಹಿನ್ನೆಲೆಗೆ ಸೇರಿಹೋಯಿತು.

ನಿರಂಜನರು ನನ್ನ ಫೇವರೆಟ್ ಲೇಖಕರು. ನನಗೆ ಮಾತ್ರವಲ್ಲ 'ಕಪ್ಪು ಮುಖ, ಬೆಳ್ಳಿಗಡ್ಡ, ಉರಿಯುತ್ತಿರುವ ಕಣ್ಣುಗಳನ್ನು' ಹೊಂದಿದ್ದ ಎಲ್ಲರಿಗೂ ಅವರ ಸಾಹಿತ್ಯ ಇನ್ನಿಲ್ಲದ ಸ್ಫೂರ್ತಿಯೇ ಸರಿ. ಮೃತ್ಯುಂಜಯ, ವಿಮೋಚನೆ, ಕಲ್ಯಾಣಸ್ವಾಮಿ, ರಂಗಮ್ಮನ ವಠಾರ, ಸ್ಮರಣೆಯೊಂದೇ ಸಾಲದೇ ಹೀಗೆ ಅವರ ಪ್ರತಿಯೊಂದು ಕೃತಿಯೂ ಸಹ ಜನಸಮಾನ್ಯನ ಕಣ್ಣಿಂದ ಲೋಕವನ್ನು ಕಂಡ



ಚಿತ್ರಣಗಳೆ. ಕಲೆಗಾಗಿ ಕಲೆ ಎನ್ನುವುದನ್ನು ಸ್ಪಷ್ಟವಾಗಿ ಬದಿಗೆ ತಳ್ಳಿ ಬರೆದವರು ನಿರಂಜನ. ಅದಕ್ಕೆ ಅಲ್ಲವೇ ಆ ಕಾಲಕ್ಕೆ ಅನಕೃ ಹಾಗೂ ನಿರಂಜನರ ನಡುವೆ ಅಷ್ಟು ಮಾತಿನ ಮಥನ ನಡೆದದ್ದು. ನಿರಂಜನರ ಸಾಹಿತ್ಯ ಒಂದು ಸಿದ್ಧಾಂತಕ್ಕೆ ಕಟ್ಟು ಬಿದ್ದಿದೆ ಎಂದು ಅನಕೃ ಬರೆದಾಗ ಸಾಹಿತ್ಯ ಏನು ಮಾಡಬೇಕು ಎನ್ನುವುದಕ್ಕೆ ಇನ್ನಷ್ಟು ಸ್ಪಷ್ಟ ರೂಪವನ್ನು ನಿರಂಜನರು ಕೊಡುತ್ತಾ ಹೋದರು. ಈ ಎಲ್ಲವುಗಳೇ ಪ್ರಗತಿಶೀಲ ಬರಹಗಾರರ ಸಂಘಕ್ಕೂ, ಬಂಡಾಯ ಸಾಹಿತ್ಯ ಚಳವಳಿಗೂ ಆ ಕಾಲಕ್ಕೆ ಬಿತ್ತಿದ ಬೀಜಗಳಾಗಿದ್ದವು.

ಮ್ಯಾಕ್ಸಿಮ್ ಗಾರ್ಕಿಯವರ 'ಮದರ್' ಕೃತಿಯನ್ನು ನಿರಂಜನರು 'ತಾಯಿ'ಯಾಗಿ ಕನ್ನಡಕ್ಕೆ ಅನುವಾದಿಸಿದರು. ಕನ್ನಡದ್ದೇ ಕಾದಂಬರಿಯೇನೋ ಎನ್ನುವ ಬನಿಯನ್ನು ಅದು ಒಳಗೊಂಡಿತ್ತು.

ಸೋವಿಯತ್ ಪುಸ್ತಕಗಳು ಆ ಕಾಲಕ್ಕೆ ಅನುವಾದ ವಾಗುತ್ತಿದ್ದ ರೀತಿಯಲ್ಲಿಯೇ ಆಗಿದ್ದಿದ್ದರೆ ಕನ್ನಡ ಓದುಗರ ಮನದಾಳದಲ್ಲಿ 'ತಾಯಿ' ಇಷ್ಟು ಆಳವಾಗಿ ಇಳಿದು ಒಂದು ಸ್ಥಾನವನ್ನು ಕಂಡುಕೊಳ್ಳುತ್ತಿರಲಿಲ್ಲವೇನೋ.

ನಿರಂಜನರನ್ನು ಕನ್ನಡದ ಮೊದಲ ಅಂಕಣ ಬರಹಗಾರ ಎನ್ನುತ್ತಾರೆ. ಅವರು ಅಂಕಣ ಬರೆದ ಪತ್ರಿಕೆಗಳ ಸಂಖ್ಯೆ ಅಗಾಧ. ಆದರೂ ಈ ಮಧ್ಯೆ ಎಲ್ಲರ ಮನದಲ್ಲಿ ಆಳವಾಗಿ ಉಳಿದುಹೋದದ್ದು ನಿರಂಜನರು 'ಜನಪ್ರಗತಿ'ಯಲ್ಲಿ ಬರೆದ ಅಂಕಣ. 'ಸಾಧನಾ' ಎನ್ನುವ ಕಾಲ್ಪನಿಕ ಪ್ರೇಯಸಿಗೆ ಬರೆದ ಪತ್ರಗಳ ರೂಪದ ರಾಜಕೀಯ ಅಂಕಣ ಇನ್ನಿಲ್ಲದಂತೆ ಪ್ರಸಿದ್ಧವಾಗಿತ್ತು. ರಾಜಕೀಯ, ಸಾಮಾಜಿಕ, ಸಮಕಾಲೀನ ತಲ್ಲಣಗಳನ್ನು ಅವರು ಪ್ರೇಯಸಿಯ ಮುಂದೆ ಬಿಡಿಸಿಡುತ್ತಿದ್ದ ರೀತಿ ವಾಹ್! ಅನ್ನುವಂತಿತ್ತು.

ನಿರಂಜನರು ಸಂಪಾದಿಸಿದ 'ಜ್ಞಾನ ಗಂಗೋತ್ರಿ', ಆನಂತರದಲ್ಲಿ ನವಕರ್ನಾಟಕ ಪ್ರಕಾಶನಕ್ಕಾಗಿ ಸಂಪಾದಿಸಿ ಕೊಟ್ಟ 'ವಿಶ್ವ ಕಥಾ ಕೋಶ' ಕನ್ನಡಕ್ಕೆ ಸಿಕ್ಕ ಅಮೂಲ್ಯವಾದ ಕೊಡುಗೆಗಳು. ಮಕ್ಕಳಿಗೆ ಅದೂ ಕನ್ನಡದಲ್ಲಿ ಒಂದು ವಿಶ್ವಕೋಶ ಕಟ್ಟಿ ಕೊಡುವುದು ಖಂಡಿತಾ ಸುಲಭದ ಕೆಲಸವಾಗಿರಲಿಲ್ಲ. ಆ ಕಾಲಕ್ಕೆ ಹಲ್ಲು ಕಚ್ಚಿ ಇದನ್ನು ಸಾಧ್ಯ ಮಾಡಿದವರು ನಿರಂಜನರು. ಆಗ ರೇಡಿಯೋದಲ್ಲಿ ಪ್ರಸಾರವಾಗುತ್ತಿದ್ದ 'ಈಗ ಕೊಳ್ಳಿ ಆಮೇಲೆ ಕೊಳ್ಳಿ ಜ್ಞಾನ ಗಂಗೋತ್ರಿ' ಎನ್ನುವ ಜಿಂಗಲ್ ಇನ್ನೂ ನನ್ನ ಮನದ ಅಳದಲ್ಲಿ ಆಚೊತ್ತಿ ಕುಳಿತಿದೆ. ಇಡೀ ಜಗತ್ತಿನ ಅತ್ಯುತ್ತಮ ಕಥೆಗಳನ್ನು ಆರಿಸಿ ಕೊಟ್ಟ ವಿಶ್ವ ಕಥಾಕೋಶಕ್ಕೂ ಅಷ್ಟೇ ಮನ್ನಣೆ ಇದೆ. ಲ್ಯಾಟಿನ್ ಅಮೆರಿಕದ, ಅದರಲ್ಲೂ, ಕ್ಯೂಬಾ ಕಥೆಗಳನ್ನು ನಾನು ಎಟುಕಿಸಿಕೊಂಡಿದ್ದೇ ಅಲ್ಲಿ.

ನಿರಂಜನರ ಸಾಹಿತ್ಯ ಯಾನ ನಮ್ಮನ್ನು ಜಯನಗರದಲ್ಲಿರುವ ಅವರ ಮನೆಯನ್ನು ಹುಡುಕಿಕೊಂಡು ಹೋಗುವಂತೆ ಮಾಡಿತ್ತು. ಅವರ ಮನೆ ನಮಗೆ ಒಂದು ಪ್ರೇಕ್ಷಣೀಯ ಸ್ಥಳವೇ ಆಗಿತ್ತು. ನಿರಂಜನರು ನಮ್ಮೊಳಗೆ ಒಬ್ಬರೇ ಬರಲಿಲ್ಲ, ಅವರ ಪತ್ನಿ, ಹೆಸರಾಂತ ವೈದ್ಯೆ, ಸಾಹಿತಿ ಅನುಪಮಾ ನಿರಂಜನ, ಮಕ್ಕಳಾದ ತೇಜಸ್ವಿನಿ, ಸೀಮಂತಿನಿ ಎಲ್ಲರನ್ನೂ ಕರೆದುಕೊಂಡು ಬಂದರು ಎನ್ನುವುದು ನಮಗೆ ಕೋಡು ಮೂಡುವಂತೆ ಮಾಡಿದೆ.

(ಲೇಖಕರು ಹಿರಿಯ ಪತ್ರಕರ್ತ, ಪ್ರಕಾಶಕರು)

ಎಸ್. ದೇಶಾದ್ಯಂತ ಕೋಮುಗಲಭೆಗಳಲ್ಲಿ ತೊಡಗಿಕೊಂಡಿತು. ಮಹಾತ್ಮ ಗಾಂಧಿ ನಿರಶನ ದೀಕ್ಷೆಯನ್ನು ಕೈಗೊಂಡು ಜನರಲ್ಲಿ ಸಾಮರಸ್ಯ ನೆಲೆಸುವಂತೆ ಮನವಿ ಮಾಡಿದಾಗ, ಇದಕ್ಕೆ ದೇಶದೆಲ್ಲೆಡೆಯಿಂದ ಬಂದ ಸ್ಪಂದನೆ ಕಂಡು ಸಂಘಪರಿವಾರದ ಮುಖಂಡರು ಗಾಂಧೀಜಿ ಬಳಿ ತೆರಳಿ ನಿರಸನಕ್ಕೆ ಬೆಂಬಲ ಘೋಷಿಸಿದರು.

ಸಾವರ್ಕರ್‌ಗೂ, ಆರೆಸ್ಸೆಸ್ ಗೂ ಸಂಬಂಧವಿಲ್ಲ ಎಂದರು

ಕೆಲವೇ ದಿನಗಳಲ್ಲಿ ಎಲ್ಲವೂ ಇತ್ಯರ್ಥವಾಯ್ತು ಅಂದುಕೊಳ್ಳುತ್ತಿರುವಾಗಲೇ ಗಾಂಧೀಜಿಯವರ ಹತ್ಯೆ ಮಾಡಿದರು. ಈ ಷಡ್ಯಂತ್ರದ ಹಿಂದೆ ಸಾವರ್ಕರ್ ಅವರ ಕೈವಾಡ ಇರುವುದು ಸ್ಪಷ್ಟವಾಗಿದೆ. ತಕ್ಷಣ ಆರೆಸ್ಸೆಸ್ ತಮ್ಮ ಸಂಘಟನೆಗೂ ಗಾಂಧಿ ಹತ್ಯೆಗೂ ಸಂಬಂಧವಿಲ್ಲ ಎಂದೂ, ಸಾವರ್ಕರ್ ಗೂ, ಆರೆಸ್ಸೆಸ್ ಗೂ ಸಂಬಂಧವಿಲ್ಲ ಎಂದು ಘೋಷಿಸಿತು. ಕೆಟ್ಟ ಹೆಸರು ಬಂದರೆ ಗೋಡ್ಸೆಗೂ ಮತ್ತು ಸಾವರ್ಕರ್ ಗೂ ಬರಬೇಕೇ ಹೊರತು ಆ ಮಸಿ ಆರೆಸ್ಸೆಸ್ ಗೆ ಮೆತ್ತಿಕೊಳ್ಳಬಾರದು ಎಂಬುದು ಅವರ ನೀತಿ. ಮೋದಿ ಪ್ರಧಾನಿಯಾದ ನಂತರ ಸಾವರ್ಕರ್ ಮತ್ತು ಗೋಡ್ಸೆಯನ್ನು ಕುರಿತು ಆಕಾಶದೆತ್ತರ ಪ್ರಚಾರವನ್ನು ಆರಂಭಿಸಿದರು. ಅವಕಾಶವಾದವು ಆರೆಸ್ಸೆಸ್‌ನ ತಂತ್ರವಾಗಿದೆ.

ತುರ್ತು ಪರಿಸ್ಥಿತಿಯನ್ನು ಬೆಂಬಲಿಸಿದರು

ಜಯಪ್ರಕಾಶ್ ನಾರಾಯಣ್ ನೇತೃತ್ವದಲ್ಲಿ 1974 ರಲ್ಲಿ ಇಂದಿರಾ ಗಾಂಧಿಯವರ ಸರ್ವಾಧಿಕಾರದ ವಿರುದ್ಧ ಚಳುವಳಿ ಪ್ರಾರಂಭವಾಯಿತು. ಭಾರತೀಯ ಜನಸಂಘ (ಈಗಿನ ಬಿಜೆಪಿಯ ಅಂದಿನ ಹೆಸರು) ಅದರಲ್ಲಿ ಪಾಲುದಾರರಾದರು. 1975ರಲ್ಲಿ ಇಂದಿರಾಗಾಂಧಿ ತುರ್ತುಪರಿಸ್ಥಿತಿ ಹೇರಿ ಆರೆಸ್ಸೆಸ್ ಅನ್ನು ನಿಷೇಧಿಸಿದರು. ತಕ್ಷಣವೇ ಆರೆಸ್ಸೆಸ್ ಮುಖ್ಯಸ್ಥ ಬಾಳಾ ಸಾಹೇಬ್ ದೇವರಸ್ ತುರ್ತು ಪರಿಸ್ಥಿತಿಗೆ ಬೆಂಬಲ ಘೋಷಿಸಿದರು. ಜೆಪಿ ಚಳವಳಿಗೂ ಆರೆಸ್ಸೆಸ್ ಗೂ ಯಾವುದೇ ಸಂಬಂಧವಿಲ್ಲ ಎಂದು ಘೋಷಿಸಿದರು. ಜನರು ತುರ್ತು ಪರಿಸ್ಥಿತಿಯನ್ನು ತಿರಸ್ಕರಿಸಿದ ನಂತರ, ಆರೆಸ್ಸೆಸ್ ನಾಯಕರು ಸರ್ವಾಧಿಕಾರವನ್ನು ಸೋಲಿಸಿದ್ದೇವೆ ಎಂದು ಹೇಳಿಕೊಳ್ಳಲಾರಂಭಿಸಿದರು.

ಸರ್ವಾಧಿಕಾರವನ್ನು ಸೋಲಿಸಿ ಪ್ರಜಾಪ್ರಭುತ್ವವನ್ನು ಎತ್ತಿ ಹಿಡಿದ ಜನತಾ ಪಕ್ಷವನ್ನು ಇಂದಿರಾ ಗಾಂಧಿಯವರು ಮತ್ತೆ ಛಿದ್ರಗೊಳಿಸಿದರು. ಜನತಾ ಪಕ್ಷದ ವಿಘಟನೆಗೆ ಆರೆಸ್ಸೆಸ್ ಪ್ರಮುಖ ಕಾರಣ ಎಂಬುದು ಎಲ್ಲರಿಗೂ ತಿಳಿದಿರುವ ವಿಚಾರ.

400 ಸೀಟುಗಳನ್ನು ಗೆದ್ದಿದ್ದರೆ?

ಮೋದಿ ಅವರನ್ನು ಹಿಂದೂ ಹೃದಯ ಸಾಮ್ರಾಟ ಎಂದು ಮೆರವಣಿಗೆ ಮಾಡಿದ್ದ ಆರೆಸ್ಸೆಸ್ ಈಗ ಒಮ್ಮಿಂದೊಮ್ಮೆಲೆ ಅವರಲ್ಲಿ ಅಹಂಕಾರ. ಉದ್ಧಟತನ, ಸ್ವಾರ್ಥದಂತಹ ಅವಗುಣಗಳೆಲ್ಲ ಕಾಣಿಸಿಕೊಂಡಿದ್ದು ಹೇಗೆ? ಒಂದೊಮ್ಮೆ 400 ಸೀಟುಗಳನ್ನು ಗೆದ್ದಿದ್ದರೆ ಆಗಲೂ ಭಾಗವತ್ ಈಗಿನ ಬುದ್ದಿವಾದ ಹೇಳುತ್ತಿದ್ದರೆ? ಖಂಡಿತಾ ಇಲ್ಲ. ಮೋದಿಯವರನ್ನು ಇನ್ನಷ್ಟು ಹೊಗಳಿ ಅಟ್ಟಕ್ಕೇರಿಸುತ್ತಿದ್ದರು. ಒಟ್ಟಾರೆಯಾಗಿ ಹೇಳುವುದಾದರೆ, ಜನರ ವಿಶ್ವಾಸ ಕಳೆದುಕೊಳ್ಳುತ್ತಿದ್ದೇವೆ ಎಂಬ ಸತ್ಯವನ್ನು ಮರೆಮಾಚಲು, ಭಾಗವತ್ ಸೇರಿದಂತೆ ಕೇಸರಿ ನಾಯಕರೆಲ್ಲಾ ಇಂತಹ ನಾಟಕವಾಡುತ್ತಿದ್ದಾರೆ. ●

ಸಾಂಸ್ಕೃತಿಕ ಲೋಕವೂ ರಾಜಕೀಯ ಸಂದಿಗ್ಧತೆಗಳೂ

ಅಧಿಕಾರ ರಾಜಕಾರಣದ ಅಭಿಪ್ರಾಯ ಸ್ಪಷ್ಟವಾಗಿದೆ-ಸಾಂಸ್ಕೃತಿಕ ವಲಯ ಸ್ಪಂದಿಸಬೇಕಿದೆ

ಕೆಲವು ದಿನಗಳ ಮುನ್ನ ಸಾಂಸ್ಕೃತಿಕ ಅಕಾಡೆಮಿ–ಪ್ರಾಧಿಕಾರಗಳ ಮುಖ್ಯಸ್ಥರು, ಸದಸ್ಯರು ಕೆಪಿಸಿಸಿ ಕಚೇರಿಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಸಮ್ಮುಖದಲ್ಲಿ ಸಭೆ ಸೇರಿರುವುದು ಕರ್ನಾಟಕದ ಸಾಂಸ್ಕೃತಿಕ ವಲಯದಲ್ಲಿ ಸಾಕಷ್ಟು ಚರ್ಚೆಗಳನ್ನು ಹುಟ್ಟುಹಾಕಿದೆ. ಸಾಹಿತ್ಯ–ರಂಗಭೂಮಿ–ಲಲಿತಕಲೆ ಮೊದಲಾದ ಸಾಂಸ್ಕೃತಿಕ ಜಗತ್ತನ್ನು ಪ್ರತಿನಿಧಿಸುವವರು ಸರ್ಕಾರದೊಡನೆ ಅಥವಾ ಸಚಿವರೊಡನೆ ಚರ್ಚೆ ಸಂವಾದ ನಡೆಸುವುದು ಅಪರಾಧವೇನಲ್ಲ. ಸಂಸ್ಕೃತಿ ಸಚಿವರಾಗಲೀ, ಗೃಹ ಸಚಿವರಾಗಲೀ ಅಥವಾ ಮುಖ್ಯಮಂತ್ರಿಗಳೂ ಈ ಸಂಸ್ಥೆಗಳ ಮುಖ್ಯಸ್ಥರೊಡನೆ ಆರೋಗ್ಯಕರ ಚರ್ಚೆ ನಡೆಸುವ ಮೂಲಕ ರಾಜ್ಯದ ಸಾಂಸ್ಕೃತಿಕ ಭೂಮಿಕೆಯನ್ನು ಮತ್ತಷ್ಟು ಬಲಪಡಿಸುವ ಬಗ್ಗೆ ಸಮಾಲೋಚನೆ ನಡೆಸಬಹುದು. ಪ್ರಜಾಪ್ರಭುತ್ವದಲ್ಲಿ ಇದು ಅಗತ್ಯವೂ ಹೌದು. ಸರ್ಕಾರದ ಅನುದಾನ, ನೆರವು ಮತ್ತು ಧನ ಸಹಾಯದೊಡನೆಯೇ ನಡೆಯಬೇಕಾದ ಈ ಸಂಸ್ಥೆಗಳು ಒಂದು ಹಂತದಲ್ಲಿ ಆಡಳಿತಾರೂಢ ಪಕ್ಷದ ಮರ್ಜಿಗೆ ಒಳಗಾಗಿರುವುದು ಅನಪೇಕ್ಷಿತ ಎನಿಸಿದರೂ ವಾಸ್ತವ.

ನಾ ದಿವಾಕರ

ಆದರೆ ಇಲ್ಲಿ ಒಂದು ಸೂಕ್ಷ್ಮವನ್ನು ಗಮನಿಸಬೇಕಿದೆ. ಸರ್ಕಾರವು ತಾನೆ ಸ್ಥಾಪಿಸುವ ಅಕಾಡೆಮಿ–ಪ್ರಾಧಿಕಾರ ಇತ್ಯಾದಿ ಸಾಂಸ್ಕೃತಿಕ ಸಂಸ್ಥೆಗಳಿಗೆ ನೇಮಕ ಮಾಡುವ ಅಧಿಕಾರವನ್ನು ಹೊಂದಿರುತ್ತದೆ. ಯಾವುದೇ ಚುನಾಯಿತ ಸರ್ಕಾರವಾದರೂ ತನ್ನ ಸೈದ್ಧಾಂತಿಕ ನಿಲುವುಗಳಿಗೆ ಅನುಗುಣವಾಗಿ ಈ ಸಾಂಸ್ಥಿಕ ಹುದ್ದೆಗಳನ್ನು ಭರ್ತಿ ಮಾಡುತ್ತದೆ. ರಾಜ್ಯದ ಸಾಂಸ್ಕೃತಿಕ ಜಗತ್ತಿನ ಮೂಲಕ ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವ ನಿಟ್ಟಿನಲ್ಲಿ ಸರ್ಕಾರಗಳು ಸೂಕ್ತ–ಸಮರ್ಥ ವ್ಯಕ್ತಿಗಳನ್ನು ಸಾಂಸ್ಥಿಕ ಹುದ್ದೆಗಳಿಗೆ ನೇಮಿಸುವುದು ಅನೂಚಾನವಾಗಿ ನಡೆದುಬಂದಿರುವ ಪದ್ಧತಿ. ಇತರ ನಿಗಮ ಮಂಡಲಿಗಳ ಹಾಗೆಯೇ ಈ ಸಂಸ್ಥೆಗಳೂ ಸಹ ಸರ್ಕಾರದಿಂದಲೇ ಸ್ಥಾಪನೆಯಾಗುವುದು ವಾಸ್ತವ. ಆದರೆ ವಾಣಿಜ್ಯಾಸಕ್ತಿಯಿಂದ ಸ್ಥಾಪಿಸಲಾಗುವ ನಿಗಮ ಮಂಡಲಿಗಳಿಗೂ, ಸಾಹಿತ್ಯ–ಕಲೆ–ರಂಗಭೂಮಿ–ಯಕ್ಷಗಾನ–ಲಲಿತಕಲೆ ಇತ್ಯಾದಿ ವಲಯಗಳಲ್ಲಿ ಕಾರ್ಯನಿರ್ವಹಿಸಬೇಕಾದ ಸಾಂಸ್ಕೃತಿಕ ಸಂಸ್ಥೆಗಳಿಗೂ ಅಪಾರ ಅಂತರ ಇರುವುದನ್ನು ಗುರುತಿಸಬೇಕಿದೆ.

ಸಂಸ್ಕೃತಿ ಚಿಂತನೆಯ ನೆಲೆಗಳು

ಸಾಂಸ್ಕೃತಿಕ ಸಂಸ್ಥೆಗಳು ಲಾಭದಾಯಕ ಸ್ಥಾವರಗಳಲ್ಲ. ಅಲ್ಲಿ ಹುದ್ದೆಗಳನ್ನು ಅಲಂಕರಿಸುವ ವ್ಯಕ್ತಿಗಳು ಸ್ವ–ಹಿತಾಸಕ್ತಿಯನ್ನು ಬದಿಗಿಟ್ಟು, ತಮ್ಮ ಸಂಕುಚಿತ ಜಾತಿ–ಮತ–ಧರ್ಮ ಇತ್ಯಾದಿಗಳ ಅಸ್ಮಿತೆಗಳನ್ನು ಕಳಚಿಟ್ಟು, ತಾವು ಸಂಪಾದಿಸಿರುವ ಸಾಮಾಜಿಕ ಸ್ಥಾನಮಾನ ಅಥವಾ ಆರ್ಥಿಕ ಅಂತಸ್ತುಗಳನ್ನು ಮರೆತು, ಕನ್ನಡ–ಕರ್ನಾಟಕ ಸಂಸ್ಕೃತಿಯ ಬೆಳವಣಿಗೆಗಾಗಿ, ಸಮಾಜದ ಸಾಂಸ್ಕೃತಿಕ ಅಭ್ಯುದಯವನ್ನು ಸಾಧಿಸುವುದಕ್ಕಾಗಿ ಶ್ರಮಿಸಬೇಕಾಗುತ್ತದೆ. ನಿಗಮ–ಮಂಡಲಿಗಳಂತೆ ಈ ಸಂಸ್ಥೆಗಳ ಪದಾಧಿಕಾರಿಗಳು ಸರ್ಕಾರಕ್ಕೆ ಉತ್ತರದಾಯಿಯಾಗಬೇಕಿಲ್ಲ, ಬದಲಾಗಿ ಸಮಾಜಕ್ಕೆ ಉತ್ತರದಾಯಿಯಾಗುತ್ತಾರೆ. ಸರ್ಕಾರದ ಅನುದಾನ–ಧನ ಸಹಾಯ ಪಡೆದರೂ ಸಹ ಅದರ ಸದ್ವಿನಿಯೋಗವಾಗುವುದು ಸಾಂಸ್ಕೃತಿಕ ನೆಲೆಗಳ ವಿಸ್ತಾರದಲ್ಲಿ ಹಾಗೂ ಅಲ್ಲಿ ಕಾಣಬಹುದಾದ ಬೌದ್ಧಿಕ ಚಿಂತನೆಗಳ ವಿಸ್ತರಣೆಯಲ್ಲಿ. ಅಕಾಡೆಮಿ–ಪ್ರಾಧಿಕಾರಗಳ ಮುಖ್ಯಸ್ಥರು ಹಾಗೂ ಸದಸ್ಯರು ಸಮಾಜವನ್ನು ಪ್ರತಿನಿಧಿಸುವ ಪರಿಚಾರಕರೇ ಹೊರತು ಸಾಂಸ್ಥಿಕ ವಾರಸುದಾರರಲ್ಲ.

ಹಾಗಾಗಿಯೇ ಸಾಂಸ್ಕೃತಿಕ ವಲಯದ ಸಂಸ್ಥೆಗಳು ಸ್ವಾಯತ್ತವಾಗಿರಬೇಕು ಎಂದು ಆಶಿಸಲಾಗುತ್ತದೆ. ಇವು ಸ್ವತಂತ್ರ ಸಂಸ್ಥೆಗಳಲ್ಲ ಎಂದ ಮಾತ್ರಕ್ಕೆ ಸ್ವಾಯತ್ತತೆಯನ್ನು ಕಳೆದುಕೊಳ್ಳಬೇಕು ಎಂದೇನಿಲ್ಲ. ಕಳೆದ ಹತ್ತು ವರ್ಷಗಳಲ್ಲಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಎನ್‌ಸಿಇಆರ್‌ಟಿ, ಐಎಚ್‌ಆರ್‌ಸಿ ಮುಂತಾದ ಶೈಕ್ಷಣಿಕ ಸಂಸ್ಥೆಗಳನ್ನು, ರಾಷ್ಟ್ರೀಯ ನಾಟಕ ಶಾಲೆ (ಎನ್‌ಎಸ್‌ಡಿ), ಎಫ್‌ಟಿಐಐ ಹಾಗೂ ಇತರ ಸಾಹಿತ್ಯ-ಕಲಾ ಅಕಾಡೆಮಿಗಳನ್ನು ಹೇಗೆ ತನ್ನ ಹಿಂದುತ್ವದ ಪ್ರಯೋಗಶಾಲೆಯನ್ನಾಗಿ ಮಾಡಿಕೊಂಡಿದೆ ಎಂಬುದನ್ನು ಗಮನಿಸುತ್ತಲೇ ಬಂದಿದ್ದೇವೆ. ಇದರಿಂದ ಈ ಸಂಸ್ಥೆಗಳು ಹೇಗೆ ತಮ್ಮ ಸೃಜನಶೀಲತೆಯನ್ನು ಕಳೆದುಕೊಂಡು ಅಧಿಕಾರಶಾಹಿ ಕೇಂದ್ರಗಳಾಗಿವೆ ಎನ್ನುವುದನ್ನೂ ಗುರುತಿಸಿದ್ದೇವೆ. ಅಧಿಕಾರ ರಾಜಕಾರಣದ ಸ್ವಾರ್ಥ ಹಿತಾಸಕ್ತಿಗಳು ಹಾಗೂ ಆಳ್ವಿಕೆಯ ತಾತ್ವಿಕ ದಾಳಿಗಳಿಗೆ ಸಿಲುಕಿ ಈ ಸಂಸ್ಥೆಗಳು ತಮ್ಮ ಸ್ವಂತಿಕೆ–ಸ್ವಾಯತ್ತತೆ ಎರಡನ್ನೂ ಕಳೆದುಕೊಂಡು ನಿಂತಿವೆ. ಕರ್ನಾಟಕದಲ್ಲೂ ಹಿಂದಿನ ಸರ್ಕಾರದ ಆಳ್ವಿಕೆಯಲ್ಲಿ ರಂಗಾಯಣದಂತಹ ಉನ್ನತಾದರ್ಶ ಸಂಸ್ಥೆಯೂ ಹೇಗೆ ಸೈದ್ಧಾಂತಿಕ ರಾಜಕಾರಣದ ಪ್ರಯೋಗಶಾಲೆಯಾಗಿತ್ತು ಎನ್ನುವ ದೃಷ್ಟಾಂತ ನಮ್ಮ ಮುಂದಿದೆ.



ಈ ಅಪಾಯಗಳನ್ನು ಅರಿತೇ ಕರ್ನಾಟಕದ ಸಾಂಸ್ಕೃತಿಕ ಮನಸುಗಳು ರಾಜ್ಯದ ಸಾಂಸ್ಕೃತಿಕ ಸಂಸ್ಥೆಗಳ ಸ್ವಾಯತ್ತತೆಗಾಗಿ ಆಗ್ರಹಿಸುತ್ತಲೇ ಬಂದಿವೆ. ಮೈಸೂರಿನಲ್ಲಿರುವ ಪ್ರತಿಷ್ಠಿತ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರವನ್ನೂ ಒಳಗೊಂಡಂತೆ ಕನ್ನಡ ಭಾಷೆ–ಕಲೆ–ಸಂಸ್ಕೃತಿಯನ್ನು ನಿರ್ದೇಶಿಸಿ ಬೆಳೆಸುವ ಎಲ್ಲ ಅಕಾಡೆಮಿ–ಪ್ರಾಧಿಕಾರಗಳೂ ಸಹ ಸ್ವಾಯತ್ತತೆಗಾಗಿ ಹಪಹಪಿಸುತ್ತಿವೆ. ಸರ್ಕಾರದಿಂದ ಸ್ಥಾಪಿಸಲ್ಪಟ್ಟ ಮಾತ್ರಕ್ಕೆ ಈ ಸಂಸ್ಥೆಗಳು ತಮ್ಮ ಸ್ವಾಯತ್ತತೆಯನ್ನು ಕಳೆದುಕೊಳ್ಳಬೇಕು ಎಂದು ಹೇಳುವುದು ಅಕ್ಷಮ್ಯ. ಈ ಸಂಸ್ಥೆಯ ನಿರ್ವಾಹಕರಾಗಿ ನೇಮಕವಾಗುವ ಅಧ್ಯಕ್ಷ–ನಿರ್ದೇಶಕ–ಸದಸ್ಯರು ಸರ್ಕಾರದ ಅಧೀನದಲ್ಲಿ ಕಾರ್ಯನಿರ್ವಹಿಸಬೇಕಿಲ್ಲ. ಸಾಂಸ್ಕೃತಿಕ ಜಗತ್ತಿನ ವಿವಿಧ ಆಯಾಮಗಳನ್ನು ಬಳಸುವ ಮೂಲಕ ಸಮಾಜದಲ್ಲಿ ಕುಸಿಯುತ್ತಿರುವ ಮೌಲ್ಯಗಳನ್ನೂ, ಕಳಚಿಹೋಗುತ್ತಿರುವ ಸಮನ್ವಯತೆಯ ನೆಲೆಗಳನ್ನೂ ಸಂರಕ್ಷಿಸುವುದು ಈ ಪದಾಧಿಕಾರಿಗಳ ನೈತಿಕ ಜವಾಬ್ದಾರಿಯಾಗಿರುತ್ತದೆ.

ಹಾಗಾಗಿಯೇ ನಿಗಮ ಮಂಡಲಿಗಳು ಅಪೇಕ್ಷಿಸದ ಸ್ವಾಯತ್ತತೆಯನ್ನು ಸಾಂಸ್ಕೃತಿಕ ಸಂಸ್ಥೆಗಳು ಸಹಜವಾಗಿ ಬಯಸುತ್ತವೆ. ಈ ವಲಯದ ಸಾಂಸ್ಥಿಕ ಸ್ವಾಯತ್ತತೆ ಕುಸಿದಷ್ಟೂ ಸೃಜನಶೀಲತೆಯೂ ಶಿಥಿಲವಾಗುತ್ತದೆ ಎಂಬ ಸಾಮಾನ್ಯ ಪರಿಜ್ಞಾನ ಸರ್ಕಾರಕ್ಕೂ ಇರಬೇಕು, ಸಂಸ್ಥೆಯ ನಿರ್ವಾಹಕರಿಗೂ ಇರಬೇಕು. ಆದರೆ ವಾಸ್ತವ ಭಿನ್ನವಾಗಿಯೇ ಇದೆ ಎನ್ನುವುದನ್ನು ಕಾಂಗ್ರೆಸ್ ಸರ್ಕಾರ ಅಧಿಕಾರಯುತವಾಗಿ ನಿರೂಪಿಸಿಬಿಟ್ಟಿದೆ. ಕೆಲವು ದಿನಗಳ ಹಿಂದೆ ಸಾಂಸ್ಕೃತಿಕ ವಲಯದ ಎಲ್ಲ ಸಾಂಸ್ಥಿಕ ಪ್ರತಿನಿಧಿಗಳನ್ನು ಕೆಪಿಸಿಸಿ ಕಚೇರಿಗೆ ಆಹ್ವಾನಿಸಿ ಸಭೆ ನಡೆಸುವ ಹಿಂದಿನ ಸರ್ಕಾರದ ಸಾಂಸ್ಕೃತಿಕ ರಾಜಕಾರಣಕ್ಕೆ ಹೊಸ ರಾಜಕೀಯ ಆಯಾಮವನ್ನು ನೀಡಿದೆ. ಕಾಂಗ್ರೆಸ್ ಪಕ್ಷದ ಅಧಿಕೃತ ಕಚೇರಿಯಲ್ಲಿ ನಡೆದ ಸಭೆಗೆ ಅಕಾಡೆಮಿ–ಪ್ರಾಧಿಕಾರದ ಪ್ರತಿನಿಧಿಗಳು ಏಕೆ ಹೋಗಬೇಕಿತ್ತು ಎಂಬ ಪ್ರಶ್ನೆ ಪ್ರಜ್ಞಾವಂತ ಸಂಸ್ಕೃತಿ ಚಿಂತಕರನ್ನು ಕಾಡಲೇಬೇಕಲ್ಲವೇ? ಈ ಬೆಳವಣಿಗೆಯ ವಿರುದ್ಧ ಈಗಾಗಲೇ ರಾಜ್ಯಾದ್ಯಂತ ವ್ಯಾಪಕ ವಿರೋಧ ವ್ಯಕ್ತವಾಗಿದೆ. (ನೋಡಿ: ಆಳ್ವಿಕೆಯ ದಾರ್ಷ್ಟ್ಯವೂ ಸಾಂಸ್ಕೃತಿಕ ಸ್ವಾಯತ್ತತೆಯೂ; https://pratidhvani.com/philosophy-of-governance-and-cultural-autonomy/)

ಸಾಂಸ್ಕೃತಿಕ ರಾಜಕಾರಣದ ಛಾಯೆ

ಈ ನಡುವೆ ಸರ್ಕಾರದ ನಡೆಯನ್ನು ಬಲವಾಗಿ ಸಮರ್ಥಿಸಿಕೊಂಡಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ "ಕಾಂಗ್ರೆಸ್ ಪಕ್ಷದ ಕಚೇರಿಗೆ ಸಾಹಿತಿಗಳನ್ನು ಕರೆದು ಸಭೆ ನಡೆಸಿದ್ದು ನಾನೇ, ಅದರಲ್ಲಿ ತಪ್ಪೇನಿದೆ? ಸಾಹಿತಿಗಳೂ ರಾಜಕಾರಣಿಗಳೇ, ಅವರೂ ರಾಜಕಾರಣಕ್ಕೆ ಬರಬಹುದು" ಎಂದು ಹೇಳಿರುವುದು ವರದಿಯಾಗಿದೆ. ಇನ್ನೂ ಮುಂದುವರೆದು ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿದ ಉಪಮುಖ್ಯಮಂತ್ರಿಗಳು "ಅವೆಲ್ಲಾ ಸ್ವಾಯತ್ತ ಸಂಸ್ಥೆಗಳಲ್ಲ, ಅವರದ್ದೇ ಸಿದ್ಧಾಂತ ಇಟ್ಟುಕೊಂಡು ಅವರೂ ರಾಜಕೀಯ ಮಾಡ್ತಾರೆ" ಎಂದು ಹೇಳಿರುವುದು ವರದಿಯಾಗಿದೆ. ಈ ರಾಜಕೀಯ ಹೇಳಿಕೆಯ ಹಿಂದಿರುವ ಯಜಮಾನಿಕೆಯ ಮನಸ್ಥಿತಿ ಮತ್ತು ಸರ್ಕಾರದ ಅಸೂಕ್ಷ್ಮ ಧೋರಣೆಯನ್ನು ಖಂಡಿಸಲೇಬೇಕಿದೆ. ಸಾಂಸ್ಕೃತಿಕ ಸಂಸ್ಥೆಗಳು ಸ್ವತಂತ್ರ ಅಲ್ಲದಿರಬಹುದು, ಆದರೆ ಅವುಗಳ ಸ್ವಾಯತ್ತತೆಯನ್ನು ಕಾಪಾಡುವುದು ಜವಾಬ್ದಾರಿಯುತ ಸರ್ಕಾರದ ಕರ್ತವ್ಯ ಎನ್ನುವುದನ್ನು ಕಾಂಗ್ರೆಸ್ ಸರ್ಕಾರ ಅರಿತಿರಬೇಕಲ್ಲವೇ?

ಒಂದು ಚುನಾಯಿತ ಸರ್ಕಾರಕ್ಕೆ ತಾನೇ ಸ್ಥಾಪಿಸಿರುವ ಸಾಂಸ್ಕೃತಿಕ ಸಂಸ್ಥೆಗಳ ಮೇಲೆ ಕೊಂಚಮಟ್ಟಿನ ಅಧಿಕಾರ ಇರಬಹುದು ಅಥವಾ ಆ ಸಂಸ್ಥೆಗಳಿಗೆ ನೇಮಕ ಮಾಡುವ ಪೂರ್ಣ ಅಧಿಕಾರವೂ ಇರಬಹುದು. ಇದನ್ನು ಮೀರಿ ಸಾಂಸ್ಕೃತಿಕ ವಲಯವನ್ನು ಬೆಳೆಸುವಷ್ಟು ಮಟ್ಟಿಗೆ ಭಾರತದ ಪ್ರಜಾಪ್ರಭುತ್ವ ಇನ್ನೂ ಪಕ್ವವಾಗಿಲ್ಲ ಎನ್ನುವುದು ಸರ್ವವೇದ್ಯ. ಈ ಸಾಂಸ್ಥಿಕ ಪ್ರತಿನಿಧಿಗಳೊಡನೆ ಸಮಾಲೋಚನೆ ನಡೆಸುವ, ಸಲಹೆ ಸೂಚನೆಗಳನ್ನು ನೀಡುವ, ಮಾರ್ಗದರ್ಶನ ಒದಗಿಸುವ ನೈತಿಕ ಅಧಿಕಾರ ಖಂಡಿತವಾಗಿಯೂ ಸರ್ಕಾರಗಳಿಗೆ ಇರುತ್ತದೆ. ಆದರೆ ಇಂತಹ ಸಭೆಗಳನ್ನು ಎಲ್ಲಿ ನಡೆಸಬೇಕು ಎನ್ನುವುದು ಮುಖ್ಯವಾಗುತ್ತದೆ. ವಿಧಾನಸೌಧದ ಸಭಾಂಗಣಗಳಲ್ಲಿ, ಕನ್ನಡ ಮತ್ತು ಸಂಸ್ಕೃತಿ ಸಚಿವರ ಇಲಾಖೆಯಲ್ಲಿ, ಮುಖ್ಯಮಂತ್ರಿಗಳ ಆಡಳಿತ ಕಚೇರಿಯಲ್ಲಿ ಈ ರೀತಿಯ ಸಭೆಯನ್ನು ನಡೆಸುವುದು ಅಪೇಕ್ಷಿತ. ಆದರೆ ಪಕ್ಷದ ಅಧಿಕೃತ ಕಚೇರಿಯಲ್ಲಿ ನಡೆಸುವುದು ಅಕ್ಷಮ್ಯ, ಅನಪೇಕ್ಷಿತ. ಏಕೆಂದರೆ ಈ ಸಾಂಸ್ಥಿಕ ಪರಿಚಾರಕರು ಪಕ್ಷದ ವಕ್ತಾರರಲ್ಲ, ಸರ್ಕಾರದ ಪ್ರಚಾರಕರೂ ಅಲ್ಲ.

ದುರಂತ ಎಂದರೆ ಉಪಮುಖ್ಯಮಂತ್ರಿಗಳ ನಿಲುವನ್ನು ಸಮರ್ಥಿಸುವ ರೀತಿಯಲ್ಲಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್.ಮುಕುಂದರಾಜ್ ಅವರು "ಕಾಂಗ್ರೆಸ್ ಪಕ್ಷವನ್ನು ಸರಿದಾರಿಗೆ ತರುವ ಜವಾಬ್ದಾರಿ ನಮ್ಮಂತಹವರ ಮೇಲಿದ್ದು, ನಾವು ಕೊಳೆಗೇರಿಗೂ, ಕಾಂಗ್ರೆಸ್ ಕಚೇರಿಗೂ ಹೋಗಲು ತಯಾರಿದ್ದೇವೆ" ಎಂದು ಹೇಳಿರುವುದು ವರದಿಯಾಗಿದೆ. (ಪ್ರವಾ ಸಂಪಾದಕೀಯ 18 ಜೂನ್) ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹೇಳಿರುವಂತೆ ಸಾಹಿತಿಗಳಿಗೆ ರಾಜಕೀಯ ನಿಷಿದ್ಧವೇನಲ್ಲ, ಅವರೂ ರಾಜಕೀಯ ಮಾಡಬಹುದು, ರಾಜಕಾರಣದಲ್ಲಿ ಸಕ್ರಿಯವಾಗಿರಬಹುದು. ಅಕಾಡೆಮಿ ಅಧ್ಯಕ್ಷರಿಗೂ ಇದು ಅನ್ವಯಿಸುತ್ತದೆ. ಆದರೆ ಈ ಸಾಂಸ್ಥಿಕ ಹುದ್ದೆಗಳಲ್ಲಿರುವವರು ಮೂಲತಃ ಸಂಸ್ಕೃತಿ ಪರಿಚಾರಕರೇ ಹೊರತು ರಾಜಕೀಯ ಪ್ರಚಾರಕರಲ್ಲ ಎಂಬ ವಾಸ್ತವವನ್ನು ಅರಿತಿರಬೇಕು. ಕನ್ನಡ ಸಾಹಿತ್ಯ–ಸಾಂಸ್ಕೃತಿಕ ವಲಯದಲ್ಲಿ ಈ ರೀತಿಯ ರಾಜಕೀಯ ವಾಸನೆ ಹೆಚ್ಚಾಗಿರುವುದರಿಂದಲೇ ಸಾಹಿತ್ಯಕ ಮೌಲ್ಯಗಳು ಸತತವಾಗಿ ಕುಸಿಯುತ್ತಿರುವುದನ್ನು ಗಮನಿಸುತ್ತಲೇ ಬಂದಿದ್ದೇವೆ. ಕಳೆದ ಬಿಜೆಪಿ ಸರ್ಕಾರದ ಆಳ್ವಿಕೆಯಲ್ಲಿ ಇದು ಪರಾಕಾಷ್ಠೆ ತಲುಪಿದ್ದನ್ನು ಮೈಸೂರಿನ ರಂಗಾಯಣದ ರಂಪಾಯಣದಲ್ಲಿ ಕಂಡಿದ್ದೇವೆ.

ಸಾಂಸ್ಕೃತಿಕ ಪರಿಚಾರಕರ ಆದ್ಯತೆಗಳು

ಅಕಾಡೆಮಿ–ಪ್ರಾಧಿಕಾರದ ಪದಾಧಿಕಾರಿಗಳು, ಸದಸ್ಯರು ತಮ್ಮದೇ ಆದ ಸಿದ್ಧಾಂತಗಳನ್ನು ಅನುಸರಿಸಲಾಗಲೀ, ತಾವು ಬಯಸಿದ ರಾಜಕೀಯ ಪಕ್ಷಗಳಲ್ಲಿ ಸಕ್ರಿಯವಾಗಿರಲಾಗಲೀ ಅಥವಾ ಪಕ್ಷಗಳ ಅಧಿಕೃತ ಪ್ರಚಾರಕರಾಗಿ ದುಡಿಯುವುದಕ್ಕಾಗಲೀ ಯಾವುದೇ ಆಕ್ಷೇಪಗಳಿಲ್ಲ. ಆದರೆ ಹೀಗೆ ಮುನ್ನಡೆಯುವ ಮುನ್ನ ತಾವು ನಿಂತ ನೆಲವನ್ನು ಒಮ್ಮೆ ನೋಡಿಕೊಳ್ಳಬೇಕಲ್ಲವೇ? ವ್ಯಕ್ತಿಗತವಾದ ರಾಜಕೀಯ ಹಕ್ಕುಗಳನ್ನು ಯಾರೂ ಕಸಿದುಕೊಳ್ಳಲಾಗುವುದಿಲ್ಲ. ಆದರೆ ಆಡಳಿತ ಪಕ್ಷದ ಪ್ರತಿನಿಧಿಗಳಾಗಿ ಸಾಂಸ್ಕೃತಿಕ ಸಂಸ್ಥೆಗಳ ನಿರ್ವಹಣೆಯನ್ನು ನಡೆಸುವುದಾದರೆ ಅಲ್ಲಿ ವಂದಿಮಾಗಧರ, ಭಟ್ಟಂಗಿಗಳ ಲೋಕವೇ ಸೃಷ್ಟಿಯಾಗಿಬಿಡುತ್ತದೆ ಎನ್ನುವ ಎಚ್ಚರಿಕೆ ಇರಬೇಕಲ್ಲವೇ? ಈ ಸಂಸ್ಥೆಗಳ ಸ್ಥಾಪನೆಯ ಹಿಂದೆ ಇರುವ ಉದಾತ್ತ ಆಲೋಚನೆಗಳನ್ನು ಗೌರವಿಸುವುದೇ ಆದರೆ, ರಾಜಪ್ರಭುತ್ವದ ಪಳೆಯುಳಿಕೆಗಳನ್ನು ಕೊನೆಗೊಳಿಸುತ್ತಾ, ಆಸ್ಥಾನ ಕಲಾವಿದರ ಸಂತತಿಯನ್ನು ಕೊನೆಗಾಣಿಸುವ ಉನ್ನತ ಚಿಂತನೆ ನಮ್ಮಲ್ಲಿರಬೇಕಲ್ಲವೇ?

ಈ ಎಚ್ಚರಿಕೆ ನಮ್ಮಲ್ಲಿಲ್ಲದೆ ಹೋದರೆ ಆಡಳಿತಪಕ್ಷಗಳು ತಮ್ಮ ಚುನಾವಣಾ ಲಾಭದ ದೃಷ್ಟಿಯಿಂದ ಸಾಂಸ್ಕೃತಿಕ ಸಂಸ್ಥೆಗಳನ್ನು ನಿರ್ವಹಿಸಲಾರಂಭಿಸುತ್ತವೆ. ಕೇಂದ್ರ ಬಿಜೆಪಿ ಸರ್ಕಾರ ಕಳೆದ ಹತ್ತು ವರ್ಷಗಳಿಂದ ಇದನ್ನೇ ಮಾಡುತ್ತಾ ಬಂದಿದೆ. ಹಿಂದಿನ ಬಿಜೆಪಿ ಸರ್ಕಾರ ರಾಜ್ಯದಲ್ಲೂ

ಪುಟ 10 ಕ್ಕೆ

ಐರೋಪ್ಯ ಒಕ್ಕೂಟ ಚುನಾವಣೆಗಳು: ಅಪಶಕುನಕಾರಿ ಸೂಚನೆಗಳು

ಪ್ರಕಾಶ್ ಕಾರತ್



ಐರೋಪ್ಯ ಸಂಸತ್ತಿಗೆ ಜೂನ್ 9ರಂದು ನಡೆದ ಚುನಾವಣೆಗಳಲ್ಲಿ ಅತಿ–ಬಲಪಂಥೀಯರು ಒಂದು ಮಹತ್ವದ ಶಕ್ತಿಯಾಗಿ ಹೊರಹೊಮ್ಮಿದ್ದಾರೆ. ಅವುಗಳ ಪೈಕಿ ಅನೇಕ ಪಕ್ಷಗಳು ಬಂಡವಾಳಶಾಹಿ–ಪರ, ವಲಸೆ–ವಿರೋಧಿ ಹಾಗೂ ಹವಾಮಾನಕ್ಕೆ ಸಂಬಂಧಿಸಿ ಸಂಶಯಾಸ್ಪದ ಧೋರಣೆ ಹೊಂದಿರುವ ಪಕ್ಷಗಳಾಗಿವೆ. ಜಾಗತೀಕರಣಗೊಂಡಿರುವ ಜಗತ್ತಿನಲ್ಲಿ ಈ ಫಲಿತಾಂಶಗಳು ಅಪಶಕುನಕಾರಿಯಾದುದಾಗಿವೆ.

ಮಧ್ಯ–ಬಲಪಂಥೀಯ ಕನ್ಸರ್ವೇಟಿವ್ ಗುಂಪಾದ ಯುರೋಪಿಯನ್ ಪೀಪಲ್ಸ್ ಪಾರ್ಟಿ ಮಾತ್ರವೇ ಈ ಚುನಾವಣೆಯಲ್ಲಿ ತನ್ನ ಮತದ ಪಾಲು ಹಾಗೂ ಸ್ಥಾನಗಳನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ. ಸಮಾಜವಾದಿಗಳು ಮತ್ತು ಡೆಮೊಕ್ರಾಟರ ಪ್ರಗತಿಪರ ಮೈತ್ರಿಕೂಟ (ಸೆಂಟರ್–ಲೆಫ್ಟ್) ಮತದ ಪಾಲಿನಲ್ಲಿ (ಶೇಕಡ 1) ಹಾಗೂ ಸೀಟುಗಳಲ್ಲಿ (ಮೈನಸ್ 4) ಅಲ್ಪ ಕುಸಿತವನ್ನು ಕಂಡಿದೆ. ಕಾರ್ಪೊರೇಟ್ ಪರವಾದ ಗುಂಪು ರಿನ್ಯೂ ಯುರೋಪ್‌ನ ಓಟಿನ ಪಾಲು ಶೇಕಡ 4ರಷ್ಟು ತೀವ್ರವಾಗಿ (23 ಸ್ಥಾನಗಳು) ಕುಸಿದಿದೆ. ಎಡ ಪಕ್ಷಗಳು ಮತ್ತು ಪರಿಸರವಾದಿಗಳ ಗುಂಪು ಜಿಯುಇ/ಎನ್‌ಜಿಎಲ್ ಒಂದು ಸ್ಥಾನ ಮತ್ತು ಶೇಕಡ 0.2ರಷ್ಟು ಮತಗಳನ್ನು ಕಳೆದು ಕೊಂಡಿದೆ. ನಾನಾ ಹಸಿರು ಪಕ್ಷಗಳು, ಅಂದರೆ ಪರಿಸರ–ಪರ ಪಕ್ಷಗಳು ಒಟ್ಟು ಸುಮಾರು 20 ಸೀಟುಗಳನ್ನು ಕಳೆದು ಕೊಂಡಿವೆ.

ಅತಿಬಲಪಂಥೀಯ ಪಕ್ಷಗಳು ಗಣನೀಯ ಲಾಭ ಗಳಿಸಿವೆ. ಅವುಗಳ ಪ್ರಾತಿನಿಧ್ಯದಲ್ಲಿ 30ಕ್ಕೂ ಹೆಚ್ಚು ಸೀಟುಗಳಿಂದ ಏರಿಕೆಯಾಗಿದೆ. 720 ಸದಸ್ಯ ಬಲದ ಐರೋಪ್ಯ ಒಕ್ಕೂಟದ ಹೊಸ ಸಂಸತ್ತಿನಲ್ಲಿ ಅತಿ(ಕಟ್ಟಾ)–ಬಲಪಂಥೀಯ ಪಕ್ಷಗಳು ಒಟ್ಟಿಗೆ 145 ಸ್ಥಾನಗಳು ಅಥವಾ ಒಟ್ಟು ಸ್ಥಾನಗಳ ಸುಮಾರು ಕಾಲು ಭಾಗದಷ್ಟು ಸೀಟುಗಳನ್ನು ಹೊಂದಿವೆ. ಕಟ್ಟಾ–ಬಲಪಂಥೀಯ ಹಾಗೂ ಬಲಪಂಥೀಯ ಪಕ್ಷಗಳು ಒಟ್ಟಾಗಿ 331 ಸ್ಥಾನಗಳನ್ನು ನಿಯಂತ್ರಿಸುತ್ತವೆ. ಬಲಪಂಥೀಯರ ಬಗ್ಗೆ ಸಹಾನುಭೂತಿ ಹೊಂದಿರುವ ಅನೇಕರ ಸಹಿತ 'ಇತರ' 55 ಸದಸ್ಯರಲ್ಲಿ ಬಹಳಷ್ಟು ಜನರನ್ನು ಸೇರಿಸಿದರೆ ಬಲಪಂಥೀಯರು ಪ್ರಬಲ ಶಕ್ತಿಯಾಗಿ ಹೊರಹೊಮ್ಮಿರುವುದು ಸ್ಪಷ್ಟವಾಗುತ್ತದೆ.

ಯುರೋಪ್‌ನ ಮೂರು ಮುಖ್ಯ ದೇಶಗಳು/ಆರ್ಥಿಕತೆಯಾದ ಜರ್ಮನಿ, ಫ್ರಾನ್ಸ್ ಮತ್ತು ಇಟಲಿಯಲ್ಲಿ ಕಟ್ಟಾ–ಬಲಪಂಥೀಯರು ಗಳಿಸಿದ ಬೆಂಬಲವು ಅಪಾಯದ ಸಂಕೇತವಾಗಿದೆ.

ಜರ್ಮನಿಯಲ್ಲಿ, ಆಲ್ಟರ್ನೇಟಿವ್ ಫಾರ್ ಡ್ಯೂಶ್‌ಲ್ಯಾಂಡ್ (ಎಎಫ್‌ಡಿ) ಪ್ರತಿಶತ 16ರಷ್ಟು ಮತಗಳನ್ನು ಬಾಚಿಕೊಂಡು ಎರಡನೇ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ; ಅದು ಆಳುವ ಸೋಷಲ್ ಡೆಮೊಕ್ರಾಟರನ್ನು ಮೂರನೇ ಸ್ಥಾನಕ್ಕೆ ತಳ್ಳಿದೆ. ಫ್ರಾನ್ಸ್‌ನಲ್ಲಿ ಮೇರಿ ಲೀ ಪೆನ್‌ರ ರಸೆಂಬ್ಲ್‌ಮೆಂಟ್ ನ್ಯಾಶನಲ್ ಪಕ್ಷ ಶೇಕಡ 32 ಮತಗಳನ್ನು, ಅಂದರೆ ಅಧ್ಯಕ್ಷ ಇಮಾನ್ಯುಯೆಲ್ ಮ್ಯಾಕ್ರನ್ ಗಳಿಸಿದ ಮತದ ದುಪ್ಪಟ್ಟಿಗಿಂತ ಹೆಚ್ಚಿನ ಮತವನ್ನು ಪಡೆದಿದೆ. ಇಟಲಿಯಲ್ಲಿ ಪ್ರಧಾನಿ ಜಾರ್ಜಿಯಾ ಮೆಲನಿಯವರ ಫ್ರಾಟೆಲಿ ದ'ಇಟಾಲಿಯಾ ಪಕ್ಷವು ಶೇಕಡ 29ರಷ್ಟು ಮತಗಳನ್ನು ಗೆದ್ದು ತಾನೊಂದು ಪ್ರಮುಖ ರಾಜಕೀಯ ಶಕ್ತಿ ಎಂಬುದನ್ನು ಮರು–ಸ್ಥಾಪಿಸಿಕೊಂಡಿದೆ.

ಬಲಪಂಥೀಯರ ಪ್ರಾಬಲ್ಯಕ್ಕೆ ಕಾರಣ

ಸೋಷಲ್ ಡೆಮೊಕ್ರಾಟರು ಮತ್ತು ಕನ್ಸರ್ವೇಟಿವ್‌ಗಳು ಅಧಿಕಾರದಲ್ಲಿದ್ದಾಗ ಅನುಸರಿಸಿದ 'ಮಿತವ್ಯಯ' ನೀತಿಗಳೇ ಚುನಾವಣೆಗಳಲ್ಲಿ ಕಟ್ಟಾ–ಬಲಪಂಥೀಯರು ಗೆಲವು ಸಾಧಿಸಲು ಕಾರಣವಾಗಿದೆ. ಅವರು ಅಧಿಕಾರದಲ್ಲಿದ್ದಾಗ, ಸಮಾಜ ಕಲ್ಯಾಣ ಆಯವ್ಯಯ ಪತ್ರದಲ್ಲಿ ತೀವ್ರ ಕಡಿತ ಮಾಡಿದ್ದವು, ನಿವೃತ್ತಿ ವಯಸ್ಸನ್ನು ಏರಿಸಿದ್ದವು ಹಾಗೂ ಪಿಂಚಣಿಯನ್ನು ಗಣನೀಯವಾಗಿ ಇಳಿಸಿದ್ದವು. ಅಲ್ಲದೆ, ಜನಸಾಮಾನ್ಯರ ಜೀವನ ಸಂಕಷ್ಟಕ್ಕೆ ಸಿಲುಕುವಂತೆ ಮಾಡುವ ನಾನಾ ತೆರಿಗೆಗಳನ್ನು ಹೇರಿದ್ದರು. ಅದರ ಫಲವಾಗಿ ಜನರ ಆಕ್ರೋಶ ಭುಗಿಲೆದ್ದಿತ್ತು ಎನ್ನುವುದು ಐರೋಪ್ಯ ಆಯೋಗ ನಡೆಸಿದ ನಾನಾ ಸಮೀಕ್ಷೆಗಳಿಂದ ಗೊತ್ತಾಗಿದೆ. ಸಮೀಕ್ಷೆಗಳಲ್ಲಿ ಅದು ಪ್ರತಿಫಲಿಸಿದೆ. 2024ರ ವಸಂತ ಋತುವಿನಲ್ಲಿ ನಡೆದ ಸಮೀಕ್ಷೆಗೆ ಒಳಪಟ್ಟವರ ಪೈಕಿ ಶೇಕಡ 45ರಷ್ಟು ಜನರು ತಮ್ಮ ಜೀವನ ಮಟ್ಟ ಕುಸಿದಿದೆ ಎಂದು ಹೇಳಿದ್ದಾರೆ. ಜೀವನ ಮಟ್ಟ ಉತ್ತಮವಾಗಿದೆ ಎಂದು ಹೇಳಿರುವವರು ಪ್ರತಿಶತ ಆರು ಮಂದಿ ಮಾತ್ರ.

ಬಹುತೇಕ ಐರೋಪ್ಯರು (ಶೇ. 31) ಜೀವನ ವೆಚ್ಚವನ್ನು (ಕಾಸ್ಟ್ ಆಫ್ ಲಿವಿಂಗ್) ಪ್ರಮುಖ ವಿಷಯವಾಗಿ ಗುರುತಿಸಿದ್ದರು. ಶೇಕಡ 26ರಷ್ಟು ಮಂದಿ ನಿರುದ್ಯೋಗ ಮತ್ತು ಆರೋಗ್ಯ ವಿಚಾರವನ್ನು ಮುಖ್ಯ ವಿಷಯವಾಗಿ ಪರಿಗಣಿಸಿದ್ದರು. ಪ್ರತಿಶತ 55ರಷ್ಟು ಜನರು ತಮ್ಮ ರಾಷ್ಟ್ರೀಯ ಸರ್ಕಾರಗಳ ವಿರುದ್ಧ ಅವಿಶ್ವಾಸ ವ್ಯಕ್ತಪಡಿಸಿದ್ದಾರೆ. ಜನರ ಬೇಡಿಕೆಗಳನ್ನು ಈಡೇರಿಸಲು ಅವುಗಳು ವಿಫಲವಾಗಿರುವುದೇ ಇದಕ್ಕೆ ಕಾರಣವಾಗಿದೆ.

ಹದಗೆಡುತ್ತಿರುವ ಆರ್ಥಿಕ ಪರಿಸ್ಥಿತಿಗಳು ಮತ್ತು ಪ್ರಮುಖ ರಾಜಕೀಯ ಪಕ್ಷಗಳಲ್ಲಿನ ನಂಬಿಕೆ ಕುಸಿದಿರುವುದು ಎಎಫ್‌ಡಿ, ರಸೆಂಬ್ಲ್‌ಮೆಂಟ್ ನ್ಯಾಶನಲ್ ಮತ್ತು ಫ್ರಾಟೆಲಿ ದ'ಇಟಾಲಿಯಾದಂಥ ಅತಿ–ಬಲಪಂಥೀಯ ಪಕ್ಷಗಳು ಬೆಳವಣಿಗೆ ಸಾಧಿಸಲು ನೆರವಾಗಿದೆ. 'ಮುಖ್ಯವಾಹಿನಿಯ, ವ್ಯವಸ್ಥೆಪರ' ಪಕ್ಷಗಳ ಬಗೆಗಿನ ನಿರಾಶೆಯಿಂದಾಗಿ ಶೇಕಡ 44ರಷ್ಟು ಜನರು ಎಎಫ್‌ಡಿಗೆ ಮತ ನೀಡಿರುವುದು ಜರ್ಮನಿಯಲ್ಲಿ ನಡೆಸಲಾದ ಸಮೀಕ್ಷೆಯೊಂದರಲ್ಲಿ ತಿಳಿದು ಬಂದಿದೆ. ಜನರಲ್ಲಿರುವ ಅತೃಪ್ತಿಯನ್ನು ಬಳಸಿಕೊಂಡ ಈ ಕಟ್ಟಾ ಬಲಪಂಥೀಯ ಪಕ್ಷಗಳು ಆರ್ಥಿಕ ಪ್ರಶ್ನೆಗಳಿಂದ ಜನರ ಗಮನವನ್ನು ಬೇರೆಡೆ ಸೆಳೆಯುವಂತೆ ಮಾಡುವಲ್ಲಿ ಯಶಸ್ವಿಯಾಗಿವೆ. ಅವುಗಳು ಇಸ್ಲಾಮಾಫೋಬಿಯಾವನ್ನು ಕೆರಳಿಸಿ ವಿಷಮಯ ಪ್ರಚಾರವನ್ನು ನಡೆಸಿದವು. ವಲಸಿಗರ ವಿರುದ್ಧ ಈ ಅಪಪ್ರಚಾರ ನಡೆಸಿದ್ದು ಸಮಾಜದಲ್ಲಿ ಆಳವಾದ ಬಿಕ್ಕಟ್ಟನ್ನು ಸೃಷ್ಟಿಸಿತು. ನ್ಯಾಯಸಮ್ಮತತೆ ಹಾಗೂ ಅಧಿಕಾರದಲ್ಲಿ ಪಾಲು ಪಡೆದಿದ್ದಕ್ಕೆ ಪ್ರತಿಯಾಗಿ ಕೆಲವು ಕಟ್ಟಾ ಬಲಪಂಥೀಯ ಪಕ್ಷಗಳು ತಮ್ಮ ಬೇಡಿಕೆಗಳಲ್ಲಿ ಹೊಂದಾಣಿಕೆ ಮಾಡಿಕೊಳ್ಳುತ್ತಿವೆ. ಅವುಗಳು ಐರೋಪ್ಯ ಒಕ್ಕೂಟಕ್ಕೆ ತಮ್ಮ ವಿರೋಧವನ್ನು ತಗ್ಗಿಸುತ್ತಿವೆ. ಈ ಎರಡೂ ವಲಯಗಳು ಒಟ್ಟಿಗೆ ಬಂದರೆ ಐರೋಪ್ಯ ಒಕ್ಕೂಟದ ಒಳಗಡೆಯೇ ವಲಸೆ ಕುರಿತು ಕಟುವಾದ ನಿಲವನ್ನು ತೆಗೆದುಕೊಳ್ಳಬಹುದು ಎಂದು ಅವುಗಳಿಗೆ ಆಶ್ವಾಸನೆ ನೀಡಲಾಗಿತ್ತು.

ಬಂಡವಾಳದ ಹಿತವನ್ನು ರಕ್ಷಿಸುವ ಎಲ್ಲರಿಗೂ ಸಾಮಾನ್ಯವಾದ ನಂಬಿಕೆಯ ಆಧಾರದಲ್ಲಿ ಎಲ್ಲಾ ಬಲಪಂಥೀಯ ಶಕ್ತಿಗಳು ಒಂದಾಗಲು ಯುರೋಪ್‌ನ ಆಳುವ ವರ್ಗಗಳು ನೆರವಾಗುತ್ತಿವೆ. ಜಾರ್ಜಿಯಾ ಮೆಲನಿ ಜತೆ ಕೈ ಜೋಡಿಸುವ ಮೂಲಕ ಕನ್ಸರ್ವೇಟಿವ್ ಆದ ಯುರೋಪಿಯನ್ ಪೀಪಲ್ಸ್ ಪಾರ್ಟಿಯು ಜಾರ್ಜಿಯಾ ಮೆಲನಿಯ ನವ–ಫ್ಯಾಸಿಸ್ಟ್ ಪಕ್ಷಕ್ಕೆ ನ್ಯಾಯಸಮ್ಮತತೆಯನ್ನು ಒದಗಿಸಿ ಕೊಟ್ಟಿದೆ. ಇದು ಜನಪ್ರಿಯ ಪ್ರತಿರೋಧಗಳನ್ನು ಲೆಕ್ಕಿಸದೆ ಐರೋಪ್ಯ ಒಕ್ಕೂಟದಲ್ಲಿ ಕೆಲವು ಕೈಗಾರಿಕೋದ್ಯಮ–ಪರ ಕಾನೂನುಗಳು ಅಂಗೀಕಾರಗೊಳ್ಳಲು ನೆರವಾಗಿದೆ.

ರಾಷ್ಟ್ರ ರಾಜಕಾರಣದಲ್ಲಿ ಕೂಡ ಇದೇ ಧೋರಣೆಯನ್ನು ನಾವು ಕಾಣಬಹುದಾಗಿದೆ. ಪಿಂಚಣಿ ಸುಧಾರಣೆಗಳ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದ ಕಾರ್ಮಿಕರು ಮತ್ತು 'ಯೆಲ್ಲೋ ವೆಸ್ಟ್' ಪ್ರತಿಭಟನೆಕಾರರ ಮೇಲೆ ದಾಳಿ ನಡೆಸಿದ ಮ್ಯಾಕ್ರನ್ ಸರ್ಕಾರ, ಪ್ರತಿಭಟನೆಕಾರರನ್ನು 'ಇಸ್ಲಾಮೋ–ಎಡಪಂಥೀಯರು' ಹಾಗೂ 'ಕಲ್ಯಾಣ ಕಬಳಿಸುವ ವಲಸಿಗರು' ಎಂದು ವರ್ಣಿಸಿದೆ. ಲೇ ಪೆನ್ ಕೂಡ ಇದೇ ರೀತಿಯ ಭಾಷೆಯನ್ನು ಬಳಸಿದ್ದಾರೆ. ಈ ಒಮ್ಮತವು ನ್ಯಾಯಸಮ್ಮತತೆಯನ್ನು ಒದಗಿಸಿದೆ ಹಾಗೂ ಕಡು–ಬಲಪಂಥೀಯರು ತಮ್ಮ ನೆಲೆಯನ್ನು ವಿಸ್ತರಿಸಲು ನೆರವಾಗಿದೆ. ಇತ್ತೀಚಿನ ಸಮೀಕ್ಷೆಯೊಂದರ ಪ್ರಕಾರ, ಲೀ ಪೆನ್ ಜತೆಗಿನ ಮೈತ್ರಿಗೆ ತಮ್ಮ ಬೆಂಬಲವಿದೆ ಎಂಬುದಾಗಿ ರಿಪಬ್ಲಿಕನ್ ಪಕ್ಷದ ಮತದಾರರ ಪೈಕಿ ಶೇಕಡ 50ರಷ್ಟು ಜನರು ಹೇಳಿದ್ದಾರೆ. ಈ ರೀತಿಯಾಗಿ ಕ್ಷುಲ್ಲಕತೆಯನ್ನು ಮುಖ್ಯವಾಹಿನಿಗೆ ತರಲಾಗುತ್ತಿದೆ.

ಬೆಳ್ಳಿ ರೇಖೆ

ಒಟ್ಟಾರೆ ಕರಿಛಾಯೆಯ ನಡುವೆ, ಈ ಫಲಿತಾಂಶಗಳಲ್ಲಿ ಬೆಳ್ಳಿ ರೇಖೆಯೊಂದು ಕಾಣಿಸಿದೆ. ಫಿನ್‌ಲ್ಯಾಂಡ್‌ನಲ್ಲಿ, ಎಡ ಮೈತ್ರಿಕೂಟ (ವ್ಯಾಸೆಮಿಸ್ಟೊಲಿಟೊ) ಶೇಕಡ 17.3 ಮತಗಳನ್ನು ಗಳಿಸಿದೆ. ಕಟು–ಬಲಪಂಥೀಯ ಫಿನ್ಸ್ ಪಕ್ಷದ ಮತ ಗಳಿಕೆ ಪಾಲು ಶೇ. 6.2ರಷ್ಟು ಕುಸಿದು ಕೇವಲ ಶೇ. 7.6 ಓಟು ಗಳಿಸಿದೆ. ಡೆನ್ಮಾರ್ಕ್‌ನಲ್ಲಿ ಸೋಷಲಿಸ್ಟ್ ಪೀಪಲ್ಸ್ ಪಾರ್ಟಿ (ಎಸ್‌ಎಫ್) ಶೇಕಡ 17.4 ಮತಗಳೊಂದಿಗೆ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. 2019ಕ್ಕೆ ಹೋಲಿಸಿದರೆ ಅದರ ಮತಗಳಿಕೆ ಪ್ರಮಾಣ ಶೇ. 4.2ರಷ್ಟು ಹೆಚ್ಚಾಗಿದೆ. ಇಲ್ಲಿ ಆಳುವ ಸೋಷಲ್ ಡೆಮೊಕ್ರಾಟರು ಶೇ. 5.9ರಷ್ಟು ಮತ ನಷ್ಟ ಹೊಂದಿ ಕೇವಲ ಶೇ. 15.6 ಮತ ಗಳಿಸಿದ್ದಾರೆ. ಜರ್ಮನಿಯಲ್ಲಿ ಸಹ್ರಾ ವೇಜೆಂಕ್‌ನೆಶ್ಟ್ ನೇತೃತ್ವದ ಪಕ್ಷ ಆರು ಸ್ಥಾನಗಳಲ್ಲಿ ಜಯಿಸುವುದರೊಂದಿಗೆ ಶುಭಾರಂಭ ಮಾಡಿದೆ. ವೇಜೆಂಕ್‌ನೆಶ್ಟ್, ವರ್ಗ ರಾಜಕಾರಣಕ್ಕೆ ಹೆಚ್ಚಿನ ಒತ್ತು ನೀಡುವ ವೇದಿಕೆಯನ್ನು ರಚಿಸಿದ್ದಾರೆ.

ಕಮ್ಯೂನಿಸ್ಟ್ ಪಕ್ಷಗಳ ಸಾಧನೆ

ಗ್ರೀಸ್, ಬೆಲ್ಜಿಯಂ ಮತ್ತು ಝೆಕ್ ಗಣರಾಜ್ಯದಲ್ಲಿ ಕೂಡ ಮತ ಪಾಲನ್ನು ಹೆಚ್ಚಿಸಿಕೊಳ್ಳುವುದರೊಂದಿಗೆ ಕಮ್ಯೂನಿಸ್ಟ್ ಪಕ್ಷಗಳು ಉತ್ತಮ ಸಾಧನೆ ಮಾಡಿವೆ. ದುಡಿಯುವ ವರ್ಗದ ಹಿತಗಳನ್ನು ಎತ್ತಿ ಹಿಡಿಯುವುದು, ಜನರ ಜೀವನೋಪಾಯದ ಪ್ರಶ್ನೆಗಳಲ್ಲಿ ಸಕ್ರಿಯವಾಗಿ ಮಧ್ಯಪ್ರವೇಶ, ವಲಸೆ ವಿಚಾರದಲ್ಲಿ ಸರಿಯಾದ ನಿಲವು, ಮತ್ತು ಮಿತವ್ಯಯ ನೀತಿ ವಿರುದ್ಧ ರಾಜಿರಹಿತ ಹೋರಾಟ –ಇವೇ ಮೊದಲಾದವುಗಳು ಕಮ್ಯೂನಿಸ್ಟ್ ಪಕ್ಷಗಳು ಜನರ ಪ್ರೀತಿಗೆ ಒಳಗಾಗಿ ಅವರ ವಿಶ್ವಾಸವನ್ನು ಗೆಲ್ಲಲು ಕಾರಣವಾಗಿವೆ. ಈ ಫಲಿತಾಂಶಗಳು ಅದಕ್ಕೆ ಸ್ಪಷ್ಟ ಸೂಚನೆಯಾಗಿವೆ.

ಪೋರ್ಚುಗಲ್ ಮತ್ತು ಸೈಪ್ರಸ್‌ನಲ್ಲಿ ಕಮ್ಯೂನಿಸ್ಟ್ ಪಕ್ಷಗಳ ಮತದಲ್ಲಿ ಇಳಿಕೆ ದಾಖಲಾಗಿದ್ದು ಅವುಗಳು ಚುನಾವಣಾ ಫಲಿತಾಂಶ ಮತ್ತು ಕಾರ್ಯಕ್ಷಮತೆಯ ಪರಾಮರ್ಶೆ ಮಾಡುತ್ತಿವೆ. ಅವುಗಳ ಆರಂಭಿಕ ಪ್ರತಿಕ್ರಿಯೆ ನೋಡಿದರೆ, ತಮ್ಮ ನೇತೃತ್ವದ ಹೋರಾಟಗಳನ್ನು ಕ್ರೋಡೀಕರಿಸಲು ಮತ್ತು ಪಕ್ಷದ ಸಂಘಟನಾ ಸಂರಚನೆಗಳನ್ನು ಬಲಪಡಿಸಲು ಪ್ರಯತ್ನಗಳನ್ನು ನಡೆಸುವ ಸುಳಿವು ಸಿಕ್ಕಿದೆ.

ಜನರಿಗೆ ಕಳವಳ

ಕಡು–ಬಲಪಂಥೀಯರ ಬೆಳವಣಿಗೆಯು ಯುರೋಪ್‌ನಾದ್ಯಂತದ ಜನರಲ್ಲಿ ಕಳವಳವನ್ನು ಹುಟ್ಟು ಹಾಕಿದೆ. ಅವರು ಅಪಾಯದ ಬಗ್ಗೆ ಎಚ್ಚೆತ್ತು ಕಾರ್ಯೋನ್ಮುಖರಾಗಲು ಆರಂಭಿಸಿದ್ದಾರೆ. ಫ್ರಾನ್ಸ್‌ನಲ್ಲಿ, ಸೆಂಟರ್–ಲೆಫ್ಟ್ ಮತ್ತು ಲೆಫ್ಟ್ ಪಕ್ಷಗಳಾದ ಫ್ರಾನ್ಸ್ ಇನ್‌ಸುಮೈಸ್, ಸೋಷಲಿಸ್ಟ್ ಪಾರ್ಟಿ, ಫ್ರಾನ್ಸ್ ಕಮ್ಯೂನಿಸ್ಟ್ ಪಕ್ಷ (ಪಿಸಿಎಫ್) ಮತ್ತು ಲೆಸ್ ಕೊಲೊಜಿಸ್ಟರ್ಸ್ ಒಟ್ಟಾಗಿ ಜನಪ್ರಿಯ ರಂಗವೊಂದನ್ನು (ಪಾಪ್ಯುಲರ್ ಫ್ರಂಟ್) ರಚಿಸಿಕೊಂಡಿವೆ. ಫ್ರೆಂಚ್ ಸಂಸತ್ತಿಗೆ ನಡೆದ ಹಠಾತ್ ಚುನಾವಣೆಗಳಲ್ಲಿ ಅತಿ–ಬಲಪಂಥೀಯರು ಮುಂದೊಡ್ಡಿದ ಸವಾಲುಗಳನ್ನು ಎದುರಿಸುವ ಉದ್ದೇಶದಿಂದ ಈ ರಂಗವನ್ನು ರಚಿಸಲಾಗಿದೆ. ಫಲಿತಾಂಶ ಪ್ರಕಟವಾದ ಒಂದೇ ವಾರದಲ್ಲಿ ಈ ರಂಗ ಅಸ್ತಿತ್ವಕ್ಕೆ ಬಂದಿದೆ. ಫ್ರಾನ್ಸ್‌ನಾದ್ಯಂತ ನಡೆದ ರ‍್ಯಾಲಿಗಳಿಗೆ ಪ್ರತಿಕ್ರಿಯೆಯಾಗಿ ರಂಗ ಅಸ್ತಿತ್ವಕ್ಕೆ ಬಂದಿದೆ. ರ‍್ಯಾಲಿಗಳಲ್ಲಿ ಭಾಗವಹಿಸಿದ್ದ ಸಾವಿರಾರು ಜನರು ಕಟ್ಟಾ–ಬಲಪಂಥೀಯರ ಬೆಳವಣಿಗೆಗೆ ಆತಂಕ ವ್ಯಕ್ತಪಡಿಸಿ ಎಡಪಂಥೀಯರು ಒಗ್ಗಟ್ಟಾಗಬೇಕೆಂಬ ಬಯಕೆಯನ್ನು ವ್ಯಕ್ತಪಡಿಸಿದ್ದರು. ಜನಪ್ರಿಯ ರಂಗವು ಒಂದು ಕರಡು ಪ್ರಣಾಳಿಕೆಯನ್ನು ರೂಪಿಸಿದ್ದು ಕನಿಷ್ಠ ವೇತನ ಏರಿಕೆ, ಸಾರ್ವಜನಿಕ ಸೇವೆಗಳಲ್ಲಿ ಹೂಡಿಕೆ, ನಿವೃತ್ತಿ ಸುಧಾರಣೆಯ ರದ್ದತಿ, ಅತಿ ಶ್ರೀಮಂತರ ಮೇಲೆ ತೆರಿಗೆ ಹೇರಿಕೆ ಪದ್ಧತಿಯ ಪುನಾರಂಭ ಮತ್ತು ಪರಿಸರ ಯೋಜನೆಯತ್ತ ಕ್ರಮ –ಮುಂತಾದ ಆಶ್ವಾಸನೆಗಳನ್ನು ನೀಡಿದೆ. ಮಿತವ್ಯಯದ ಹೆಸರಿನಲ್ಲಿ ಜಾರಿಗೊಳಿಸಲಾಗಿರುವ ಕ್ರಮಗಳನ್ನು ರದ್ದುಪಡಿಸುವುದು ರಂಗದ ಗುರಿಯಾಗಿದೆ.

ಅತಿ–ಬಲಪಂಥೀಯರ ಅಪಾಯವನ್ನು ತಡೆಯಬೇಕಾದರೆ ಆರ್ಥಿಕ ನೀತಿಗಳಲ್ಲಿ ಅವರನ್ನು ಎದುರಿಸಬೇಕು ಹಾಗೂ ಅವರ ಸಾಮಾಜಿಕ ಮತ್ತು ಸಾಂಸ್ಕೃತಿಕ ನೀತಿಗಳಿಗೆ ಸವಾಲೊಡ್ಡಬೇಕು. ವಿವಿಧ ಆಯಾಮಗಳ ಹೋರಾಟಗಳೊಂದಿಗೆ ಶೋಷಿತರ ಒಗ್ಗಟ್ಟನ್ನು ರೂಪಿಸುವುದೊಂದೇ ಕಡು–ಬಲಪಂಥೀಯರನ್ನು ಸೋಲಿಸಲು ಇರುವ ಏಕೈಕ ಮಾರ್ಗವಾಗಿದೆ.

ಅನು: ವಿಶ್ವ



ಚಳವಳಿಗಳೇ ಬಿಜೆಪಿಯನ್ನು ಸೋಲಿನ ಅಂಚಿಗೆ ತಳ್ಳಿದವು

ಡಾ|| ವಿಜೂಕೃಷ್ಣನ್

> ಸಾಮೂಹಿಕ ಚಳುವಳಿಗಳು ಮತ್ತು ಪ್ರಯತ್ನಗಳೇ, ನರೇಂದ್ರ ಮೋದಿ ಅಜೇಯರಲ್ಲ ಎಂಬ ಅಭಿಪ್ರಾಯವನ್ನು ಮತ್ತು ವಿಶ್ವಾಸವನ್ನು ಜನರಿಗೆ ನೀಡಿವೆ. ಸಂವಿಧಾನ, ಪ್ರಜಾಪ್ರಭುತ್ವ, ಜಾತ್ಯತೀತತೆ, ಫೆಡರಲ್ ಹಕ್ಕುಗಳಿಗಾಗಿ ನಿಸ್ವಾರ್ಥವಾಗಿ ಶ್ರಮಿಸಿದ ಸಾವಿರಾರು ಜನರನ್ನು ನಾವು ಮರೆಯಲು ಸಾಧ್ಯವಿಲ್ಲ. ನರೇಂದ್ರ ಮೋದಿ ಅಧಿಕಾರಕ್ಕೆ ಬಂದ ಮೊದಲ ದಿನದಿಂದ ಬಿಜೆಪಿ ಆಡಳಿತದ ವಿರುದ್ಧ ಒಂದು ಸ್ಥಿರವಾದ, ಅವಿರತ ಹೋರಾಟ ನಡೆಸಿದವರು ರೈತರು ಮತ್ತು ಕಾರ್ಮಿಕರು. 'ರೈತ ಮತ್ತು ಕಾರ್ಮಿಕ ಚಳವಳಿಗಳು' ಪ್ರೇರಕ ಶಕ್ತಿಯಾಗಿ ನಿಂತರೆ, ಗೆಲುವು ಸಾಧ್ಯ ಎಂಬ ವಾತಾವರಣ ಮತ್ತು ಆತ್ಮವಿಶ್ವಾಸವನ್ನು ಮೂಡಿಸಿದವು.

ಇತ್ತೀಚಿನ ಲೋಕಸಭಾ ಚುನಾವಣೆಯ ಫಲಿತಾಂಶಗಳು, ಜನಾಂದೋಲನಗಳ ಗೆಲುವಿನೊಂದಿಗೆ, ಸರ್ವಾಧಿಕಾರಿ, ಕೋಮುವಾದಿ ಮತ್ತು ಕಾರ್ಪೊರೇಟ್ ಪರ ಆಡಳಿತ ನಡೆಸುತ್ತಿದ್ದ ನರೇಂದ್ರ ಮೋದಿ ನೇತೃತ್ವದ ಎನ್.ಡಿ.ಎ.ಗೆ ಬಲವಾದ ಪ್ರತಿರೋಧವನ್ನು ಬಹಿರಂಗಪಡಿಸಿತು. ದಶಕದ ಹಿಂದೆ ನರೇಂದ್ರ ಮೋದಿ ಅಧಿಕಾರಕ್ಕೆ ಬಂದ ಮೊದಲ ದಿನದಿಂದ ಬಿಜೆಪಿ ಆಡಳಿತದ ವಿರುದ್ಧ ಒಂದು ಸ್ಥಿರವಾದ, ಅವಿರತ ಹೋರಾಟ ನಡೆಸಿದವರು ರೈತರು ಮತ್ತು ಕಾರ್ಮಿಕರು.

ನಿರಂಕುಶ ಮತ್ತು ಜನವಿರೋಧಿ ಮೋದಿ ಸರಕಾರ 2014ರಲ್ಲಿ ಭೂಸ್ವಾಧೀನ ಸುಗ್ರೀವಾಜ್ಞೆ ಹೊರಡಿಸಿದ ಕೂಡಲೇ ಅದರ ವಿರುದ್ಧ ಹಾಗೂ ಸಮಸ್ಯೆಗಳ ಆಧಾರದಲ್ಲಿ ಐಕ್ಯತೆಯನ್ನು ಸ್ಥಾಪಿಸಿ 'ಭೂಮಿ ಅಧಿಕಾರ ಆಂದೋಲನ' ನಡೆಸಿದ ಹೋರಾಟಗಳ ಜೊತೆಗೆ, ವಿರೋಧ ಪಕ್ಷಗಳೂ ಸಂಸತ್ತಿಗೆ ಮುತ್ತಿಗೆ ಹಾಕಿದ್ದರಿಂದ ಆ ಸುಗ್ರೀವಾಜ್ಞೆಯನ್ನು ಸರ್ಕಾರ ಅನಿವಾರ್ಯವಾಗಿ ಹಿಂಪಡೆಯಬೇಕಾಯಿತು. ಇದು ನರೇಂದ್ರ ಮೋದಿ ನೇತೃತ್ವದ ಸರ್ಕಾರಕ್ಕೆ ಮೊದಲ ಸೋಲು. ನಿಸ್ಸಂದೇಹವಾಗಿ, ಸಮಸ್ಯೆಗಳನ್ನು ಕೈಗೆತ್ತಿಕೊಂಡು ಐಕ್ಯ ಹೋರಾಟಗಳ ಪ್ರಯತ್ನದಿಂದ ಮಾತ್ರ ಇದು ಸಾಧ್ಯವಾಯಿತು.

ಅನೇಕ ಸಮಸ್ಯೆಗಳ ವಿರುದ್ದ ಹೋರಾಟ

ಈ ಗೆಲುವಿಗಷ್ಟೇ ಹೋರಾಟ ನಿಲ್ಲಲಿಲ್ಲ. ಜನರ ಜೀವನೋಪಾಯದ ಮೇಲಿನ ದಾಳಿ, ನೋಟು ಅಮಾನ್ಯೀಕರಣದಿಂದ ಉಂಟಾದ ಬಿಕ್ಕಟ್ಟು, ಗೋ ರಕ್ಷಣೆಯ ಹೆಸರಿನಲ್ಲಿ ದಾಳಿ, ಸಾರ್ವಜನಿಕ ವಲಯದ ಉದ್ದಿಮೆಗಳ ಖಾಸಗೀಕರಣ ಮತ್ತು ಅವುಗಳ ಮಾರಾಟದ ವಿರುದ್ಧ, ಅರಣ್ಯ ಹಕ್ಕುಗಳನ್ನು ಕಸಿದುಕೊಳ್ಳುವುದರ ವಿರುದ್ಧ ಮತ್ತು ಸಾರ್ವಜನಿಕ ಉದ್ದಿಮೆಗಳನ್ನು ಮಾರಿ ಸಂಪನ್ಮೂಲ ಕ್ರೋಢೀಕರಿಸುವ "ರಾಷ್ಟ್ರೀಯ ಹಣಗಳಿಕೆಯ ಪೈಪ್ ಲೈನ್" (Monetization pipeline) ನಂತಹ ಅನೇಕ ಸಮಸ್ಯೆಗಳ ವಿರುದ್ದ ಹೋರಾಟಗಳನ್ನು ಪ್ರಾರಂಭಿಸಿದರು. ಕೇಂದ್ರೀಯ ಕಾರ್ಮಿಕ ಸಂಘಗಳ ಜಂಟಿ ವೇದಿಕೆ (Joint Platform of Central Trade Union)ಯು ಸುದೀರ್ಘ ಕಾಲದಿಂದ ಅಸ್ತಿತ್ವದಲ್ಲಿದೆ ಜೊತೆಗೆ, ಆಯಾ ಸಂಘಗಳು ದಶಕಗಳಿಂದ ನವ ಉದಾರವಾದಿ ನೀತಿಗಳನ್ನು ಎದುರಿಸುವಲ್ಲಿ ಪ್ರಮುಖ ಪಾತ್ರ ವಹಿಸಿವೆ. ಅವರ ಅನುಭವಗಳೂ ಕೂಡ ರೈತ ಚಳವಳಿಗೆ ಪ್ರಯೋಜನವಾಯಿತು. 2017 ರ ಜೂನ್ ನಲ್ಲಿ ಬಿಜೆಪಿ ಆಡಳಿತವಿರುವ ಮಧ್ಯಪ್ರದೇಶದ ಮಂದಾಸೌರ್ ನಲ್ಲಿ ನಡೆದ ಪೋಲೀಸರ ಗುಂಡಿನ ದಾಳಿಯಲ್ಲಿ ರೈತರು ಸಾವನ್ನಪ್ಪಿದ ನಂತರ, "ಅಖಿಲ ಭಾರತ ಸಂಘರ್ಷ ಸಮನ್ವಯ" ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯು ವಿವಿಧ ರೀತಿಯಲ್ಲಿ ಹೋರಾಟವನ್ನು ಸಂಘಟಿಸಿದೆ.

ನಾಸಿಕ್ ನಿಂದ ಮುಂಬೈವರೆಗೆ ಕಿಸಾನ್ ಲಾಂಗ್ ಮಾರ್ಚ್

2018 ರ ಮಾರ್ಚ್ ನಲ್ಲಿ ನಾಸಿಕ್ ನಿಂದ ಮುಂಬೈವರೆಗೆ ದೀರ್ಘವಾಗಿ ಸಾಗಿದ ಕಿಸಾನ್ ಲಾಂಗ್ ಮಾರ್ಚ್ ಅನ್ನು ಜನರ ಆಕಾಂಕ್ಷೆಗಳಿಗೆ ಅನುಗುಣವಾಗಿ ಆಯೋಜಿಸಲಾಗಿತ್ತು. ಈ ಲಾಂಗ್ ಮಾರ್ಚ್ ಬಿಜೆಪಿಯನ್ನು ಸೋಲಿಸುವುದು ಸಾಧ್ಯವೆಂದೂ, ಬಿಜೆಪಿ ಅಜೇಯ ಶಕ್ತಿ ಎಂಬ ಅಭಿಪ್ರಾಯ ಕೇವಲ ಕಾರ್ಪೊರೇಟ್ ಮಾಧ್ಯಮಗಳ ಪ್ರಚಾರ ಸೃಷ್ಟಿ ಮಾತ್ರ ಎಂಬ ಸ್ಪಷ್ಟವಾದ ಸಂದೇಶವನ್ನು ರವಾನಿಸಿತು. ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ರೈತ ವಿರೋಧಿ ಎಂಬ ಘೋಷಣೆಯು ಬಿಜೆಪಿ ಆಡಳಿಕ್ಕೆ ವಿರುದ್ದವಾದ ವಾತಾವರಣವನ್ನು ಸೃಷ್ಟಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. 2019ರಲ್ಲಿ ಪುಲ್ವಾಮಾ ಘಟನೆ, ಬಾಲಾಕೋಟ್ ವೈಮಾನಿಕ ದಾಳಿ ಆ ನಂತರ... ತೀವ್ರ ರಾಷ್ಟ್ರೀಯವಾದಿ ಉನ್ಮಾದದ ಪ್ರಚಾರದ ಹಿನ್ನೆಲೆಯಲ್ಲಿ ಬಿಜೆಪಿ ಗೆಲುವು ಸಾಧಿಸಿದ್ದರೂ... ಅದಕ್ಕೂ ಹಿಂದೆ ನಡೆದ ಚುನಾವಣೆಗಳಲ್ಲಿ ಮಧ್ಯಪ್ರದೇಶ, ರಾಜಸ್ಥಾನ ಮತ್ತು ಛತ್ತೀಸ್ ಗಢದಲ್ಲಿ ಬಿಜೆಪಿ ಸೋತಿದ್ದನ್ನು ಮರೆಯುವಂತಿಲ್ಲ.

ಐತಿಹಾಸಿಕ ರೈತರ ಮತ್ತು ಕಾರ್ಮಿಕರ ಹೋರಾಟ

ನರೇಂದ್ರ ಮೋದಿ ಅವರು ಎರಡನೇ ಅವಧಿಗೆ ಆಯ್ಕೆಯಾದ ನಂತರ ಹೋರಾಟಗಳು ತೀವ್ರಗೊಂಡವು. ತೀವ್ರವಾದ ದಬ್ಬಾಳಿಕೆಯನ್ನು ಎದುರಿಸುತ್ತಿದ್ದ 750 ಸಂಗಾತಿಗಳು ತಮ್ಮ ಪ್ರಾಣವನ್ನು ಪಣಕ್ಕಿಟ್ಟು, ಐತಿಹಾಸಿಕ ರೈತರ ಮತ್ತು ಕಾರ್ಮಿಕರ ಐಕ್ಯ ಹೋರಾಟ ನಡೆಸಿದರು. ಇದರ ಫಲವಾಗಿ, ನರೇಂದ್ರ ಮೋದಿ ಅನಿವಾರ್ಯವಾಗಿ ತಮ್ಮ ಸೋಲನ್ನು ಒಪ್ಪಿಕೊಂಡು, ಕಾರ್ಪೊರೇಟ್ ಪರವಾದ ಮೂರು ಕೃಷಿ ಕಾನೂನುಗಳನ್ನು ಹಿಂತೆಗೆದುಕೊಂಡದ್ದು ಮತ್ತು 4 ಕಾರ್ಮಿಕ ಸಂಹಿತೆಗಳ ಜಾರಿ ತಡೆಹಿಡಿದಿದ್ದು ಹೋರಾಟಗಾರರ ನಡುವೆ ಭರವಸೆ ಮೂಡಿಸಿತು. ಸಂಯುಕ್ತ ಕಿಸಾನ್ ಮೋರ್ಚಾ, ಒಂದು ವಿನೂತನವಾದ ಸಮಸ್ಯೆಗಳ–ಆಧಾರದ ಮೇಲೆ ಐಕ್ಯತೆಯೊಂದಿಗೆ, ವರ್ಗಗಳಲ್ಲಿನ ವಿಸ್ತೃತ ಶ್ರೇಣಿಗಳ ರೈತರನ್ನು ಮುಂದೆ ತೆಗೆದುಕೊಂಡು ಹೋಗಿದೆ. ಈ ಹೋರಾಟ ನಡೆದ ಸಂದರ್ಭವಾದರೂ ಎಂಥದ್ದು ಎಂಬುದು ನಮಗೆಲ್ಲರಿಗೂ ತಿಳಿದೇ ಇದೆ. ಕರೋನಾ ಸಾಂಕ್ರಾಮಿಕ ರೋಗದ ಕುರಿತಾದ ಭಯದೊಂದಿಗೆ, ಜೊತೆಗೆ ಸರ್ಕಾರ ವಿಧಿಸಿದ ಕಠಿಣವಾದ ಲಾಕ್‌ಡೌನ್ ನಿಂದ, ದೊಡ್ಡ ಸಂಖ್ಯೆಯಲ್ಲಿ ಜನರು ತಮ್ಮ ಮನೆಗಳಿಗೆ ಸೀಮಿತವಾಗಿದ್ದ ಸಮಯದಲ್ಲಿ, ರೈತರ ಈ ಹೋರಾಟ ನಡೆಯಿತು ಎಂಬುದನ್ನು ಯಾರೂ ಮರೆಯಲು ಸಾಧ್ಯವಿಲ್ಲ. ಹೋರಾಟಗಾರರು ಮೊದಲು ಮಹಾಮಾರಿ ಎನ್ನುವ ಭಯದ ಮೇಲೆ ವಿಜಯ ಸಾಧಿಸಿದರು. ಅದರ ನಂತರ ಅವರು ಸಾಮ್ರಾಜ್ಯದ ದಬ್ಬಾಳಿಕೆಯ ಮೇಲೆ ವಿಜಯ ಸಾಧಿಸಿದರು. ಮೂರು ಕೃಷಿ ಕಾಯ್ದೆಗಳನ್ನು ಹಿಂತೆಗೆದುಕೊಂಡಾಗ, ಹೋರಾಟಗಾರರ ಅಂತಿಮ ಯಶಸ್ಸನ್ನು ತಡೆಯುವಲ್ಲಿ, ಆಡಳಿತ ವರ್ಗ ಮಾಡಿದ ಯಾವುದೇ ಸಣ್ಣ ಪ್ರಯತ್ನವೂ ಆಳುವವರ ನೆರವಿಗೆ ಬರದಂತೆ ನೋಡಿಕೊಂಡರು.

ಮುಜಾಫರ್ ನಗರ ಕಿಸಾನ್ ಮಜ್ದೂರ್ ಮಹಾ ಪಂಚಾಯತ್ ಕಾರ್ಮಿಕರು ಮತ್ತು ರೈತರ ಒಗ್ಗಟ್ಟಿನಿಂದ ಬಿಜೆಪಿಯ ವಿಭಜಕ ರಾಜಕೀಯವನ್ನು, ಕೋಮುವಾದಿ ಅಜೆಂಡಾವನ್ನು ಸೋಲಿಸುತ್ತೇವೆ ಎಂದು ಸ್ಪಷ್ಟವಾಗಿ ಘೋಷಿಸಿದೆ. ಕಾರ್ಪೊರೇಟ್ ಶೋಷಣೆಯ ವಿರುದ್ಧ ನಿರ್ಣಾಯಕ ಪಾತ್ರವನ್ನು ಎಸ್.ಕೆ.ಎಂ. ವಹಿಸಿದೆ. ಇದು ಮೊದಾನಿ ಮಾದರಿಗೆ ವಿರುದ್ಧವಾಗಿದೆ. ರೈತರನ್ನು ಅದಾನಿ, ಅಂಬಾನಿಗಳ ಹಿತಾಶಕ್ತಿಗಳ ವಿರುದ್ದವಾಗಿ ದಿಟ್ಟವಾಗಿ ನಿಲ್ಲಿಸಿದೆ. ಅದಾನಿ, ಅಂಬಾನಿಗಳು, ನಮ್ಮನ್ನು ಆಳುವ ಸರ್ಕಾರಕ್ಕೆ ಸೇರಿದ ಕಾರ್ಪೊರೇಟ್ ಕುಬೇರರಂತೆ ಚಿತ್ರಿಸಲಾಗಿದೆ. ತಮ್ಮ ಲಾಭಕ್ಕಾಗಿ ಮಾತ್ರವೇ, ಲಕ್ಷಾಂತರ ರೈತರು ಮತ್ತು ಕಾರ್ಮಿಕರ ಹಿತಾಸಕ್ತಿಗಳನ್ನು ಬಲಿಕೊಡಲು ನರೇಂದ್ರ ಮೋದಿ ಪ್ರಯತ್ನಿಸುತ್ತಿದ್ದಾರೆಂದು ಜನತೆಗೆ ತಿಳಿಯಿತು. ಈ ಸಂದೇಶವು ವಿರೋಧ ಪಕ್ಷಗಳಿಗೂ ವಿಸ್ತರಿಸಿ, ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸುವಲ್ಲಿ ಪ್ರಮುಖ ಪಾತ್ರ ವಹಿಸಿತು.

ಅನೇಕ ರೀತಿಯ ಅಭಿಯಾನ

ಬಿಜೆಪಿಯನ್ನು ಶಿಕ್ಷಿಸಬೇಕು ಎಂಬ ಕಿಸಾನ್ ಸಂಯುಕ್ತ ಮೋರ್ಚಾದ ಘೋಷಣೆ ದೇಶಾದ್ಯಂತ ಹಬ್ಬಿತ್ತು. ಬಿಜೆಪಿಯ ಕಾರ್ಪೊರೇಟ್ ಪರ ಮತ್ತು ಕೋಮುವಾದಿ ನೀತಿಗಳನ್ನು ಬಹಿರಂಗಪಡಿಸುವ ಎಸ್.ಕೆ.ಎಂ ಮತ್ತು ಜೆ.ಸಿ.ಟಿ.ಯು. (Joint Committee of Trade Unions -JCTU) ಅನೇಕ ರೀತಿಯ ಅಭಿಯಾನಗಳನ್ನು ಕೈಗೆತ್ತಿಕೊಂಡಿತು. ಅಗ್ನಿವೀರ್ ಯೋಜನೆಯ ವಿರುದ್ಧದ ಅಭಿಯಾನ, ಮಹಿಳಾ ಕುಸ್ತಿಪಟುಗಳೊಂದಿಗೆ ಆಳುವ ಪಕ್ಷದ ನಾಯಕರು ನಡೆದುಕೊಂಡ ರೀತಿಯ ಬಗ್ಗೆ ಮತ್ತು ಇತರ ಸಮಸ್ಯೆಗಳನ್ನು ಕೂಡಾ ತೆಗೆದುಕೊಂಡಿತು. ಪಂಜಾಬ್ ಮತ್ತು ಹರಿಯಾಣದಲ್ಲಿ ರೈತರ ಪ್ರತಿಭಟನೆಯಿಂದಾಗಿ, ಬಿಜೆಪಿ ಅಭ್ಯರ್ಥಿಗಳು ಚುನಾವಣಾ ಪ್ರಚಾರಕ್ಕಾಗಿ ಗ್ರಾಮೀಣ ಪ್ರದೇಶಗಳಿಗೆ ಹೋಗಲು ಸಾಧ್ಯವಾಗಲಿಲ್ಲ. ಕಾರ್ಮಿಕ ಸಂಘಗಳ ಸಮನ್ವಯದೊಂದಿಗೆ ವ್ಯಾಪಕ ಸಾಹಿತ್ಯ, ಪೋಸ್ಟರ್ ಗಳ ಪ್ರಚಾರವನ್ನು ಆಯೋಜಿಸಲಾಯಿತು. ಲಖೀಂಪುರ ಖೇರಿ ಘಟನೆಗೆ ಕಾರಣವಾದ ಐವರು ರೈತರನ್ನು ಮತ್ತು ಒಬ್ಬ ಪತ್ರಕರ್ತರ ಮೇಲೆ ವಾಹನ ಹರಿಸಿ ಅವರ ಸಾವಿಗೆ ಕಾರಣರಾದ ಅಜಯ್ ಮಿಶ್ರಾ, ಆತನ ಮಗನ ವಿರುದ್ದ ನಿರಂತರ ಹೋರಾಟ ನಡೆಸಿದರು.

4 ರಾಜ್ಯಗಳ ಗ್ರಾಮೀಣ ಕ್ಷೇತ್ರಗಳಲ್ಲಿ ಬಿಜೆಪಿಗೆ ಹೀನಾಯ ಸೋಲು

ಚುನಾವಣಾ ಫಲಿತಾಂಶದ ಮೇಲೆ ಈ ಪ್ರಚಾರಗಳೆಲ್ಲದರ ಪ್ರಭಾವ ಇದೆ. ರೈತ ಚಳವಳಿಗಳಿಗೆ, ಹೋರಾಟಗಳಿಗೆ ಪ್ರಮುಖ ಕೇಂದ್ರವಾಗಿದ್ದ ಪಂಜಾಬ್, ಹರಿಯಾಣ, ಉತ್ತರ ಪ್ರದೇಶ ಮತ್ತು ರಾಜಸ್ಥಾನ ರಾಜ್ಯಗಳ ಬಹುತೇಕ ಗ್ರಾಮೀಣ ಕ್ಷೇತ್ರಗಳಲ್ಲಿ ಬಿಜೆಪಿ ಹೀನಾಯವಾಗಿ ಸೋತಿದೆ. 'ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್' ನಲ್ಲಿ ಜಿತೇಂದ್ರ ಚೌಬೆ ಅವರ ವರದಿಯ ಪ್ರಕಾರ, ಉತ್ತರ ಪ್ರದೇಶ, ಪಂಜಾಬ್, ರಾಜಸ್ಥಾನ, ಹರಿಯಾಣ ಮತ್ತು ಮಹಾರಾಷ್ಟ್ರದ ಐದು ಕೃಷಿ ಆಧಾರಿತ ಪ್ರದೇಶಗಳಲ್ಲಿ ಬಿಜೆಪಿ 38 ಸ್ಥಾನಗಳನ್ನು ಕಳೆದುಕೊಂಡಿದೆ. ಮಹಾರಾಷ್ಟ್ರದಲ್ಲಿಯೂ ಕೃಷಿ ಆಧಾರಿತ ಪ್ರದೇಶದಲ್ಲಿ ಬಿಜೆಪಿ 12 ಸ್ಥಾನಗಳನ್ನು ಕಳೆದುಕೊಂಡಿದೆ. ಪಶ್ಚಿಮ ಯುಪಿಯಲ್ಲಿ, ಮುಜಾಫರ್ ನಗರ, ಸಹರಾನ್ ಪುರ, ಕೈರಾನಾ, ನಗೀನಾ, ಮೊರಾದಾಬಾದ್, ಸಂಭಾಲ್, ರಾಂಪುರ್ ಮತ್ತು ಮುಖ್ಯವಾಗಿ ಅಜಯ್ ಮಿಶ್ರಾ ತೇನಿ ಸ್ಪರ್ಧಿಸಿದ್ದ ಲಖಿಂಪುರ್ ಖೇರಿ ಚುನಾವಣೆಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಸೋತರು. ಪಂಜಾಬಿನಲ್ಲಿ ಒಂದೇ ಒಂದು ಸ್ಥಾನವನ್ನು ಬಿಜೆಪಿ ಗೆಲ್ಲಲು ಸಾಧ್ಯವಾಗಲಿಲ್ಲ. ಹರಿಯಾಣದಲ್ಲಿ ಐದು ಸ್ಥಾನಗಳನ್ನು ಕಳೆದುಕೊಂಡಿತು. ರಾಜಸ್ಥಾನದಲ್ಲಿ ಕಳೆದ ಚುನಾವಣೆಯಲ್ಲಿ ಬಿಜೆಪಿ ಒಟ್ಟು

ಪುಟ 10 ಕ್ಕೆ



JANASHAKTHI KANNADA VARA PATRIKE

ಶಾಲಾಪೂರ್ವ ಶಿಕ್ಷಣ ಅಂಗನವಾಡಿಗಳಲ್ಲೇ ಉಳಿಸಲು ಸರ್ಕಾರದ ನಿರ್ಧಾರ:

ಅಂಗನವಾಡಿ ನೌಕರರ ಪ್ರಬಲ ಹೋರಾಟಕ್ಕೆ ಸಂದ ಜಯ

ಸರ್ಕಾರಿ ಶಾಲೆಗಳಲ್ಲಿ ಹೊಸದಾಗಿ ಎಲ್.ಕೆ.ಜಿ, ಯು.ಕೆ.ಜಿ ಆರಂಭಿಸುವ ಕುರಿತು ಆದೇಶ ರದ್ದು ಮಾಡಿ 'ಅಂಗನವಾಡಿ ರಕ್ಷಿಸಿ ಮಕ್ಕಳನ್ನು ಉಳಿಸಿ' ಎಂಬ ಘೋಷಣೆಯೊಂದಿಗೆ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ–ಸಿಐಟಿಯು ನೇತೃತ್ವದಲ್ಲಿ, ಕಲ್ಯಾಣ ಕರ್ನಾಟಕ ವಿಭಾಗ ಹಾಗೂ ಬೆಂಗಳೂರಿನಲ್ಲಿ ಹಲವು ಪ್ರತಿಭಟನೆಗಳು ನಡೆದವು. ಹೋರಾಟದ ಫಲವಾಗಿ, ರಾಜ್ಯದಲ್ಲಿ 4 ರಿಂದ 6 ವರ್ಷದ ಮಕ್ಕಳಿಗೆ ಎಲ್.ಕೆ.ಜಿ–ಯುಕೆಜಿ ಶಿಕ್ಷಣವನ್ನು ಅಂಗನವಾಡಿಗಳಲ್ಲೇ ಉಳಿಸುವ ನಿರ್ಧಾರಕ್ಕೆ ರಾಜ್ಯ ಸರ್ಕಾರ ಬಂದಿದೆ. ಇದರೊಂದಿಗೆ ಅಂಗನವಾಡಿ ನೌಕರರ ಪ್ರಬಲ ಹೋರಾಟಕ್ಕೆ ಜಯ ಸಿಕ್ಕಂತಾಗಿದೆ. ಈ ಹೋರಾಟದ ಕುರಿತು ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಹೆಚ್.ಎಸ್.ಸುನಂದ ಅವರ ಲೇಖನ ಇಲ್ಲಿದೆ.

ಶಿಕ್ಷಣ ಇಲಾಖೆಯು ಹೊಸ ಪರಿಕಲ್ಪನೆಯೊಂದಿಗೆ 4 ರಿಂದ 6 ವರ್ಷದ ಮಕ್ಕಳಿಗೆ ಎಲ್.ಕೆ.ಜಿ–ಯುಕೆಜಿ ಶಿಕ್ಷಣವನ್ನು ಸರ್ಕಾರಿ ಶಾಲೆಗಳಲ್ಲಿ ನೀಡಲು ಶಿಕ್ಷಣ ಇಲಾಖೆಯು ಯವುದೇ ಪ್ರಜಾಸತ್ತಾತ್ಮಕ ಚರ್ಚೆಗಳಿಲ್ಲದೆ ಸುತ್ತೋಲೆ ಹೊರಡಿಸಿತ್ತು. ಕೆಕೆಆರ್ ಡಿಬಿ ಮಂಡಳಿಯ ಏಳು ಜಿಲ್ಲೆಗಳ 1008 ಸರ್ಕಾರಿ ಶಾಲೆಗಳಲ್ಲಿ ಕೂಡಲೇ ಎಲ್.ಕೆ.ಜಿ., ಯುಕೆಜಿ ಶಿಕ್ಷಣ ನೀಡಲು ಆದೇಶಿಸಿತ್ತು. ಇದುವರೆಗೂ ರಾಜ್ಯದಲ್ಲಿ 2524 ಶಾಲೆಗಳಲ್ಲಿ ಎಲ್.ಕೆ.ಜಿ–ಯುಕೆಜಿ ಶಿಕ್ಷಣವನ್ನು ಪ್ರಾರಂಭಿಸಲಾಗಿದೆ. ಇದರಿಂದ ಸರ್ಕಾರದ ಐಸಿಡಿಎಸ್ ಯೋಜನೆಯಿಂದ ನಡೆಯುವ ಅಂಗನವಾಡಿ ಕೇಂದ್ರಗಳಿಗೆ ಮತ್ತು ಶಾಲಾಪೂರ್ವ ಶಿಕ್ಷಣ ಕುರಿತ ಇಸಿಸಿಇ ಅಂಶಗಳ ಜಾರಿಗೆ ತೀವ್ರ ಧಕ್ಕೆಯಾಗಿದೆ. ಆದ್ದರಿಂದಲೇ ಕಳೆದ ಜೂನ್ 3 ರಿಂದ ನಿರಂತರವಾಗಿ ರಾಜ್ಯವ್ಯಾಪಿ ಹೋರಾಟಗಳು ಆರಂಭವಾಗಿ, ಬೆಂಗಳೂರಿನಲ್ಲಿ ಜೂನ್ 19 ಮತ್ತು 20 ರಂದು ಬೃಹತ್ ಹೋರಾಟ ನಡೆದಿದೆ.

ಬಾಲ್ಯದ ಆರೈಕೆ ಮತ್ತು ಶಿಕ್ಷಣಕ್ಕೆ ಧಕ್ಕೆ

ಶಿಕ್ಷಣ ಇಲಾಖೆಯವರ ವಾದ ಏನೆಂದರೆ, ಬಡವರ ಮಕ್ಕಳಿಗೆ ಇಂಗ್ಲಿಷ್ ಕಲಿಸಬೇಕು, ಒಂದನೇ ತರಗತಿಗೆ ಬರುವ ಮಗು ಶಾಲಾ ವ್ಯವಸ್ಥೆಗೆ ಸಿದ್ಧವಾಗಿರಬೇಕು ಮತ್ತು ಸರ್ಕಾರಿ ಶಾಲೆಗಳ ದಾಖಲಾತಿಯನ್ನು ಹೆಚ್ಚಿಸಬೇಕು, ಆದ್ದರಿಂದ ಮಕ್ಕಳು 4 ವರ್ಷದಿಂದ ಮೇಲ್ಪಟ್ಟವರಿರುವಾಗಲೇ ಪೂರ್ವ ಪ್ರಾಥಮಿಕ ಶಿಕ್ಷಣವನ್ನು ಕೊಡಬೇಕು ಎಂಬುದಾಗಿದೆ. ಯಾವುದೇ ಮಗುವಿನ ಶೇ.40 ದೈಹಿಕ ಬೆಳವಣಿಗೆ ಶೇ.85 ಮಾನಸಿಕ ಬೆಳವಣಿಗೆಯಾಗುವ ಸಂದರ್ಭದಲ್ಲಿ ಲಾಲನೆ–ಪಾಲನೆ, ಪೋಷಣೆ ಮತ್ತು ಶಿಕ್ಷಣವನ್ನು ಕೊಡುವ ಸಲುವಾಗಿಯೇ 1975 ರಲ್ಲಿ ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಪ್ರಾರಂಭವಾಗಿ, ಅಂಗನವಾಡಿ ಕೇಂದ್ರದ ಪರಿಕಲ್ಪನೆ ಕೂಡ ಬಂದಿರುವುದು. ಶಿಕ್ಷಣ ಇಲಾಖೆಯು ಹೊರಡಿಸಿರುವ ಈ ಮೇಲಿನ ಆದೇಶದಿಂದ ಅಂಗನವಾಡಿ ಕೇಂದ್ರಗಳಲ್ಲಿ 3–4 ವರ್ಷದ ಮಕ್ಕಳು ಮಾತ್ರವೇ ಉಳಿಯುತ್ತವೆ. ಆಗ ಅಂಗನವಾಡಿಗಳಲ್ಲಿ ಮಕ್ಕಳ ಸಂಖ್ಯೆ ತುಂಬಾ ಕಡಿಮೆ ಆಗುತ್ತದೆ. 49 ವರ್ಷಗಳಿಂದ ಸರ್ಕಾರದ ಮಾರ್ಗದರ್ಶನದಲ್ಲಿಯೇ ಐಸಿಡಿಎಸ್ ಮೂಲಕ ನಡೆಸಲಾಗುತ್ತಿರುವ ಬಾಲ್ಯದ ಆರೈಕೆ ಮತ್ತು ಶಿಕ್ಷಣ (ಇಸಿಸಿಇ) ಎಲ್ಲಾ ಅಂಶಗಳನ್ನು ಒಳಗೊಂಡ ಶಾಲಾಪೂರ್ವ ಶಿಕ್ಷಣಕ್ಕೆ ಗಂಭೀರವಾಗಿ ಧಕ್ಕೆಯಾಗುತ್ತದೆ. ಈ ಯೋಜನೆ ಯಾವಾಗ ಬೇಕಾದರೂ ಕುಸಿದು ಕಣ್ಮರೆಯಾಗುವ ಸಾಧ್ಯತೆ ಇದೆ.

ಕಲ್ಯಾಣ ಕರ್ನಾಟಕ ವಿಭಾಗದಲ್ಲಿ ಹೋರಾಟ

ಅಂಗನವಾಡಿ ನೌಕರರು 13–5–2024 ರಂದು ಶಿಕ್ಷಣ ಇಲಾಖೆ ಹೊರಡಿಸಿದ ಆದೇಶ ವಾಪಸ್ಸು ಪಡೆಯಲು ಒತ್ತಾಯಿಸಿ ಕಲ್ಯಾಣ ಕರ್ನಾಟಕ ವಿಭಾಗದ 7 ಜಿಲ್ಲೆಯವರು ಜೂನ್ 3 ರಂದು ಕೆಲಸ ಸ್ಥಗಿತ ಗೊಳಿಸಿ KKRDB ಮುಂದೆ ಗುಲ್ಬರ್ಗಾದಲ್ಲಿ ಹೋರಾಟ ನಡೆಸಿದರು. ಜೂನ್ 3 ರಂದು 5000 ಕ್ಕೂ ಹೆಚ್ಚು ನೌಕರರು ಹೋರಾಟ ಮುಂದುವರೆಸಿ ಆದೇಶ ತಡೆ ಆಗುವವರೆಗೂ ಹಿಂಪಡೆಯುವುದಿಲ್ಲ ಎಂದು ಪಟ್ಟು ಹಿಡಿದು ಕುಳಿತ ನಂತರ ರಾತ್ರಿ 9.30 ಗಂಟೆಗೆ ಶಿಕ್ಷಣ ಆಯುಕ್ತರು ಹೋರಾಟದ ಸ್ಥಳಕ್ಕೆ ಬಂದು ಸರ್ಕಾರದ ಗಮನಕ್ಕೆ ತರುವುದಾಗಿಯೂ, ಈ ಆದೇಶದ ತಡೆ ಮಾಡಲಾಗಿದೆ ಎಂದೂ ತಿಳಿಸಿದರು.

ಪತ್ರ ನೀಡಿದ ನಂತರ ಹೋರಾಟ ವಾಪಸ್ಸು ಪಡೆಯಲಾಯ್ತು. ಆದರೆ ಮತ್ತೆ ಜೂನ್ 12 ರಂದು ಹೋರಾಟದಲ್ಲಿ ಭಾಗವಹಿಸಿದ ಪದಾಧಿಕಾರಿಗಳ ಸಭೆ ಸೇರಿ ಮಾತುಕತೆ ನಡೆಸಿ, ಸರ್ಕಾರದ ಆದೇಶದಂತೆ ಮತ್ತೆ ಶಾಲೆಗಳಲ್ಲಿ ಎಲ್.ಕೆ.ಜಿ–ಯು.ಕೆ.ಜಿ ಪ್ರಾರಂಭಿಸುವುದಾಗಿ ತಿಳಿಸಿದರು. ಅಲ್ಲದೇ 11–5–2024 ರಂದೇ ಆದೇಶವನ್ನು ಮಾಡಿದ್ದರು. ನಂತರ ಕಲ್ಯಾಣ ಕರ್ನಾಟಕ ವಿಭಾಗದ ಸಚಿವರಾದ ಪ್ರಿಯಾಂಕ ಖರ್ಗೆ, ಈಶ್ವರಖಂಡ್ರೆ, ಶಿವಾನಂದ ಪಾಟೀಲ್, ಶರಣಪ್ರಕಾಶ ಪಾಟೀಲ್, ಬೋಸರಾಜು ಮನೆ ಮುಂದೆ ಜೂನ್ 13 ರಿಂದ ಹೋರಾಟ ನಡೆಸಲಾಯ್ತು. ರಾಜ್ಯದ ಎಲ್ಲಾ ಶಾಸಕರಿಗೂ ಮನವಿ ಪತ್ರ ಸಲ್ಲಿಸಲಾಯ್ತು. ಜೂನ್ 17 ಗುಲ್ಬರ್ಗಾದಲ್ಲಿ, ಜೂನ್ 19ರಿಂದ ಉಳಿದ 6 ಜಿಲ್ಲೆಗಳಲ್ಲಿ (ಬಳ್ಳಾರಿ, ವಿಜಯನಗರ, ಕೊಪ್ಪಳ, ಯಾದಗಿರಿ, ಬೀದರ್, ರಾಯಚೂರು) ಸಚಿವರ ಮನೆ ಮುಂದೆ ಅನಿರ್ದಿಷ್ಟವಾಗಿ ಹೋರಾಟ ನಡೆಸಿದರು.

ಬೆಂಗಳೂರಿನಲ್ಲಿ ಪ್ರತಿಭಟನೆ

ಉಳಿದ 23 ಜಿಲ್ಲೆಗಳ ಅಂಗನವಾಡಿ ನೌಕರರು ರಾಜ್ಯ ಕೇಂದ್ರ ಬೆಂಗಳೂರಿನಲ್ಲೂ ಜೂನ್ 19 ರಂದು ಅನಿರ್ದಿಷ್ಟ ಹೋರಾಟಕ್ಕೆ ಇಳಿದರು. ಬೆಂಗಳೂರಿನಲ್ಲಿ 19 ಮತ್ತು 20 ರಂದು ಎರಡು ದಿನಗಳ ಕಾಲ ನಡೆದ ಹೋರಾಟದಲ್ಲಿ 8000 ಕ್ಕೂ ಹೆಚ್ಚು ಜನ ಪಾಲ್ಗೊಂಡರು. ಇಲಾಖೆಯ ಸಚಿವರು ಈ ಆದೇಶ ಜಾರಿ ಆದಾಗಿನಿಂದ ಪತ್ರಿಕಾ ಹೇಳಿಕೆ ನೀಡುವುದಾಗಲೀ, ಶಿಕ್ಷಣ ಇಲಾಖೆಯೊಂದಿಗೆ ಚರ್ಚೆ ಮಾಡುವುದಾಗಲೀ, ಸಂಘಟನೆಯೊಂದಿಗೆ ಚರ್ಚೆ ಮಾಡುವುದಾಗಲೀ ನಡೆಸಲಿಲ್ಲ. ಜೂನ್ 19ರಿಂದ ಹೋರಾಟ ತೀವ್ರಗೊಂಡ ನಂತರ ಹೋರಾಟದ ಸ್ಥಳಕ್ಕೆ ಆಗಮಿಸಿ, ಹೋರಾಟಗಾರರನ್ನು ಉದ್ದೇಶಿಸಿ ಮನವಿ ಪತ್ರ ಪಡೆದು ಮಾತನಾಡಿದರು.

ಪ್ರತಿಭಟನಾ ಸ್ಥಳಕ್ಕೆ ಅಧಿಕಾರಿಗಳು

ಇಲಾಖೆ ಪ್ರದಾನ ಕಾರ್ಯದರ್ಶಿ ಡಾ॥ ಪ್ರಕಾಶ್, ನಿರ್ದೇಶಕರಾದ ಸಿದ್ದೇಶ್ವರ, ಜಂಟೀ ನಿರ್ದೇಶಕರಾದ ನಿಶ್ವಿಲ್ ಕೂಡ ಹೋರಾಟದ ಸ್ಥಳಕ್ಕೆ ಧಾವಿಸಿ ಮಾತನಾಡಿದರು. ಇಲಾಖೆ ನಿಮ್ಮೊಂದಿಗಿದೆ, ಶಿಕ್ಷಣ ಇಲಾಖೆಯ ಸಚಿವರು ಹಾಗೂ ಮುಖ್ಯಮಂತ್ರಿಗಳೊಂದಿಗೆ ಚರ್ಚೆ ಮಾಡಿ ಅಂಗನವಾಡಿ ಕೇಂದ್ರಕ್ಕೆ ದಕ್ಕೆ ಉಂಟಾಗದಂತೆ ಕ್ರಮವಹಿಸಲು, ಅಂಗನವಾಡಿ ಉಳಿಸಲು ಎರಡು ಇಲಾಖೆ ಸಬೆಯಲ್ಲಿ ಚರ್ಚೆ ಮಾಡುವುದಾಗಿ ತಿಳಿಸಿದರು. ಆದರೂ ಮುಖ್ಯಮಂತ್ರಿಗಳು ಮದ್ಯಪ್ರವೇಶ ಮಾಡಬೇಕೆಂದು ಒತ್ತಾಯಿಸಿ ಲಿಖಿತವಾಗಿ ಬರಬೇಕೆಂದು ಹೋರಾಟ ಮುಂದುವರೆಸಲಾಯಿತು,

ಮುಖ್ಯಮಂತ್ರಿಗಳ ಕಛೇರಿಯಲ್ಲಿ ಸಭೆ

ನಂತರ ಅಂದೇ ಸರ್ಕಾರದ ಮುಖ್ಯಕಾರ್ಯದರ್ಶಿ ಅಲೇಕ್ ರವರನ್ನು ಬೇಟಿ ಮಾಡಿ ವಾಸ್ತವ ವಿಚಾರ ಚರ್ಚಿಸಲು 20ನೇ ತಾರೀಖು ಎರಡು ಇಲಾಖೆ ಪ್ರದಾನ ಕಾರ್ಯದರ್ಶಿಗಳು, ನಿರ್ದೇಶಕರು, ಜಂಟೀ ನಿರ್ದೇಶಕರು ಸಬೆ ನಡೆಸಿ, ಎರಡು ಇಲಾಖೆ ಉಳಿಸಲು ಬೇಕಾದ ರೀತಿ ಕ್ರಮ ವಹಿಸಲು ನಿರ್ದೇಶನ ಮಾಡಿದರು. 20 ರಂದು ಮುಖ್ಯಮಂತ್ರಿಗಳ ಕಛೇರಿಯಲ್ಲಿ ಸಬೆ ನಡೆಯಿತು, 2 ಇಲಾಖೆಯ ಉನ್ನತ ಅದಿಕಾರಿಗಳು, ಮುಖ್ಯಮಂತ್ರಿಗಳು, ಇಲಾಖೆಮಂತ್ರಿ ಲಕ್ಷ್ಮಿ ಹೆಬ್ಬಾಳ್‌ಕರ್ ರವರು, ಸಚಿವ ಮಧು ಬಂಗಾರಪ್ಪ ಹಾಗೂ ಸಿಐಟಿಯು ಸಂಘಟನೆಯಿಂದ ಕಾಂ. ವರಲಕ್ಷ್ಮಿ, ಸರ್ಕಾರ ಮುಖ್ಯಕಾರ್ಯದರ್ಶಿ ಅಲೇಕ್ ರವರು ಒಂದೂವರೆ ಗಂಟೆಗಳ ಕಾಲ ಚರ್ಚೆ ಮಾಡಿ ಎರಡು ಇಲಾಖೆ ವರದಿ ಆಲಿಸಬೇಕು, ಏಕಮುಖ ತೀರ್ಮಾನ ಮಾಡಬಾರದು, ಹಾಗೂ ಅಂಗನವಾಡಿ, ಶಾಲೆ ಎರಡೂ ಸಮನ್ವಯತೆಯಿಂದ ನಡೆಸಲು ಬೇಕಾದ ರೀತಿ ಚರ್ಚೆಗಳನ್ನು ಮಾಡಿ ಮುಂದುವರಿಯಲು ತಿಳಿಸಿದರು.

ನಂತರ ಹೋರಾಟದ ಸ್ಥಳಕ್ಕೆ ಬಂದ ಸರ್ಕಾರದ ಕಾರ್ಯದರ್ಶಿ ಅಲೇಕ್ ರವರು ಹಾಗೂ ಇಲಾಖೆ ಮಂತ್ರಿಗಳು, ಇಲಾಖೆ ಅಧಿಕಾರಿಗಳು ಅಂಗನವಾಡಿ ನೌಕರರಿಗೆ ಸಭೆಯ ನಡಾವಳಿಗಳನ್ನು ಸರ್ಕಾರದ ಇಲಾಖೆಯ ನಡೆಗಳನ್ನು ತಿಳಿಸಿದ ನಂತರ ಹೋರಾಟ ಮುಂದೂಡಲಾಯಿತು. ನಂತರ ಎರಡು ಇಲಾಖೆಯ ಉನ್ನತ ಅದಿಕಾರಿಗಳ ಸಬೆ 21 ರಂದು ಮದ್ಯಾಹ್ನ 3 ಗಂಟೆಗೆ ನಡೆಯಿತು. ಸರ್ಕಾರಕ್ಕೆ ಸಂಘಟನೆಯಿಂದ ಒಂದು ಆಯೋಗ ರಚಿಸಿ ವರದಿ ಆಗುವವರೆಗೆ ಈ ಆದೇಶಗಳನ್ನು ತಡೆಮಾಡಲು ಶಾಲೆಗಳಲ್ಲಿ ಮತ್ತೆ ಎಲ್.ಕೆ.ಜಿ – ಯು.ಕೆ.ಜಿ ತೆರೆಯದಿರಲು ಮನವಿ ಮಾಡಿತು.

ಹೋರಾಟಕ್ಕೂ ಮುನ್ನ ಮುಖ್ಯಮಂತ್ರಿಯವರನ್ನು ಜೂನ್ 18 ರಂದು ಬೇಟಿ ಮಾಡಿ ಹೊಸ ಆದೇಶಗಳ

ಪುಟ 10 ಕ್ಕೆ



ಅಂಗನವಾಡಿ ಕೇಂದ್ರಗಳ ಉನ್ನತೀಕರಣಕ್ಕೆ ಸಿಎಂ ಸಮ್ಮತಿ

ರಾಜ್ಯದ ಎಲ್ಲಾ ಅಂಗನವಾಡಿ ಕೇಂದ್ರಗಳನ್ನು ಉನ್ನತೀಕರಣಕರಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಸಮ್ಮತಿ ಸೂಚಿಸಿದ್ದಾರೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಸ್ಪಷ್ಟಪಡಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯರನ್ನು ಜೂನ್ 24 ರಂದು ಭೇಟಿಯಾದ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಸಚಿವರು, ಅಂಗನವಾಡಿ ಕೇಂದ್ರಗಳಲ್ಲೆ ಪೂರ್ವ ಪ್ರಾಥಮಿಕ ಶಿಕ್ಷಣ ನೀಡಲು ತೀರ್ಮಾನಿಸಲಾಗಿದ್ದು, ಗುಣಮಟ್ಟದ ಶಿಕ್ಷಣ ಹಾಗೂ ಪೌಷ್ಠಿಕ ಆಹಾರ ನೀಡುವುದೇ ನಮ್ಮ ಉದ್ದೇಶ. ಈ ನಿಟ್ಟಿನಲ್ಲಿ ಅಂಗನವಾಡಿ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲು ಮುಖ್ಯಮಂತ್ರಿಯವರು ಸಹಮತ ವ್ಯಕ್ತಪಡಿಸಿದ್ದಾರೆ. ಮಕ್ಕಳಿಗೆ ಇಲಾಖೆಯ ಮೂಲಕವೇ ಸಮವಸ್ತ್ರ, ಪುಸ್ತಕ, ಬ್ಯಾಗ್ ನೀಡಲು ತೀರ್ಮಾನಿಸಲಾಗಿದೆ. ಜೊತೆಗೆ ಶಾಲೆಗಳ ಮಾದರಿಯಲ್ಲೆ ವರ್ಗಾವಣೆ ಪತ್ರ (ಟಿಸಿ) ನೀಡಲು ಕ್ರಮವಹಿಸಲಾಗುವುದು. ಅಂಗನವಾಡಿ ಕೇಂದ್ರಗಳಲ್ಲೆ ಪೂರ್ವ ಪ್ರಾಥಮಿಕ (LKG, UKG) ಶಿಕ್ಷಣ ನೀಡುವ ಬಗ್ಗೆ ತಜ್ಞರ ಸಮಿತಿಯನ್ನು ರಚಿಸಲು ಸಿಎಂ ಸೂಚಿಸಿದ್ದಾರೆ ಎಂದು ಹೇಳಿದರು.

ಅಂಗನವಾಡಿ ಕೇಂದ್ರಗಳನ್ನು ಉನ್ನತೀಕರಣಗೊಳಿಸಿ, ಕನ್ನಡ ಹಾಗೂ ಇಂಗ್ಲೀಷ್ ಎರಡೂ ಭಾಷೆಗಳಲ್ಲಿ ಪೂರ್ವ ಪ್ರಾಥಮಿಕ ಶಿಕ್ಷಣವನ್ನು ಕಲಿಸುವ ಚಿಂತನೆ ಇದೆ. ಪೂರ್ವಪ್ರಾಥಮಿಕ ಶಿಕ್ಷಣ ಆರಂಭಿಸುವ ಸಂಬಂಧ ಈಗಾಗಲೇ ಅಂಗನವಾಡಿ ಕಾರ್ಯಕರ್ತರೊಂದಿಗೆ ಚರ್ಚೆ ನಡೆಸಲಾಗಿದೆ. ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಶಿಕ್ಷಕಿಯರ ಪೈಕಿ 9 ಸಾವಿರ ಮಂದಿ ಪದವಿ ಪಡೆದವರಾಗಿದ್ದರೆ, 1500 ಕ್ಕಿಂತಲೂ ಹೆಚ್ಚು ಮಂದಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಹೀಗಾಗಿ, ಗುಣಮಟ್ಟದ ಶಿಕ್ಷಣ ನೀಡಿಕೆಗೆ ಯಾವುದೇ ಸಮಸ್ಯೆ ಆಗದು, ಯಾರನ್ನೂ ಕೆಲಸದಿಂದ ತೆಗೆಯುವ ಪ್ರಶ್ನೆಯೇ ಇಲ್ಲ ಎಂದು ಸಚಿವರು ಸ್ಪಷ್ಟಪಡಿಸಿದರು.

ಮುಖ್ಯಮಂತ್ರಿಗಳೊಂದಿಗೆ ನಡೆದ ಸಭೆಯಲ್ಲಿ ಶಾಲಾ ಮತ್ತು ಪ್ರಾಥಮಿಕ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಶಿಕ್ಷಣ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉನ್ನತ ಅಧಿಕಾರಿಗಳು ಉಪಸ್ಥಿತರಿದ್ದರು.

ಚಳವಳಿಗಳೇ ಬಿಜೆಪಿಯನ್ನು........ ಪುಟ 8 ರಿಂದ

25 ಸ್ಥಾನಗಳನ್ನು ಗೆದ್ದುಕೊಂಡಿದ್ದರೆ, ಕೃಷಿ ಆಧಾರಿತ ಪ್ರದೇಶದಲ್ಲಿ ಬಿಜೆಪಿ 11 ಸ್ಥಾನಗಳನ್ನು ಕಳೆದುಕೊಂಡಿತು. ಮಹಾರಾಷ್ಟ್ರದ ಈರುಳ್ಳಿ ಬೆಳೆಯುವ ಪ್ರದೇಶದಲ್ಲಿ ಇಬ್ಬರು ಕೇಂದ್ರ ಸಚಿವರು ಸೋಲು ಕಂಡಿದ್ದಾರೆ. ಎನ್.ಡಿ.ಎ. 12 ಸ್ಥಾನಗಳನ್ನು ಕಳೆದುಕೊಂಡರೆ, ಬಿಜೆಪಿಗೆ ಒಂದು ಸ್ಥಾನವೂ ಬರಲಿಲ್ಲ. ಕೃಷಿ ಸಚಿವ ಅರ್ಜುನ್ ಮುಂಡಾ ಕೂಡ ಜಾರ್ಖಂಡ್ ನಲ್ಲಿ ಸೋತಿದ್ದಾರೆ.

ರೈತರ ಹೋರಾಟದ ಪ್ರಮುಖ ನಾಯಕರ ಗೆಲುವು

ರೈತರ ಹೋರಾಟದ ಪ್ರಮುಖ ನಾಯಕರು ಮತ್ತು ಅಖಿಲ ಭಾರತ ಕಿಸಾನ್ ಸಭಾದ ಉಪಾಧ್ಯಕ್ಷರು, ರಾಜಸ್ಥಾನದ ಶಹಜಾನ್ ಪುರದ ಗಡಿಯಲ್ಲಿ 13 ತಿಂಗಳ ಕಾಲ ಹೋರಾಟಕ್ಕೆ ನೇತೃತ್ವ ವಹಿಸಿದ್ದ ಅಮ್ರಾರಾಮ್ ಅವರು ಸಿಕಾರ್ ಲೋಕಸಭಾ ಕ್ಷೇತ್ರದಿಂದ ಸಿಪಿಐ(ಎಂ) ಅಭ್ಯರ್ಥಿಯಾಗಿ, ಇಂಡಿಯಾ ಮೈತ್ರಿಕೂಟದ ಬೆಂಬಲದೊಂದಿಗೆ ಗೆಲುವು ಸಾಧಿಸಿದರು. ಬಿಹಾರದಲ್ಲಿಯೂ ಸಹ, ಸಂಯುಕ್ತ ಕಿಸಾನ್ ಮೋರ್ಚಾದ ಕರೆಗಳ ಜಂಟಿ ಹೋರಾಟದಲ್ಲಿ ಗಟ್ಟಿಯಾಗಿ ನಿಂತು ಬೆಂಬಲಿಸಿದ ಪ್ರಮುಖ ನಾಯಕ, ಅಖಿಲ ಭಾರತ ಕಿಸಾನ್ ಮಹಾಸಭಾದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಾಜಾ ರಾಮ್ ಸಿಂಗ್ ಅವರು ಕಾರಾಕಟ್ ಕ್ಷೇತ್ರದಿಂದ, ಮತ್ತೊಬ್ಬ ನಾಯಕ ಸುಧಾಮ ಪ್ರಸಾದ್ ಅವರು ಅರಾಹ್ ಕ್ಷೇತ್ರದಿಂದ 'ಇಂಡಿಯಾ' ಮೈತ್ರಿಕೂಟದ ಬೆಂಬಲದೊಂದಿಗೆ ಆಯ್ಕೆಯಾಗಿದ್ದಾರೆ. ಈ ಇಬ್ಬರೂ ಸಿಪಿಐ(ಎಂ.ಎಲ್–ಲಿಬರೇಷನ್) ಅಭ್ಯರ್ಥಿಗಳು. ತಮಿಳುನಾಡಿನ ದಿಂಡಿಗಲ್ ನಿಂದ 4 ಲಕ್ಷಕ್ಕೂ ಹೆಚ್ಚು ಮತಗಳಿಂದ ಗೆದ್ದಿರುವ ಸಿಪಿಐ(ಎಂ) ಅಭ್ಯರ್ಥಿ ಸಚ್ಚಿದಾನಂದಂ ರವರಿಗೂ ಸಹಾ 'ಇಂಡಿಯಾ' ಮೈತ್ರಿಕೂಟ ಬೆಂಬಲಿಸಿದೆ. ಅವರು ಅಲ್ ಇಂಡಿಯಾ ಕಿಸಾನ್ ಸಭಾ(ಎಐಕೆಎಸ್) ದ ನಾಯಕರೂ ಆಗಿದ್ದಾರೆ. ಬೇರೆ ರಾಜ್ಯಗಳನ್ನು ಅವಲೋಕಿಸಿದಾಗ ಈ ಹೋರಾಟಗಳ ಪ್ರಭಾವ ಇನ್ನೂ ಹೆಚ್ಚು ಸ್ಪಷ್ಟವಾಗುತ್ತದೆ.

ಮೋದಿ ಅಜೇಯರಲ್ಲ

ವಾಸ್ತವವಾಗಿ, ಈ ಸಾಮೂಹಿಕ ಚಳುವಳಿಗಳು ಮತ್ತು ಪ್ರಯತ್ನಗಳೇ, ನರೇಂದ್ರ ಮೋದಿ ಅಜೇಯರಲ್ಲ ಎಂಬ ಅಭಿಪ್ರಾಯವನ್ನು ಮತ್ತು ವಿಶ್ವಾಸವನ್ನು ಜನರಿಗೆ ನೀಡಿವೆ. ಯುವಜನರು, ವಿದ್ಯಾರ್ಥಿ, ಮಹಿಳಾ ಹೋರಾಟಗಳು, ತುಳಿತಕ್ಕೊಳಗಾದವರು ಮತ್ತು ಸಿಎಎ (ಪೌರತ್ವ ತಿದ್ದುಪಡಿ ಕಾಯಿದೆ) ವಿರುದ್ಧವಾಗಿ ನಡೆದ ಐತಿಹಾಸಿಕ ಹೋರಾಟದ ಪಾತ್ರಗಳೂ ಸಹ ಇದರಲ್ಲಿ ಒಳಗೊಂಡಿದೆ. ಭಿನ್ನಾಭಿಪ್ರಾಯದಿಂದ ಕೂಡಿದ ನಿರ್ಭೀತ ಧ್ವನಿ ಎತ್ತಿದ್ದಕ್ಕಾಗಿ, ವರ್ಷಗಟ್ಟಲೆ ಜೈಲುಗಳಲ್ಲಿ ನರಳುತ್ತಿರುವ ಅನೇಕರು ಕೂಡ, ನಿಸ್ಸಂದೇಹವಾಗಿ ಪ್ರಮುಖ ಪಾತ್ರ ವಹಿಸಿದ್ದಾರೆ. ಸಂವಿಧಾನ, ಪ್ರಜಾಪ್ರಭುತ್ವ, ಜಾತ್ಯತೀತತೆ, ಫೆಡರಲ್ ಹಕ್ಕುಗಳಿಗಾಗಿ ನಿಸ್ವಾರ್ಥವಾಗಿ ಶ್ರಮಿಸಿದ ಸಾವಿರಾರು ಜನರನ್ನು ನಾವು ಮರೆಯಲು ಸಾಧ್ಯವಿಲ್ಲ. ಧ್ರುವ ರಾಥಿ ಮತ್ತು ರವೀಶ್ ಕುಮಾರ್ ಮತ್ತು ವಿವಿಧ ವಿರೋಧ ಪಕ್ಷಗಳ ನಾಯಕರು ಮತ್ತು ನಾಗರಿಕ ಸಮಾಜದ ಸಂಘಟಿತ ಪ್ರಯತ್ನದ ಫಲವಾಗಿ ಮಾತ್ರ ನಿರಂಕುಶ ಬಿಜೆಪಿಯನ್ನು ತಿರಸ್ಕರಿಸಲಾಯಿತು. 'ರೈತ ಮತ್ತು ಕಾರ್ಮಿಕ ಚಳವಳಿಗಳು' ಪ್ರೇರಕ ಶಕ್ತಿಯಾಗಿ ನಿಂತರೆ, ಗೆಲುವು ಸಾಧ್ಯವಾಗುತ್ತದೆ ಎಂಬ ವಾತಾವರಣ ಮತ್ತು ಆತ್ಮವಿಶ್ವಾಸವನ್ನು ಮೂಡಿಸಿದವು.

(ಲೇಖಕರು: ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ

ಪೆಟ್ರೋಲ್ ದರ ಏರಿಕೆ...... ಪುಟ 3 ರಿಂದ

ಸರ್ಕಾರ ಇವುಗಳ ಮೇಲೆ ತೆರಿಗೆ ಹೆಚ್ಚಳ ಮಾಡುವ ಮೂಲಕ, ಕುಸಿತದ ಲಾಭ ಗ್ರಾಹಕರಿಗೆ ಸಿಗದಂತೆ ಮಾಡುವುದೇಕೆ ಎಂಬ ಜನರ ಪ್ರಶ್ನೆಗೂ ಸರ್ಕಾರದ ಬಳಿ ಸಿದ್ದ ಉತ್ತರವಿದೆ. ಸಚಿವರು ಹೀಗೆ ಹೇಳುತ್ತಾರೆ: "ಈ ಉತ್ಪನ್ನಗಳ ಮೇಲಿನ ಅಬಕಾರಿ ಸುಂಕ ದರಗಳನ್ನು ಅಗತ್ಯವಿರುವಾಗ ಮತ್ತು ಅಗತ್ಯವಿದ್ದಾಗ ಮಾಪನಾಂಕ ನಿರ್ಣಯಿಸುವ ಮೂಲಕ ಸರ್ಕಾರವು ಮಧ್ಯಪ್ರವೇಶಿಸಿದೆ" ಈ ಮಾತುಗಳಲ್ಲಿ ಎಷ್ಟೊಂದು ವಂಚನೆ ಅಡಗಿದೆಯಲ್ಲವೇ?

ಕೊರೋನಾ ಸಂದರ್ಭದಲ್ಲಿ ಹೆಚ್ಚಳ!!

ಇನ್ನೂ ದುಖಃಕರ ಸಂಗತಿಯೆಂದರೆ, ಕೋವಿಡ್–19 ರ ಸಾಂಕ್ರಾಮಿಕ ರೋಗದಿಂದ ಇಡೀ ದೇಶದ ಜನತೆ ಸಂಕಷ್ಟ ಎದುರಿಸುತ್ತಿದ್ದಾಗ, ಅಂದರೆ ಸಾಂಕ್ರಾಮಿಕ ರೋಗದ ಪ್ರಾರಂಭದ ನಂತರ 2020 ರಲ್ಲಿ ಅಂತರಾಷ್ಟ್ರೀಯ ತೈಲ ಬೆಲೆಗಳು ಕುಸಿದಿದ್ದ ಅವಧಿಯಲ್ಲೇ ಮೋದಿ ಸರ್ಕಾರವು, 2020 ರ ಮಾರ್ಚ್ ಮತ್ತು ಮೇ ನಡುವೆ ಎರಡು ಕಂತುಗಳಲ್ಲಿ ಪೆಟ್ರೋಲ್ ಮೇಲೆ 13 ರೂಪಾಯಿ ಮತ್ತು ಡೀಸೆಲ್ ಮೇಲೆ 16 ರೂಪಾಯಿಗಳಷ್ಟು ಅಬಕಾರಿ ಸುಂಕವನ್ನು ಹೆಚ್ಚಿಸಿತು. ಆ ಮೂಲಕ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಕಡಿಮೆಯಾಗದಂತೆ ನೋಡಿಕೊಂಡಿತು. ಕೊರೋನಾ ಸಾಂಕ್ರಾಮಿಕ ಅವಧಿಗೂ ಮುನ್ನ ಜುಲೈ 2019 ರಲ್ಲಿ ಪ್ರತಿ ಲೀಟರ್ಗೆ ತಲಾ 2 ರೂ ಹೆಚ್ಚಿಸಲಾಗಿತ್ತು. ಇದೂ ಸೇರಿದಂತೆ ಕೇವಲ 10 ತಿಂಗಳ ಅವಧಿಯಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಕ್ರಮವಾಗಿ 15 ರೂ. ಮತ್ತು 18 ರೂ. ಹೆಚ್ಚಳ ಮಾಡಿದೆ. ಇದಕ್ಕೆ ಅನುಗುಣವಾಗಿ ರಾಜ್ಯ ಸರ್ಕಾರಗಳು ವಿಧಿಸುವ ಶೇಕಡಾವಾರು ವ್ಯಾಟ್ ತೆರಿಗೆಯೂ ಹೆಚ್ಚಳವಾಗಿದೆ.

2021–22ರಲ್ಲಿ 4.92 ಲಕ್ಷ ಕೋಟಿ ಗಳಿಕೆ

ಕೇಂದ್ರ ಸರ್ಕಾರವು 2014–15ನೇ ಹಣಕಾಸು ವರ್ಷದಲ್ಲಿ ಸುಂಕ ಮತ್ತು ತೆರಿಗೆಗಳಲ್ಲಿ ಪೆಟ್ರೋಲಿಯಂ ವಲಯದಿಂದ ರೂ.1.72 ಲಕ್ಷ ಕೋಟಿ ಗಳಿಸಿದ್ದರೆ, ಇದು 2021–22 ರಲ್ಲಿ ರೂ.4.92 ಲಕ್ಷ ಕೋಟಿಗೆ ಏರಿದೆ ಎಂದು ಸಚಿವರು ಸಂಸತ್ತಿನಲ್ಲಿ ಹೇಳಿದರು. ಅಂದರೆ, ಮೋದಿ ಅಧಿಕಾರಕ್ಕೆ ಬಂದ ವರ್ಷದಲ್ಲಿ ಪೆಟ್ರೋಲಿಯಂ ತೆರಿಗೆಗಳಿಂದ ಕೇಂದ್ರ ಸರ್ಕಾರ ಗಳಿಸಿದ್ದಕ್ಕಿಂತಲೂ ರೂ.3.20 ಲಕ್ಷ ಕೋಟಿ ಹೆಚ್ಚು ಗಳಿಕೆಯನ್ನು 2021–22 ರ ಒಂದು ವರ್ಷದಲ್ಲಿ ಮಾಡಿದೆ.

ಇದೆಲ್ಲವೂ ಜನಸಾಮಾನ್ಯರ ಮೇಲೆ ತೆರಿಗೆ ಹೊರೆ ಹೆಚ್ಚು ಮಾಡುವ ಮೂಲಕ ಕೇಂದ್ರ ಸರ್ಕಾರದ ಖಜಾನೆ ತುಂಬಿಸಿಕೊಂಡಿತು. ಜನಸಾಮಾನ್ಯರನ್ನು ಸುಲಿಗೆ ಮಾಡುವ ಸರ್ಕಾರದ ಇಂತಹ ನೀತಿಗಳಿಗೆ, ಭಾರತ ಸರ್ಕಾರದ ಮುಕ್ತ ಆರ್ಥಿಕ ನೀತಿಗಳು, ಬಂಡವಾಳಗಾರರ ಪರವಾದ ನೀತಿಗಳು ಕಾರಣ. ಮತ್ತು ಇಂತಹ ಜನವಿರೋಧಿ ನೀತಿಗಳನ್ನು ವಿರೋಧಿಸದೆ ಅವುಗಳನ್ನು ತಾನೂ ಅನುಸರಿಸುತ್ತಿರುವ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರವೂ ಕಾರಣ. ಇಂತಹ ನವ ಉದಾರವಾದಿ ನೀತಿಗಳ ವಿರುದ್ಧ ಧ್ವನಿ ಎತ್ತಿ ಹೋರಾಡದೆ, ಈ ಜನವಿರೋಧಿ ನೀತಿಗಳನ್ನು ಹಿಮ್ಮೆಟ್ಟಿಸದೆ, ಜನಸಾಮಾನ್ಯರು ಅಧಿಕ ತೆರಿಗೆ ಹೊರೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ●

ಸಾಂಸ್ಕೃತಿಕ ಲೋಕವೂ ರಾಜಕೀಯ ಸಂದಿಗ್ಧತೆಗಳೂ... ಪುಟ 6 ರಿಂದ

ಇದೇ ಪ್ರಯೋಗವನ್ನು ಮಾಡಿದೆ. ಕಳೆದ ಚುನಾವಣೆಗಳಲ್ಲಿ ಹಿಂದುತ್ವ ರಾಜಕಾರಣವನ್ನು ಸೋಲಿಸಿ ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸಿದ ಕರ್ನಾಟಕದ ಪ್ರಗತಿಪರ ಮನಸುಗಳು, ಪ್ರಜ್ಞಾವಂತ ಮತದಾರರು ಹಾಗೂ ತಳಸಮುದಾಯಗಳು ಈ ರೀತಿಯ ಪ್ರಯೋಗಗಳಿಂದ ಮುಕ್ತವಾದ ಒಂದು ಆರೋಗ್ಯಕರ ಸಾಂಸ್ಕೃತಿಕ ಲೋಕವನ್ನು ನಿರೀಕ್ಷಿಸುತ್ತಿದ್ದಾರೆ. ರಾಜಕೀಯ ಹಿತಾಸಕ್ತಿಗಾಗಿಯೇ ಅಧಿಕಾರ ಕೇಂದ್ರಗಳ ಮುಂದೆ ಕೈಕಟ್ಟಿ ನಿಲ್ಲುವ ಕೆಲವೇ ವ್ಯಕ್ತಿಗಳತ್ತ ನೋಡುತ್ತಾ ಇಡೀ ಸಾಂಸ್ಕೃತಿಕ ವಲಯವನ್ನೇ ಕಲುಷಿತಗೊಳಿಸುವುದು ಬಿಜೆಪಿಯ ಸಾಂಸ್ಕೃತಿಕ ರಾಜಕಾರಣದ ಮತ್ತೊಂದು ಚಹರೆಯಾಗಿ ಕಾಣುತ್ತದೆ.

ರಾಜ್ಯ ಸರ್ಕಾರದ ಈ ನಡೆಯ ವಿರುದ್ಧ ರಾಜ್ಯದ ಸಾಹಿತ್ಯ–ಸಂಸ್ಕೃತಿ ವಲಯ ಎದ್ದುನಿಲ್ಲಬೇಕಿದೆ. ಈಗಾಗಲೇ ಅಕಾಡೆಮಿ–ಪ್ರಾಧಿಕಾರದ ಹುದ್ದೆಗಳನ್ನು ಅಲಂಕರಿಸಿರುವವರು ಉಪಮುಖ್ಯಮಂತ್ರಿಯವರ ಹೇಳಿಕೆಗೆ ಪ್ರತಿಕ್ರಯಿಸಬೇಕಿದೆ. ಇದು ಅವರ ನೈತಿಕ ಜವಾಬ್ದಾರಿ. "ನಾವು ನೀವೆಣಿಸದಂತಹವರಲ್ಲ" ಎಂದು ಖಚಿತವಾಗಿ ಹೇಳುವುದೇ ಆದರೆ ತಮ್ಮ ಸ್ಥಾನಗಳನ್ನು ತ್ಯಜಿಸಿ ಹೊರಬರಬೇಕಾಗುತ್ತದೆ. ಆದರೆ ಈವರೆಗೂ ಈರೀತಿಯ ಮೆಲುದನಿಯೂ ಕೇಳಿಬಂದಿಲ್ಲದಿರುವುದು ಸೋಜಿಗ ಮೂಡಿಸುತ್ತದೆ. ಅಥವಾ ಫಲಾಕಾಂಕ್ಷಿಗಳೋ ಫಲಾನುಭವಿಗಳೋ ಎನಿಸಿಕೊಳ್ಳುವುದಾದರೆ ಸ್ಥಾನಭದ್ರ ಮಾಡಿಕೊಳ್ಳಲು ಅಡ್ಡಿಯಿಲ್ಲ. ಭವಿಷ್ಯದ ತಲೆಮಾರಿಗೆ ಒಂದು ಸ್ಪಷ್ಟ ಸಾಂಸ್ಕೃತಿಕ ಹಾದಿಯನ್ನು ತೋರಬೇಕಾದ ಜವಾಬ್ದಾರಿ ವರ್ತಮಾನದ ಸಮಾಜದ ಹಿರಿಯ ತಲೆಮಾರಿನ ಮೇಲಿದೆ, ಈ ಸಮಾಜದ ಪ್ರಜ್ಞಾವಂತ ಸಾಂಸ್ಕೃತಿಕ ಮನಸುಗಳ ಮೇಲಿದೆ. ಈ ಜವಾಬ್ದಾರಿ ನಿಭಾಯಿಸುವುದರಲ್ಲಿ ನಾವು ವಿಫಲವಾದರೆ ಇತಿಹಾಸ ನಮ್ಮನ್ನು ಕ್ಷಮಿಸುವುದಿಲ್ಲ. ●

ಅಂಗನವಾಡಿ ನೌಕರರ ಪ್ರಬಲ ಹೋರಾಟಕ್ಕೆ ಸಂದ ಜಯ... ಪುಟ 9 ರಿಂದ

ಅಪಾಯದ ಬಗ್ಗೆ ವಿವರಣೆ ನೀಡಲಾಗಿತ್ತು. ಐಸಿಡಿಎಸ್ ಉಳಿಸಿ ಮಕ್ಕಳನ್ನು ರಕ್ಷಿಸಲು ಸಲಹೆ ಸೂಚನೆ ನೀಡಲು ಶಿಕ್ಷಣ, ಆರೋಗ್ಯ ತಜ್ಞರನ್ನು, ಚಿಂತಕರನ್ನು ಒಳಗೊಂಡ ಸಮಿತಿ ಮಾಡಲಾಗಿದೆ. ಈ ಸಬೆಯೂ ಏಪ್ರಿಲ್ 4, ಮೇ 15, ಜೂನ್ 5 ರಂದು, ಜೂನ್ 15 ರಂದು, ಜೂನ್ 22 ರಂದು ಸಮಾನ ಮನಸ್ಕರು ಸೇರಿ ಚರ್ಚೆ ನಡೆಸಿದರು. ಕಾನೂನ್ಮಾಕವಾಗಿ ಹೋರಾಟ ಮಾಡಲು ಹಾಗೂ 3–6 ವರ್ಷಗಳ ಮಗುವಿಗೆ ಪೂರ್ವ ಪ್ರಾಥಮಿಕ ಶಿಕ್ಷಣ ಕಡ್ಡಾಯ ಗೊಳಿಸಲು ಕಾನೂನು ರಚಿಸಲು ಚರ್ಚಿಸಲಾಯಿತು.

ಇನ್ನುಳಿದ ಬೇಡಿಕೆಗಳಿಗೆ ಹೋರಾಟ ಮುಂದುವರಿಯುತ್ತದೆ

ನಮ್ಮ ಇನ್ನುಳಿದ ಬೇಡಿಕೆಗಳು ಮತ್ತು ಶಿಫಾರಸುಗಳನ್ನು ಇಟ್ಟು ಹೋರಾಟ ಮುಂದುವರಿಸಲಾಗುವುದು. ಐಸಿಡಿಎಸ್ ನಲ್ಲಿರುವ ಇಸಿಸಿಇ ಗೆ ಅನುದಾನವನ್ನು ನಿರಂತರವಾಗಿ ಹೆಚ್ಚಳ ಮಾಡಲು, ಶಿಕ್ಷಣ ಇಲಾಖೆ ಅತಿಥಿ ಶಿಕ್ಷಕರಿಗೆ ನೀಡುವ ಗೌರವಧನವನ್ನು ಅಂಗನವಾಡಿ ಕಾರ್ಯಕರ್ತೆಯರಿಗೆ ಹೆಚ್ಚುವರಿಯಾಗಿ ನೀಡಲು, ಇಸಿಸಿಇ ಶಿಕ್ಷಣವನ್ನು ಅಂಗನವಾಡಿ ಕೇಂದ್ರಗಳಲ್ಲಿಯೇ ಕೊಡುವ ಬಗ್ಗೆ ಕಾನೂನು ರೂಪಿಲು, ಗ್ರ್ಯಾಚುಟಿ ಆದೇಶದಲ್ಲಿರುವ ಚಿಕ್ಕಪುಟ್ಟ ದೋಷಗಳನ್ನು ಸರಿಪಡಿಸಲು, ಅಂಗನವಾಡಿ ಕಾರ್ಯಕರ್ತೆಯರನ್ನು ನಿರಂತರವಾಗಿ ಚುನಾವಣಾ ಕೆಲಸಗಳಿಂದ ಮುಕ್ತಿಗೊಳಿಸಲು (ಚುನಾವಣಾ ಕೆಲಸಗಳಿಗೆ ನಿವೃತ್ತ ಅಂಗನವಾಡಿ ನೌಕರರನ್ನು ಬಳಸಬಹುದು), ಐಸಿಡಿಎಸ್ ಯೋಜನೆಯನ್ನು ಪ್ರತ್ಯೇಕ ನಿರ್ದೇಶನಾಲಯವಾಗಿ ಪರಿವರ್ತಿಸಲು ಹೋರಾಟ ಮುಂದುವರಿಸಲಾಗುವುದು. ●

ಡಿವೈಎಫ್ಐ ರಾಜ್ಯ ಅಧ್ಯಕ್ಷರಾಗಿ ಲವಿತ್ರ, ಪ್ರಧಾನ ಕಾರ್ಯದರ್ಶಿಯಾಗಿ ಬಸವರಾಜ ಪೂಜಾರ ಆಯ್ಕೆ

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್ಐ) ರಾಜ್ಯ ಸಮಿತಿ ಸಭೆಯಲ್ಲಿ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಈ ಸಭೆಯಲ್ಲಿ ಡಿವೈಎಫ್ಐ ಅಖಿಲ ಭಾರತ ಅಧ್ಯಕ್ಷರಾದ ಎ.ಎ. ರಹೀಂ ಭಾಗಿಯಾಗಿದ್ದರು.

ನೂತನ ಸಮಿತಿಯ ಪದಾಧಿಕಾರಿಗಳು

ಅಧ್ಯಕ್ಷರು: ಲವಿತ್ರ

ಪ್ರಧಾನ ಕಾರ್ಯದರ್ಶಿ: ಬಸವರಾಜ ಪೂಜಾರ

ಖಜಾಂಚಿ: ಸಂತೋಷ ಬಜಾಲ್

ಉಪಾಧ್ಯಕ್ಷರು: ಪೃಥ್ವಿ ಎಂ.ಜಿ, ವಿ. ಅಂಬರೀಷ್, ಬಿ.ಕೆ. ಇಮ್ತಿಯಾಜ್, ಯು. ಯರ್ರಿಸ್ವಾಮಿ.

ಸಹಕಾರ್ಯದರ್ಶಿಗಳು: ಹರೀಶ ಬಾಗೇಪಲ್ಲಿ, ಮಂಜುನಾಥ ಈಡಿಗರ, ಶ್ರೀನಿವಾಸ್ ಗುಡಿಬಂಡೆ, (ಯುವತಿ ಸ್ಥಾನ ಖಾಲಿ ಬಿಡಲಾಗಿದೆ.)

ರಾಜ್ಯ ಸಮಿತಿ ಸದಸ್ಯರು: ಮಾಧುರಿ ಬೋಳಾರ, ಡಾ. ಜೀವನರಾಜ್ ಕುತ್ತಾರ್, ಮನೋಜ್, ನಿತಿನ್ ಕುತ್ತಾರ್, ಇರ್ಫಾನ್ ಚೇಳೂರು, ನಿರೇಶಬಾಬು ಕೋಲಾರ, ರಾಜು ನಾಯಕ ರಾಯಚೂರು, ಶಿವಕುಮಾರ್ ಮಂಡ್ಯ, ಗಣೇಶ ದಾಸ್ ಕುಂದಾಪುರ, ಇಮ್ರಾನ್ ಖಾನ್, ರಾಘವೇಂದ್ರ ಮೈಸೂರು, ಮಂಜುನಾಥ ಎಂ.ಜಿ. ತುಮಕೂರು, ರಮೇಶ ತಳವಾರ, ಶಶಿಕಾಂತ ಡಾಂಗೆ, ಹನುಮಂತ ಯರಗಟ್ಟಿ, ರೇಣುಕಾ ಕಹಾರ, ಅಮರೇಶ ಕಡಗದ, ಭೀಮನಗೌಡ ಸುಂಕೇಶ್ವರಹಾಳ.



ಬುಡಮಟ್ಟದ ಹೋರಾಟಗಳಿಂದ ಲೋಕಸಭೆಯನ್ನು ತಲುಪಿದ ರೈತರ ಎರಡು ಗಟ್ಟಿ ದನಿಗಳು

ನಿರ್ದಿಷ್ಟವಾಗಿ ರೈತರ ಪ್ರತಿಭಟನೆಗಳ ಪರಿಣಾಮವಾಗಿ ಕನಿಷ್ಠ 5 ರಾಜ್ಯಗಳಲ್ಲಿ ಬಿಜೆಪಿ 38 ಸ್ಥಾನಗಳನ್ನು ಕಳೆದುಕೊಳ್ಳುವಂತಾಗಿದೆ. ಅಂದರೆ ಬಿಜೆಪಿ ಬಹುಮತ ಪಡೆಯದಂತೆ ಮಾಡುವಲ್ಲಿ ರೈತರ ಹೋರಾಟಗಳು ಪ್ರಮುಖ ಪಾತ್ರವಹಿಸಿವೆ.

ಅಷ್ಟು ಮಾತ್ರವೇ ಅಲ್ಲ, ಹಲವು ವರ್ಷಗಳಿಂದ ಬೀದಿಗಿಳಿದು ಹೋರಾಟ ನಡೆಸಿದ, ಹಲವು ರೈತ ಹೋರಾಟಗಳಿಗೆ ನೇತೃತ್ವ ನೀಡಿದ ಮುಖಂಡರು ಮೊದಲ ಬಾರಿಗೆ ಲೋಕಸಭೆಯನ್ನು ಪ್ರವೇಶಿಸಿದ್ದಾರೆ. ಇವರಲ್ಲಿ ಎರಡು ಮುಖ್ಯ ಮುಖಗಳೆಂದರೆ ರಾಜಸ್ತಾನದ ಸಿಕಾರ್ ಕ್ಷೇತ್ರದಿಂದ ಗೆದ್ದಿರುವ ಆಮ್ರಾ ರಾಮ್ ಮತ್ತು ಬಿಹಾರದ ಕಾರಾಕಟ್ ಕ್ಷೇತ್ರದಿಂದ ಗೆದ್ದಿರುವ ರಾಜಾರಾಮ್.


ಆಮ್ರಾ ರಾಮ್

ಆಮ್ರಾರಾಮ್ ಇತ್ತೀಚೆಗೆ ಸಂಯುಕ್ತ ಕಿಸಾನ್ ಮೋರ್ಚಾದ ನೇತೃತ್ವದಲ್ಲಿ ದಿಲ್ಲಿಯನ್ನು ಸುತ್ತುವರೆದ ಐತಿಹಾಸಿಕ ಹೋರಾಟದಲ್ಲಿ ರಾಜಸ್ಥಾನ್–ಹರ್ಯಾಣ ಗಡಿಯಲ್ಲಿ ಸತ್ಯಾಗ್ರಹಕ್ಕೆ ನೇತೃತ್ವ ನೀಡಿರುವವರು. ಈ ಯಶಸ್ವಿ ಹೋರಾಟ ಮಾತ್ರವಲ್ಲ, ರಾಜಸ್ಥಾನದ ಈರುಳ್ಳಿ ರೈತರ ಹೋರಾಟ, ವಿದ್ಯುತ್ತಿಗಾಗಿ ಹೋರಾಟ, ವಿಮಾಕಂಪನಿಗಳ ಮೋಸದ ವಿರುದ್ಧ ಹೋರಾಟ ಇಂತಹ ಹತ್ತು–ಹಲವು ಯಶಸ್ವಿ ಹೋರಾಟಗಳಿಗೆ ನೇತೃತ್ವ ನೀಡಿದವರು. ವಿದ್ಯಾರ್ಥಿ ದೆಸೆಯಿಂದಲೇ ಹೋರಾಟದ ಜೀವನ ಆರಂಭಿಸಿದ ಆಮ್ರಾರಾಮ್ ತಮ್ಮ ಹೋರಾಟಗಳ ಬಲದಲ್ಲಿ ಸಿಪಿಐ(ಎಂ) ಅಭ್ಯರ್ಥಿಯಾಗಿ ವಿಧಾನ ಸಭೆಗೆ ನಡೆದ ಚುನಾವಣೆಗಳಲ್ಲಿ ಹಲವು ಬಾರಿ ಗೆದ್ದು ರಾಜಸ್ಥಾನದ ವಿಧಾನಸಭೆಯಲ್ಲಿ ರೈತರ ಪರವಾಗಿ ದನಿ ಮೊಳಗಿಸಿದವರು. ಈ ಬಾರಿ ಮೊದಲ ಬಾರಿಗೆ ಲೋಕಸಭೆಗೆ ಆರಿಸಿ ಹೋಗುತ್ತಿದ್ದಾರೆ. ಇವರು ಅಖಿಲ ಭಾರತ ಕಿಸಾನ್ ಸಭಾದ ಉಪಾಧ್ಯಕ್ಷರೂ ಆಗಿದ್ದಾರೆ.


ರಾಜಾರಾಮ್

ಬಿಹಾರದ ಕಾರಾಕಟ್ ಕ್ಷೇತ್ರದಿಂದ ಸಿಪಿಐ(ಎಂಎಲ್)–ಲಿಬರೇಷನ್ ಪಕ್ಷದ ಅಭ್ಯರ್ಥಿಯಾಗಿ ಚುನಾಯಿತರಾಗಿರುವ ರಾಜಾರಾಂ ರೈತರ, ವಿಶೇಷವಾಗಿ ಬಿಹಾರ ಮತ್ತು ಝಾರ್ಖಂಡ್‌ನ ರೈತರ ಒಂದು ಗಟ್ಟಿ ದನಿ. ಕಿಸಾನ್ ಸಂಘರ್ಷ ಸಮನ್ವಯ ಸಮಿತಿಯ ಬಿಹಾರ ಮತ್ತು ಝಾರ್ಖಂಡ್ ಘಟಕಕ್ಕೆ ನೇತೃತ್ವದ ನೀಡಿರುವ ಇವರು ಕೂಡ ಈ ಮೊದಲು ಅವಿಭಜಿತ ಬಿಹಾರದ ರೈತರ ಹಲವು ಯಶಸ್ವಿ ಹೋರಾಟಗಳ ಮೂಲಕ ಬಿಹಾರದ ವಿಧಾನಸಭೆಯಲ್ಲಿ ರೈತರ ಪರವಾಗಿ ಸತತವಾಗಿ ದನಿಯತ್ತಿಕೊಂಡು ಬಂದವರು, ಈ ಬಾರಿ ಮೊದಲ ಬಾರಿಗೆ ಲೋಕಸಭೆಯನ್ನು ಪ್ರವೇಶಿಸುತ್ತಿದ್ದಾರೆ. ಬಿಜೆಪಿಯ ಟಿಕೆಟ್ ಪಡೆಯಲಾಗದ್ದರಿಂದ ಸ್ವತಂತ್ರವಾಗಿ ಸ್ಪರ್ಧಿಸಿದ ಪ್ರಖ್ಯಾತ ಭೋಜ್ಪುರಿ ಸಂಗೀತಗಾರ ಪವನ್ ಕುಮಾರ್ ಮತ್ತು ಬಿಜೆಪಿಯ ಅಭ್ಯರ್ಥಿ ಉಪೇಂದ್ರ ಖುಶ್ವಾಹ, ಈ ಇಬ್ಬರು ಪ್ರಬಲ ಪ್ರತಿಸ್ಪರ್ಧಿಗಳನ್ನು ಎದುರಿಸಿ ಗೆದ್ದಿದ್ದಾರೆ. ಇವರು ಅಖಿಲ ಭಾರತ ಕಿಸಾನ್ ಮಹಾಸಭಾದ ರಾಷ್ಟ್ರೀಯ ಕಾರ್ಯದರ್ಶಿಯಾಗಿದ್ದಾರೆ.

ಸಂಯುಕ್ತ ಕಿಸಾನ್ ಮೋರ್ಚಾದ ನೇತೃತ್ವದಲ್ಲಿ ಪ್ರಬಲ ಹೋರಾಟದ ಎದುರು ಕೊನೆಗೂ ಸೋತು ಮೂರು ರೈತ–ವಿರೋಧಿ ಕರಾಳ ಕಾಯ್ದೆಗಳನ್ನು ಹಿಂತೆಗೆದುಕೊಳ್ಳಬೇಕಾಗಿ ಬಂದರೂ, ಆಗ ವಚನವಿತ್ತಂತೆ ಮೋದಿ ಸರಕಾರ ಇನ್ನೂ ಕನಿಷ್ಠ ಬೆಂಬಲ ಬೆಲೆ ಕುರಿತಂತೆ ಕಾನೂನು ತರುವುದು ಮತ್ತಿತರ ಬೇಡಿಕೆಗಳನ್ನು ಈಡೇರಿಸದೆ ಸುಮ್ಮನೆ ಕೂತಿದೆ. ಸಾಲದ್ದಕ್ಕೆ ಈ ಬಾರಿಯ ಎನ್‌ಡಿಎ–3 ಸಚಿವ ಸಂಪುಟದಲ್ಲಿ ಶಿವರಾಜ್ ಸಿಂಗ್ ಚೌಹಾಣ್ ರವರನ್ನು ಕೃಷಿ ಮತ್ತು ರೈತರ ಕಲ್ಯಾಣ ಮಂತ್ರಿಯಾಗಿ ನೇಮಿಸುವ ಮೂಲಕ ತಾನಾಗಿ ರೈತರಿಗೆ ನೀಡಿದ ವಚನಗಳನ್ನು ಪಾಲಿಸುವುದಿಲ್ಲ ಎಂಬ ಸಂಕೇತವನ್ನೂ ನೀಡಿದೆ. ಈತ ಮಧ್ಯಪ್ರದೇಶದ ಮುಖ್ಯಮಂತ್ರಿಯಾಗಿದ್ದಾಗ ಅಲ್ಲಿನ ಮಂದಸೌರ್ ನಲ್ಲಿ ಜೂನ್ 6, 2017ರಂದು ರೈತರ ಮೇಲೆ ಗೋಲೀಬಾರ್ ನಡೆಸಿ ಆರು ರೈತರನ್ನು ಹತ್ಯೆಯಾಯಿತು ಎಂಬುದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬಹುದು. ಇಂತಹ ಸನ್ನಿವೇಶದಲ್ಲಿ ಹೊರಗೆ ರೈತರ ಹೋರಾಟದೊಂದಿಗೆ ಸಂಸತ್ತಿನೊಳಗೂ ಈ ಬಾರಿ ರೈತರ ದನಿ ಮೊಳಗಲಿದೆ ಎಂದು ನಿರೀಕ್ಷಿಸಬಹುದು. ●

ದೆಹಲಿ: ಪಟ್ಟು ಬಿಡದ ಗಟ್ಟಿ ಹೋರಾಟಕ್ಕೆ..... ಪುಟ 2 ರಿಂದ

ನೇಮಕ ಮಾಡಿಕೊಳ್ಳುವುದಾಗಿಯೂ, ಮತ್ತು ಹೊಸದಾಗಿ ಅಗತ್ಯ ಖಾಯಂ ಹುದ್ದೆಗಳನ್ನು ಸೃಷ್ಟಿಸುವುದಾಗಿಯೂ ಲಿಖಿತವಾಗಿ ಭರವಸೆ ನೀಡಿತು. ಆದರೆ ಸಮಸ್ಯೆ ಮಾತ್ರ ಬಗೆಹರಿಯಲಿಲ್ಲ. ಏಕೆಂದರೆ ದೆಹಲಿ ಮುನಿಸಿಪಲ್ ಕಾರ್ಪೋರೇಷನ್‌ನಲ್ಲಿ ಬಿಜೆಪಿ ಆಡಳಿತ ಇದ್ದಾಗ ಈ ಒಪ್ಪಂದ ಏರ್ಪಟ್ಟಿತು. ಬಿಜೆಪಿ ಆಡಳಿತವು ಈ ಭರವಸೆಯನ್ನು ಈಡೇರಿಸಲಿಲ್ಲ. ಮುಂದೆ ಆಪ್ ಪಕ್ಷವು ದೆಹಲಿ ಕಾರ್ಪೊರೇಷನ್‌ನ ಅಧಿಕಾರ ಹಿಡಿದರೂ ಅದೂ ಸಹ ಲಿಖಿತ ಒಪ್ಪಂದವನ್ನು ಜಾರಿ ಮಾಡುವ ಬದ್ಧತೆ ತೋರಲಿಲ್ಲ.

ಹೋರಾಟ ಮುಂದುವರಿದ ಮೇಲೆ ದಕ್ಷಿಣ ದೆಹಲಿ ಮುನಿಸಿಪಲ್ ಕಾರ್ಪೋರೇಷನ್‌ನ ಆಡಳಿತವು ಮಾರ್ಚ್ 9, 2022 ರಂದು ಈ 'ಸಾಂಕ್ರಾಮಿಕ ರೋಗವಾಹಕಗಳ ನಿಯಂತ್ರಕರು–ಡಿಬಿಸಿಎಸ್' ಎಂಬ ಗುತ್ತಿಗೆ ಉದ್ಯೋಗಿಗಳಿಗೆ 'ಎಂ.ಟಿ.ಎಸ್.(ಪಿ.ಎಚ್.)' ಎಂಬ ಹುದ್ದೆಯನ್ನು ಗುತ್ತಿಗೆ ಆಧಾರದಲ್ಲಿ ನೀಡುವ ಲಿಖಿತ ಆದೇಶವನ್ನು ನೀಡಿತು. ಇದು ಹೋರಾಟದ ಪೂರ್ಣ ವಿಜಯವಾಗಿರಲಿಲ್ಲ. ಆದರೂ ಈ ಲಿಖಿತ ಆದೇಶವನ್ನು ಜಾರಿಗೊಳಿಸುವಂತೆ ಮಾಡುವುದಕ್ಕಾಗಿ ಸಹ 2023ರ ಜುಲೈ–ಆಗಸ್ಟ್‌ಗಳಲ್ಲಿ ಕಾರ್ಮಿಕರು ತೀವ್ರ ಸಂಘರ್ಷವನ್ನು ನಡೆಸಬೇಕಾಯಿತು. 5 ದಿನಗಳ ತೀವ್ರ ಮುಷ್ಕರದ ಸ್ವರೂಪದ ಈ ಹೋರಾಟ, ಸುಮಾರು ಒಂಭತ್ತು ತಿಂಗಳವರೆಗೂ ನಾನಾ ರೂಪಗಳಲ್ಲಿ ಮುಂದುವರೆಯಿತು. ಈ ಹೋರಾಟದ ಅವಧಿಯಲ್ಲಿ ಸಂಘಟನೆಯನ್ನು ಇನ್ನಷ್ಟು ವಿಸ್ತರಿಸುವ ಮತ್ತು ಬಲಗೊಳಿಸುವ ಸಂಘಟನಾತ್ಮಕ ಪ್ರಯತ್ನಗಳು ನಡೆದು ಉತ್ತಮವಾದ ಫಲಿತಾಂಶ ದೊರೆಯಿತು. ಇದೇ ಅವಧಿಯಲ್ಲಿ ಕಾರ್ಮಿಕ ವರ್ಗದ ನಡುವೆ ಗೊಂದಲ ಮೂಡಿಸಿ, ಕಾರ್ಮಿಕ ಸಂಘಟನೆಯನ್ನು ಒಡೆಯುವ ಸಂಚುಗಳನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಲಾಯಿತು. ಈ ಅವಧಿಯಲ್ಲಿ ಸಂಘಟನೆಯ ಸದಸ್ಯತ್ವ ಶೇ. 36 ರಷ್ಟು ಹೆಚ್ಚಾಗಿ ಒಟ್ಟು ಸದಸ್ಯತ್ವ 3,500 ರಷ್ಟಕ್ಕೆ ತಲುಪಿದೆ. ಸಂಘಟನೆಯ ಸದಸ್ಯರಲ್ಲದವರನ್ನೂ ಹೋರಾಟದ ಕಣಕ್ಕೆ ಸೆಳೆಯುವಲ್ಲಿ ಚಳುವಳಿಯ ಯಶಸ್ವಿಯಾಗಿದೆ.

ಚಳುವಳಿಯ ಪಾಠ

ನವ–ಉದಾರೀಕರಣದ ಈ ಯುಗದಲ್ಲಿ ದೇಶದ ಆಳುವ ವರ್ಗಗಳು ಖಾಯಂ ಸ್ವರೂಪದ ಕೆಲಸಗಳಲ್ಲೂ ದಿನಗೂಲಿ, ಗುತ್ತಿಗೆ ಆಧಾರಿತ ನೇಮಕಾತಿಗಳನ್ನು ಜಾರಿಗೆ ತರುವಲ್ಲಿ, ಖಾಸಗಿ–ಸರಕಾರಿ ವ್ಯವಸ್ಥೆಯಲ್ಲೂ ಈ ಕಾರ್ಮಿಕ ವಿರೋಧಿ ಪದ್ಧತಿಗಳನ್ನು ಅಳವಡಿಸುವಲ್ಲಿ ಮೇಲುಗೈ ಸಾಧಿಸಿವೆ. ಖಾಯಂ ಸ್ವರೂಪದ ಉದ್ಯೋಗಗಳಲ್ಲೂ ಗುತ್ತಿಗೆ ಪದ್ಧತಿ ಜಾರಿಗೆ ಈ ಬಲಾಢ್ಯ ಶಕ್ತಿಗಳು 'ಸೃಷ್ಟಿಸಿ'ರುವ 'ಸರ್ವ ಸಮ್ಮತಿ'ಯಂತಹ ವಾತಾವರಣದಲ್ಲಿ ದೆಹಲಿಯ ಈ ಆರೋಗ್ಯ ಕಾರ್ಯಕರ್ತರ ಹೋರಾಟದ ಯಶಸ್ಸು ದೆಹಲಿಯ ಮತ್ತು ದೇಶದ ನಾನಾ ರಾಜ್ಯಗಳ ನಾನಾ ಇಲಾಖೆಗಳ ಗುತ್ತಿಗೆ, ದಿನಗೂಲಿ ಕಾರ್ಮಿಕರು ಖಾಯಮಾತಿಗಾಗಿ ತಮ್ಮ ಹೋರಾಟವನ್ನು ತೀವ್ರಗೊಳಿಸಲು ಪ್ರೇರಣೆಯಾಗಲಿದೆ. ಆಗಬೇಕಿದೆ.

ಕಳೆದ ಏಳು ವರ್ಷಗಳ ಈ ಚಳುವಳಿಯಲ್ಲಿ ಪ್ರತಿ ಹಂತದಲ್ಲಿ ಸಂಘಟನೆಯನ್ನು ದೃಢಗೊಳಿಸಲು, ಕಾರ್ಮಿಕರ ಐಕ್ಯತೆ ಬಲಪಡಿಸಲು ಗಮನ ನೀಡಲಾಯಿತು. ಕಾರ್ಮಿಕರಲ್ಲಿ ಸೈದ್ಧಾಂತಿಕ ತಿಳುವಳಿಕೆ, ವರ್ಗಪ್ರಜ್ಞೆಯನ್ನು ಹರಿತಗೊಳಿಸಲು ಕ್ರಮವಹಿಸಲಾಯಿತು. ಇಂತಹ ಸುವ್ಯಸ್ಥಿತವಾದ ಸಂಘಟನಾತ್ಮಕ ಕೆಲಸದಿಂದ ಸೀಮಿತ ಬಲವಿದ್ದಾಗಲೂ ಬಲಿಷ್ಠ ಸರಕಾರಗಳನ್ನು ಮಣಿಸಬಹುದು ಎಂಬ ಪಾಠವನ್ನು ಈ ಚಳುವಳಿ ಕಾರ್ಮಿಕರಿಗೆ ಕಲಿಸಿದೆ. ಆದೇಶದ ಜಾರಿಗೆ ಯಾವ ಹಂತದಲ್ಲೂ ತಡೆಯೊಡ್ಡುವ ಕುತಂತ್ರಗಳ ಬಗೆಗೆ ಸಹ ಪೂರ್ಣ ಅರಿವಿರುವ ಸಂಘಟನೆ ಆ ಬಗೆಗೆ ಸಹ ಜಾಗೃತಿವಹಿಸಿದೆ. ಕಾರ್ಮಿಕರನ್ನು ಎಚ್ಚರಿಸುತ್ತಿದೆ.

('ಪೀಪಲ್ಸ್ ಡೆಮಾಕ್ರಸಿ' ಪತ್ರಿಕೆಯ, ಅನುರಾಗ ಸಕ್ಸೇನಾ ಅವರ ವರದಿಯ ಭಾವಾನುವಾದ ಮತ್ತು ವಿಸ್ತರಣೆ – ಆರ್. ರಾಮಕೃಷ್ಣ)

–"ಪ್ರಜಾಪ್ರಭುತ್ವ ವಿರೋಧಿ' ಕ್ರಿಮಿನಲ್ ಕಾನೂನುಗಳನ್ನು ತಡೆ ಹಿಡಿಯಿರಿ'– 3700 ಕ್ಕೂ ಹೆಚ್ಚು ಗಣ್ಯ ನಾಗರಿಕರ ಸಹಿ – ಒತ್ತಾಯ

ವರದಿ: **ನಾಗರಾಜ ನಂಜುಂಡಯ್ಯ**

2023 ರ ಡಿಸೆಂಬರ್ 20 ರಂದು, ಸಂಸತ್ತಿನಲ್ಲಿ ಅಂಗೀಕರಿಸಿದ 3 ಕ್ರಿಮಿನಲ್ ಕಾಯಿದೆಗಳು, ಇದೇ ಜುಲೈ 1 ರಿಂದ ಜಾರಿಗೆ ಬರಲಿವೆ. ಹಾಗಾದರೆ, ಆ ಮೂರು ಕಾನೂನುಗಳು ಯಾವುವು? ಇದರಿಂದಾಗಿ ದೇಶಕ್ಕೆ ಹಾಗೂ ನಮ್ಮ ದೇಶದ ಜನರಿಗೆ ಏನು ತೊಂದರೆಗಳು ಉಂಟಾಗಬಹುದು? 3700 ಕ್ಕೂ ಹೆಚ್ಚು ದೇಶದ ಪ್ರಮುಖ ನಾಗರೀಕರು ಪತ್ರಕ್ಕೆ ಸಹಿ ಮಾಡಿ, ಪ್ರತಿಪಕ್ಷದ ಎಲ್ಲಾ ಪ್ರಮುಖ ರಾಜಕೀಯ ಪಕ್ಷಗಳಿಗೆ ಮನವಿ ಪತ್ರವನ್ನು ಕಳುಹಿಸಿಕೊಟ್ಟಿದ್ದಾರೆ.

ಸಂಬಂಧಿತ ನಾಗರಿಕರು ಸಹಿ ಮಾಡಿದ ಅರ್ಜಿಯಲ್ಲಿ ಜಂಟೀ ಪಾರ್ಲಿಮೆಂಟ್ ಸಮಿತಿ (ಜೆಪಿಸಿ)ಯ ಮೂಲಕ ತನಿಖೆ ನಡೆಸಬೇಕು. ಕಾನೂನು ತಜ್ಞರೊಂದಿಗೆ ಸಮಾಲೋಚನೆ ಮತ್ತು ಅವರ ಸಲಹೆ ಮತ್ತು ಉದ್ದೇಶಿತ ಸುಧಾರಣೆಗಳ ಕುರಿತು ಅರ್ಥಪೂರ್ಣ ಚರ್ಚೆಯನ್ನು ಪಾರ್ಲಿಮೆಂಟ್ ಒಳಗೆ ನಡೆಸಬೇಕೆಂದು ಕರೆ ನೀಡಲಾಗಿದೆ.

ಸಹಿ ಮಾಡಿದ ಪ್ರಮುಖರಲ್ಲಿ ತುಷಾರ್ ಗಾಂಧಿ, ತಾನಿಕಾ ಸರ್ಕಾರ್, ಹೆನ್ರಿ ಟಿಫಗ್ನೆ, ಮೇಜರ್ ಜನರಲ್ (ನಿವೃತ್ತ) ಸುಧೀರ್ ವೊಂಬಟ್ಕೆರೆ, ತೀಸ್ತಾ ಸೆಟಲ್ವಾಡ್ ಮತ್ತು ಇತರೆ 3,700 ಸಹಿದಾರರು ಎನ್‌ಡಿಎ ಮಿತ್ರಕೂಟದ ಪಕ್ಷಗಳ ಹಲವಾರು ಪ್ರಮುಖ ಮುಖಂಡರಿಗೂ ಪತ್ರವನ್ನು ಕಳುಹಿಸಿದ್ದಾರೆ. **ಅದರಲ್ಲೂ ಆಂಧ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು, ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ತುರ್ತಾಗಿ ಮಧ್ಯಸ್ಥಿಕೆ ವಹಿಸಬೇಕೆಂದು ಕೋರಿದ್ದಾರೆ**. ಜಯಂತ್ ಚೌಧರಿ, ರಾಷ್ಟ್ರೀಯ ಅಧ್ಯಕ್ಷ, ಆರ್‌ಎಲ್‌ಡಿ ಮತ್ತು ಇಂಡಿಯಾ ಒಕ್ಕೂಟದ ಎಲ್ಲಾ ಪಾಲುದಾರರಿಗೂ, 'ಪ್ರಜಾಪ್ರಭುತ್ವ ವಿರೋಧಿ' ಹೊಸ ಕ್ರಿಮಿನಲ್ ಕಾನೂನುಗಳನ್ನು ಜುಲೈ 1 ರಿಂದ ಜಾರಿಗೆ ತರಲು ಉದ್ದೇಶಿಸಲಾಗಿದೆ. ಇವುಗಳನ್ನು ತಡೆಯಬೇಕೆಂದು ಸಂಬಂಧಪಟ್ಟ ನಾಗರಿಕರು ಮನವಿ ಪತ್ರದಲ್ಲಿ ಕೋರಿದ್ದಾರೆ.

ಭಾರತೀಯ ಸಂವಿಧಾನದಲ್ಲಿ ಪ್ರತಿಪಾದಿಸಿರುವ ಮೂಲಭೂತ ಮೌಲ್ಯಗಳನ್ನು ದೃಢವಾಗಿ ರಕ್ಷಿಸುವ ಅವಕಾಶವನ್ನು ಪ್ರಸ್ತುತ ರಾಜಕೀಯ ಪಕ್ಷಗಳು ಹೊಂದಿವೆ. ಈ ನಿಟ್ಟಿನಲ್ಲಿ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ರಕ್ಷಿಸಲು ಎಲ್ಲಾ ಪ್ರಯತ್ನಗಳನ್ನು ಮಾಡುತ್ತವೆ ಎಂದು ಅರ್ಜಿದಾರರು ದೃಡವಾದ ವಿಶ್ವಾಸ ಹೊಂದಿದ್ದೇವೆ ಎಂಬ ನಂಬಿಕೆಯನ್ನು ವ್ಯಕ್ತಪಡಿಸಿದ್ದಾರೆ.

ಆ ಮೂರು ಹೊಸ ಕ್ರಿಮಿನಲ್ ಕಾನೂನುಗಳ ರೂಪದಲ್ಲಿ ರಾಷ್ಟ್ರದ ಮೇಲೆ ಗಂಭೀರ ಬೆದರಿಕೆ ಒಡ್ಡುತ್ತವೆ. ಅವುಗಳೆಂದರೆ, 'ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ, 2023', 'ಭಾರತೀಯ ನ್ಯಾಯ ಸಂಹಿತಾ, 2023' ಮತ್ತು 'ಭಾರತೀಯ ಸಾಕ್ಷಿ ಅಧಿನಿಯಮ್, 2023' ಅನ್ನು ಚರ್ಚೆಯಿಲ್ಲದೆ ಡಿಸೆಂಬರ್ 20, 2023 ರಂದು ಸಂಸತ್ತಿನ ಮೂಲಕ ತರಾತುರಿಯಲ್ಲಿ ತಳ್ಳಲಾಯಿತು," ಎಂದು ಅರ್ಜಿಯಲ್ಲಿ ಪ್ರಸ್ತಾಪಿಸಲಾಗಿದೆ.

ಈ ಕಾನೂನುಗಳು ಜುಲೈ 1, 2024 ರಿಂದ ಜಾರಿಗೆ ತರಲು ನಿರ್ಧರಿಸಲಾಗಿದೆ.


ಮನವಿ ಪತ್ರದಲ್ಲಿ ವ್ಯಕ್ತವಾಗಿರುವ ಪ್ರಮುಖ ಕಾಳಜಿ ಏನೆಂದರೆ, ಅಸ್ತಿತ್ವದಲ್ಲಿರುವ ಕಾನೂನುಗಳಿಗೆ ಮಾಡಲಾಗಿರುವ ತಿದ್ದುಪಡಿಗಳು, ಹೆಚ್ಚಾಗಿ ಕಠಿಣ ಸ್ವಭಾವವನ್ನು ಹೊಂದಿವೆ. ಪ್ರಜೆಗಳ ಜೀವನ ಮತ್ತು ಸ್ವಾತಂತ್ರ್ಯದ ವಿಷಯಗಳೊಂದಿಗೆ ಪ್ರತ್ಯೇಕವಾಗಿ ವ್ಯವಹರಿಸುತ್ತವೆ ಮತ್ತು ಹಲವಾರು ವಿಧಗಳಾಗಿ ಯಾವುದೇ ವ್ಯಕ್ತಿಗೆ ಕ್ರಿಮಿನಲ್ ಹಾನಿ ಮಾಡುವ ಎಲ್ಲಾ ಸಾಧ್ಯತೆಗಳನ್ನು ಈ ಕಾನೂನುಗಳು ಒದಗಿಸಬಹುದು ಎನ್ನಲಾಗಿದೆ.

"ನಾಗರಿಕ ಸ್ವಾತಂತ್ರ್ಯಗಳೊಂದಿಗೆ ಹೆಚ್ಚು ನಿರ್ದಿಷ್ಟವಾಗಿ ವಾಕ್ ಸ್ವಾತಂತ್ರ್ಯ, ಸಭೆ ನಡೆಸುವ ಹಕ್ಕುಗಳು, ಅದರಲ್ಲಿನ ಸಹಭಾಗಿತ್ವದ ಹಕ್ಕು, ಪ್ರದರ್ಶಿಸುವ ಹಕ್ಕು ಮತ್ತು ಇತರೆ ನಾಗರಿಕ ಹಕ್ಕುಗಳನ್ನು ಮೊಟಕುಗೊಳಿಸಿ, ಇದನ್ನು ಕಾನೂನಿನ ಭಾಗವಾಗಿ ಅಪರಾಧೀಕರಿಸುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

"ಮೂಲಭೂತವಾಗಿ, ಈ ಹೊಸ ಕ್ರಿಮಿನಲ್ ಕಾನೂನುಗಳು ನಮ್ಮ ಪ್ರಜಾಪ್ರಭುತ್ವವನ್ನು ಟೊಳ್ಳು ಮಾಡಲು ಮತ್ತು ಭಾರತವನ್ನು ಫ್ಯಾಸಿಸ್ಟ್ ರಾಜ್ಯವಾಗಿ ಪರಿವರ್ತಿಸಲು ಸಾಕಷ್ಟು ಸಾಮರ್ಥ್ಯವನ್ನು ಸರ್ಕಾರಕ್ಕೆ ಅನುವು ಮಾಡಿಕೊಡುತ್ತದೆ.

ಸರ್ಕಾರವು ಹೊಸ ಕಾನೂನುಗಳನ್ನು ಪೂರ್ಣ ಪ್ರಮಾಣದಲ್ಲಿ ನಿಯೋಜಿಸಿಕೊಂಡು ಜಾರಿಗೆ ತರಲು ಪ್ರಯತ್ನ ಮಾಡಿದಾಗ, "ಪ್ರಸ್ತಾಪಿತ ಹೊಸ ಕಾನೂನುಗಳಿಂದಾಗಿ, ಸರ್ಕಾರವು ನಾಟಕೀಯವಾಗಿ ಬಂಧನ, ಅವರ ರಾಜಕೀಯ ವಿರೋಧಿಗಳು ನಡೆಸುವ ಎಲ್ಲಾ ಬಗೆಯ ಕಾನೂನಾತ್ಮಕ ಪ್ರಜಾಪ್ರಭುತ್ವ ಪ್ರತಿಭಟನೆಗಳನ್ನು ಹತ್ತಿಕ್ಕುವ ಅಥವಾ ಮುಂದುವರಿದು ಕಾನೂನು ಕ್ರಮ ಕೈಗೊಳ್ಳಲು ಅವಕಾಶವನ್ನು ಈ ಕ್ರಿಮಿನಲ್ ಕಾನೂನುಗಳು ಕಲ್ಪಿಸುತ್ತವೆ. ಜೊತೆಗೆ ಭಿನ್ನಮತೀಯರು ಎಂದು ಸರ್ಕಾರ ಪರಿಗಣಿಸಿದರೆ ಅಂತಹವರನ್ನು ಸೆರೆಮನೆಗೆ ತಳ್ಳಲು ಅವಕಾಶಗಳನ್ನು ಕೂಡಾ ಈ ಮೂರು ಕಾನೂನುಗಳು ನೀಡುತ್ತವೆ.





ಹೊಸ ಕ್ರಿಮಿನಲ್ ಕೋಡ್ ಗಳು ಹೊಂದಿರುವ ಕೆಲವು ವೈಶಿಷ್ಟ್ಯತೆಗಳನ್ನು ಗಮನಿಸಬೇಕು.

(1) ಕಾನೂನುಬದ್ಧ, ಅಹಿಂಸಾತ್ಮಕ, ಪ್ರಜಾಸತ್ತಾತ್ಮಕ ಭಾಷಣ ಅಥವಾ ಕ್ರಿಯೆಯನ್ನು 'ಭಯೋತ್ಪಾದನೆ' ಎಂದು ಅಪರಾಧೀಕರಣ ಗೊಳಿಸುವುದು.

(2)ಹೊಸ ಮತ್ತು ಹೆಚ್ಚು ಕೆಟ್ಟ ಅವತಾರದಲ್ಲಿ ದೇಶದ್ರೋಹದ ಅಪರಾಧವನ್ನು ವಿಸ್ತರಿಸುವುದು. (ಇದನ್ನು "ದೇಶದ್ರೋಹ" ಪ್ಲಸ್ ಎಂದು ಕರೆಯಬಹುದು).

(3)ಸೈದ್ಧಾಂತಿಕ ಮತ್ತು ರಾಜಕೀಯ ವಿರೋಧಿಗಳ ಮೇಲಿನ ಉದ್ದೇಶಿತ "ಆಯ್ದ ಕ್ರಮ ಕೈಗೊಳ್ಳುವ, ಜೊತೆಗೆ ರಾಜಕೀಯವಾಗಿ–ಪಕ್ಷಪಾತದ ಪ್ರಾಸಿಕ್ಯೂಷನ್ ಸಾಮರ್ಥ್ಯದ ವಿಸ್ತರಣೆ ಮಾಡಲು ಅವಕಾಶ ಕಲ್ಪಿಸುತ್ತದೆ.

(4)ಉಪವಾಸದ ಮೂಲಕ ಸರ್ಕಾರದ ವಿರುದ್ಧ ನಡೆಯಬಹುದಾದ ರಾಜಕೀಯ ಪ್ರತಿಭಟನೆಗಳನ್ನು ಅಪರಾಧೀಕರಣ ಗೊಳಿಸಲಾಗುವುದು.

(5)ವ್ಯಕ್ತಿಗಳು/ಜನಪ್ರತಿ ನಿಧಿಗಳು ನಡೆಸುವ, ಯಾವುದೇ ಸಭೆಯ ವಿರುದ್ಧ ಬಲ ಪ್ರಯೋಗದ ಬಳಕೆಯನ್ನು ಪ್ರೋತ್ಸಾಹಿಸುವುದು.

(6)"ಪೊಲೀಸ್ ಅಧಿಕಾರಿ"ಗಳು ನೀಡುವ ಯಾವುದೇ ನಿರ್ದೇಶನಕ್ಕೆ ಅಥವಾ ತನಿಖಾ ವರದಿಗಳನ್ನು ಅದಕ್ಕೆ ಅನುಗುಣವಾಗಿ ವಿರೋಧಿಸುವುದು, ನಿರಾಕರಿಸುವುದು, ನಿರ್ಲಕ್ಷಿಸುವುದು ಅಥವಾ ಅಪರಾಧೀಕರಿಸುವ ಮೂಲಕ 'ಪೊಲೀಸ್ ರಾಜ್' ಅನ್ನು ಮನಸ್ಸಿಗೆ ತೋಚಿದ ರೀತಿಯಲ್ಲಿ ಹೆಚ್ಚಿಸುವುದು.

(7)ಕೈಗೆ ತೊಡಿಸುವ ಕೋಳದ ಅವಧಿಯನ್ನು ಹೆಚ್ಚಿಸುವುದು.

(8)ತನಿಖೆಯ ಸಮಯದಲ್ಲಿ ಪೊಲೀಸ್ ಕಸ್ಟಡಿಯನ್ನು ಗರಿಷ್ಠ ಅಥವಾ ಅನಿರ್ದಿಷ್ಟ ಕಾಲವಾಧಿಗೆ ಹೆಚ್ಚಿಸುವುದು.

(9)ಎಫ್.ಐ.ಆರ್. ರೆಕಾರ್ಡಿಂಗ್ ಅನ್ನು ಪೊಲೀಸರ ವಿವೇಚನೆಗೆ ಒಳಪಡಿಸುವುದು.

(10) ಸೆರೆವಾಸದ ನೋವನ್ನು ಪಸರಿಸುವಂತೆ ಮಾಡುವುದು.

(11) ಎಲ್ಲಾ ವ್ಯಕ್ತಿಗಳು (ಯಾವುದೇ ಅಪರಾಧದ ಆರೋಪಿಯಲ್ಲದವರು ಸಹಾ) ತಮ್ಮ ಬಯೋ ಮೆಟ್ರಿಕ್ ಗಳನ್ನು ಸರ್ಕಾರಕ್ಕೆ ಒದಗಿಸುವಂತೆ ಒತ್ತಾಯಿಸುವುದು; ಮತ್ತು

(12) ಸಂಘ ಪರಿವಾರದ ಕೆಲವು ಚಟುವಟಿಕೆಗಳನ್ನು ಸಂರಕ್ಷಣೆ ಮಾಡುವುದು.

ಮನವಿಯನ್ನು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ; ಹಾಗೂ ಸೀತಾರಾಮ್ ಯೆಚೂರಿ, ಪ್ರಧಾನ ಕಾರ್ಯದರ್ಶಿ, ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ); ಅರವಿಂದ್ ಕೇಜ್ರಿವಾಲ್, ರಾಷ್ಟ್ರೀಯ ಸಂಚಾಲಕ, ಆಮ್ ಆದ್ಮಿ ಪಾರ್ಟಿ; ಡಿ ರಾಜಾ, ಪ್ರಧಾನ ಕಾರ್ಯದರ್ಶಿ, ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಸಿಪಿಐ); ಎಂ ಕೆ ಸ್ಟಾಲಿನ್, ತಮಿಳುನಾಡು ಮುಖ್ಯಮಂತ್ರಿ ಮತ್ತು ಅಧ್ಯಕ್ಷ, ದ್ರಾವಿಡ ಮುನ್ನೇತ್ರ ಕಳಗಂ (ಡಿಎಂಕೆ); ಫಾರೂಕ್ ಅಬ್ದುಲ್ಲಾ, ಅಧ್ಯಕ್ಷರು, ಜಮ್ಮು ಮತ್ತು ಕಾಶ್ಮೀರ ರಾಷ್ಟ್ರೀಯ ಸಮ್ಮೇಳನ; ಹೇಮಂತ್ ಸೊರೆನ್, ಅಧ್ಯಕ್ಷ, ಜಾರ್ಖಂಡ್ ಮುಕ್ತಿ ಮೋರ್ಚಾ (ಜೆಎಂಎಂ); ಶರದ್ ಪವಾರ್, ಅಧ್ಯಕ್ಷರು, ರಾಷ್ಟ್ರೀಯವಾದಿ ಕಾಂಗ್ರೆಸ್ ಪಕ್ಷ (ಶರದ್‌ಚಂದ್ರ ಪವಾರ್); ಅಖಿಲೇಶ್ ಯಾದವ್, ರಾಷ್ಟ್ರೀಯ ಅಧ್ಯಕ್ಷ, ಸಮಾಜವಾದಿ ಪಕ್ಷ (ಎಸ್ಪಿ); ಉದ್ಧವ್ ಠಾಕ್ರೆ, ಅಧ್ಯಕ್ಷರು, ಶಿವಸೇನೆ (ಉದ್ಧವ್ ಬಾಳಾಸಾಹೇಬ್ ಠಾಕ್ರೆ); ಜಿ ದೇವರಾಜನ್, ಅಧ್ಯಕ್ಷರು, ಅಖಿಲ ಭಾರತ ಫಾರ್ವರ್ಡ್ ಬ್ಲಾಕ್; ದೀಪಂಕರ್ ಭಟ್ಟಾಚಾರ್ಯ, ಪ್ರಧಾನ ಕಾರ್ಯದರ್ಶಿ, ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾರ್ಕ್ಸ್‌ವಾದಿ–ಲೆನಿನ್‌ವಾದಿ) ಲಿಬರೇಶನ್; ಜೋಸ್ ಕೆ ಮಣಿ, ಅಧ್ಯಕ್ಷರು, ಕೇರಳ ಕಾಂಗ್ರೆಸ್ (ಎಂ); ತೊಲ್ ತಿರುಮಾವಳವನ್, ಅಧ್ಯಕ್ಷರು, ವಿದುತಲೈ ಚಿರುತೈಗಲ್ ಕಚ್ಚಿ; ವೈಕೊ, ಪ್ರಧಾನ ಕಾರ್ಯದರ್ಶಿ, ಮರುಮಲಾರ್ಚಿ ದ್ರಾವಿಡ ಮುನ್ನೇತ್ರ ಕಳಗಂ (MDMK); ಮೆಹಬೂಬಾ ಮುಫ್ತಿ, ಅಧ್ಯಕ್ಷರು, ಜಮ್ಮು ಮತ್ತು ಕಾಶ್ಮೀರ ಪೀಪಲ್ಸ್ ಡೆಮಾಕ್ರಟಿಕ್ ಪಾರ್ಟಿ (ಪಿಡಿಪಿ); ಪಿ ಜೆ ಜೋಸೆಫ್, ಅಧ್ಯಕ್ಷರು, ಕೇರಳ ಕಾಂಗ್ರೆಸ್; ಕೆ ಎಂ ಖಾದರ್ ಮೊಹಿದೀನ್, ರಾಷ್ಟ್ರೀಯ ಅಧ್ಯಕ್ಷರು, ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್; ರಾಷ್ಟ್ರೀಯ ಲೋಕತಾಂತ್ರಿಕ ಪಕ್ಷದ ಅಧ್ಯಕ್ಷ ಹನುಮಾನ್ ಬೇನಿವಾಲ್ ಮತ್ತು ಕೊಂಗುನಾಡು ಮಕ್ಕಳ್ ದೇಶಿಯ ಕಚ್ಚಿ ಪ್ರಧಾನ ಕಾರ್ಯದರ್ಶಿ ಇ.ಆರ್. ಈಶ್ವರನ್, ಮೇಲೆ ಪ್ರಸ್ತಾಪಿಸಿರುವ ಎಲ್ಲರಿಗೂ ಮನವಿ ಪತ್ರವನ್ನು ಕಳುಹಿಸಲಾಗಿದೆ. ಒಟ್ಟಾರೆಯಾಗಿ ಸಂವಿಧಾನ ಬದ್ಧ ಪ್ರಜಾಪ್ರಭುತ್ವದ ಮೌಲ್ಯಗಳು ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯ ಕ್ಕೆ ಗಂಡಾಂತರ ಒದಗುವ ಈ ಮೂರು ಕ್ರಿಮಿನಲ್ ಕಾನೂನುಗಳನ್ನು ಅನುಷ್ಠಾನಕ್ಕೆ ಬಾರದಂತೆ ತಡೆಹಿಡಿಯಬೇಕು. ಸಂವಿಧಾನದ ಆಶಯಗಳನ್ನು ರಕ್ಷಿಸಬೇಕೆಂದು ಮನವಿ ಪತ್ರದಲ್ಲಿ ಗಾಂಭೀರ್ಯ ಪೂರ್ಣ ಕಾಳಜಿಯನ್ನು ವ್ಯಕ್ತಪಡಿಸಲಾಗಿದೆ. ●

ಉತ್ಪಾದನೆಯ ಚದುರಿಕೆ ಮತ್ತು ಸಾಮ್ರಾಜ್ಯಶಾಹಿಯ ಪರಿಕಲ್ಪನೆ



ಬಂಡವಾಳಶಾಹಿ ಜಗತ್ತಿನಲ್ಲಿ ಅಭಿವೃದ್ಧಿ ಹೊಂದಿರುವ ಮತ್ತು ಅಭಿವೃದ್ಧಿಯ ಪರಿಧಿಯಲ್ಲಿರುವ ದೇಶಗಳ ನಡುವೆ ಇದ್ದ ವಿಭಜನಾ ರೇಖೆಯು ಈಗ ಭೌಗೋಳಿಕವಾಗಿ, ಪರಿಧಿಯಲ್ಲಿರುವ ದೇಶಗಳ ಒಳಗಿರುವ ವಿಭಜನೆಯಾಗಿ ಪಲ್ಲಟಗೊಂಡಿದೆ ಎಂದು ಹೇಳಬಹುದು. ಅಂದರೆ, ಈ ದೇಶಗಳ ಹಿರಿ ಬೂರ್ಜ್ವಾ ಮತ್ತು ಉಚ್ಚವರ್ಗಗಳ ಮಂದಿ ತಮ್ಮನ್ನು ಈಗ ಈ ವಿಭಜನಾ ರೇಖೆಯ ಆಚೆಯ ಮುಂದುವರೆದ ದೇಶಗಳ ಉಚ್ಚ ವರ್ಗಗಳ ಮಂದಿಯೊಂದಿಗೆ ಗುರುತಿಸಿಕೊಳ್ಳುತ್ತಿದ್ದಾರೆ. ವಸಾಹತುಶಾಹಿ–ವಿರೋಧಿ ಹೋರಾಟದ ಸಮಯದಲ್ಲಿ ಸಾಮಾನ್ಯವಾಗಿ ಇದ್ದಂತೆ ತಮ್ಮ ದೇಶಗಳ ಜನರ ಜೊತೆಗೆ ಇಲ್ಲ. ಸಾಮ್ರಾಜ್ಯಶಾಹಿ ಎಂಬ ಪದವು ಭೌಗೋಳಿಕ ವಿಭಜನೆಯನ್ನು ಸೂಚಿಸುವಂತದ್ದಲ್ಲ, ಬದಲಾಗಿ ತನ್ನ ಸುತ್ತಮುತ್ತಲಿನ ಮೇಲೆ ಬಂಡವಾಳಶಾಹಿ ಉತ್ಪಾದನಾ ವಿಧಾನವನ್ನು ಚಲಾಯಿಸುವ ಬಲವಂತವನ್ನು ಸೂಚಿಸುತ್ತದೆಯಾದ್ದರಿಂದ, ಉತ್ಪಾದನೆಯ ಚದುರಿಕೆಯು ಸಾಮ್ರಾಜ್ಯಶಾಹಿ ಎಂಬ ವಿದ್ಯಮಾನವನ್ನು ಯಾವುದೇ ರೀತಿಯಲ್ಲಿ ತೊಡೆದು ಹಾಕುವುದಿಲ್ಲ.

– ಪ್ರೊ. ಪ್ರಭಾತ್ ಪಟ್ನಾಯಕ್ –



ವಿಶ್ವ ಆರ್ಥವ್ಯವಸ್ಥೆಯಲ್ಲಿ ಉತ್ಪಾದನೆಯು ಗಮನಾರ್ಹವಾಗಿ ಚದುರಿ ಹೋಗಿದೆ. ಅನೇಕರು ಈ ವಿದ್ಯಮಾನವನ್ನು ಅಮೆರಿಕ ಸಂಯುಕ್ತ ಸಂಸ್ಥಾನಗಳ (ಯು.ಎಸ್.) ನೇತೃತ್ವದ ವಿಶ್ವ ಆರ್ಥವ್ಯವಸ್ಥೆಯಿಂದ "ಬಹುಧ್ರುವೀಯ ವಿಶ್ವ ಆರ್ಥವ್ಯವಸ್ಥೆ"ಯತ್ತ ಪಲ್ಲಟ ಎಂದು ಕರೆಯುತ್ತಾರೆ, ಆದರೆ ಈ ವಿವರಣೆಯ ಬಗ್ಗೆ ಯಾರು ಏನು ಯೋಚಿಸಿದರೂ, ಚದುರಿ ಹೋಗಿದೆ ಎಂಬ ಸತ್ಯವಂತೂ ನಿರ್ವಿವಾದ. ಉದಾಹರಣೆಗೆ 1994ರಲ್ಲಿ ಜಿ–7 ದೇಶಗಳು (ಯುಎಸ್, ಯುಕೆ, ಜರ್ಮನಿ, ಫ್ರಾನ್ಸ್, ಜಪಾನ್, ಇಟಲಿ ಮತ್ತು ಕೆನಡಾ) ವಿಶ್ವದ ಉತ್ಪನ್ನಗಳ ಶೇ.45.3 ರಷ್ಟನ್ನು ಉತ್ಪಾದಿಸಿದರೆ, ಬ್ರಿಕ್ಸ್(BRICS) ದೇಶಗಳು (ಬ್ರೆಜಿಲ್, ರಷ್ಯಾ, ಭಾರತ, ಚೀನಾ ಮತ್ತು ದಕ್ಷಿಣ ಆಫ್ರಿಕಾ, ಜತೆಗೆ ಹೊಸದಾಗಿ ಸದಸ್ಯರಾದ ಇರಾನ್, ಯುಎಇ, ಈಜಿಪ್ಟ್ ಮತ್ತು ಇಥಿಯೋಪಿಯಾ) ಶೇ.18.9 ಉತ್ಪಾದಿಸಿದ್ದವು. 2022ರ ವೇಳೆಗೆ ಈ ಅನುಪಾತಗಳು ಅನುಕ್ರಮವಾಗಿ 29.3 ಮತ್ತು 35.2 ಶೇ. ಆಯಿತು (ಇವು ಅರ್ಥಶಾಸ್ತ್ರಜ್ಞ ಜೆಫ್ರಿ ಸ್ಯಾಕ್ಸ್ ಉಲ್ಲೇಖಿಸಿರುವ ವಿಶ್ವಬ್ಯಾಂಕ್ ಅಂಕಿಅಂಶಗಳು).

ಯುಎಸ್, ಯುಕೆ, ಕೆನಡಾ, ಯುರೋಪಿಯನ್ ಒಕ್ಕೂಟ, ಜಪಾನ್, ದಕ್ಷಿಣ ಕೊರಿಯಾ, ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್ ಎಂಬ ಕೊಂಚ ದೊಡ್ಡ ಗುಂಪನ್ನು ನಾವು ತೆಗೆದುಕೊಂಡರೂ ಸಹ, ವಿಶ್ವ ಉತ್ಪಾದನೆಯಲ್ಲಿ ಅದರ ಪಾಲು 1994 ರಲ್ಲಿ ಶೇ. 56 ರಿಂದ 2022 ರಲ್ಲಿ ಶೇ. 39.5 ಕ್ಕೆ ಕುಸಿದಿದೆ. ಈ ಚದುರಿಕೆಯ ಹರಹನ್ನು ಗುರುತಿಸಲು ಯುಎಸ್ ನ ನಿರಾಕರಣೆ, ಮತ್ತು ಹಳೆಯ ದಿನಗಳಲ್ಲಿ ಪ್ರಪಂಚದಾದ್ಯಂತ ಅನುಭವಿಸಿದ ಅಧಿಕಾರವನ್ನು ಉಳಿಸಿಕೊಳ್ಳಲು ಅದರ ಪ್ರಯತ್ನವು ರಷ್ಯಾ, ಚೀನಾ, ಇರಾನ್ ಮತ್ತು ಇತರರ ವಿರುದ್ಧ ಅದು ಅತ್ಯಂತ ಆಕ್ರಮಣಕಾರಿಯಾಗುವಂತೆ ಮಾಡಿದೆ. ಎಷ್ಟೆಂದರೆ, ಅದರ ಆಕ್ರಾಮಕತೆ ಜಗತ್ತನ್ನು ಅಪಾಯಕಾರಿ ಮಿಲಿಟರಿ ಸಂಘರ್ಷಗಳತ್ತ ತಳ್ಳುತ್ತಿದೆ.

ಉತ್ಪಾದನೆಯ ಈ ಚದುರಿಕೆಗೆ ನಿಸ್ಸಂದೇಹವಾಗಿ ಸಮಾಜವಾದ ಮೂಡಿಬಂದದ್ದು ವ್ಯಾಪಕವಾಗಿ ನೆರವಾಯಿತು. ಸ್ವತಃ ನಿರ್ವಸಾಹತೀಕರಣಕ್ಕೇ ಸಮಾಜವಾದದ ಅಸ್ತಿತ್ವದಿಂದ ನೆರವು ಸಿಕ್ಕಿತು ಎಂಬ ಸಂಗತಿ ಮಾತ್ರವಲ್ಲದೆ, ವಸಾಹತುಶಾಹಿಯಿಂದ ಹೊರಬಂದ ಈ ಸಮಾಜಗಳಲ್ಲಿ ಆಂತರಿಕ ಕೌಶಲ್ಯಗಳು, ತಾಂತ್ರಿಕ ಸಾಮರ್ಥ್ಯಗಳು, ಮೂಲಸೌಕರ್ಯ ಮತ್ತು ಉತ್ಪಾದನಾ ಸಾಮರ್ಥ್ಯಗಳ ನಿರ್ಮಾಣವು ಆರಂಭದಲ್ಲಿ ನಿಯಂತ್ರಿತ ಅರ್ಥವ್ಯವಸ್ಥೆಯ ಅಡಿಯಲ್ಲಿ ನಡೆಯಿತು. ಅಗ ಈ ದೇಶಗಳು ಪಾಶ್ಚಿಮಾತ್ಯ ಹಗೆತನವನ್ನು ಎದುರಿಸುವಲ್ಲಿ ಸಹಾಯಕವಾದದ್ದು ಗಮನಾರ್ಹ ಸೋವಿಯತ್ ನೆರವಿವು. ನಂತರ ಸಹಜವಾಗಿ, ಸೋವಿಯತ್ ಒಕ್ಕೂಟ ಮತ್ತು ಪೂರ್ವ ಯುರೋಪಿನಲ್ಲಿ ಸಮಾಜವಾದದ ಪತನದ ನಂತರ, ಮತ್ತು ಮೂರನೇ ಪ್ರಪಂಚದ ನಿಯಂತ್ರಿತ ಬೆಳವಣಿಗೆಯ ಆಳ್ವಿಕೆಗಳು ಅಂತ್ಯಗೊಂಡ ನಂತರ, ಚದುರಿಕೆಯ ಈ ಪ್ರಕ್ರಿಯೆಯನ್ನು ನವ ಉದಾರವಾದಿ ಜಾಗತಿಕ ವ್ಯವಸ್ಥೆಯು ಸುಗಮಗೊಳಿಸಿದ ಉತ್ಪಾದನೆಯಲ್ಲಿನ ಬಂಡವಾಳದ ಅಂತರರಾಷ್ಟ್ರೀಯ ಹರಿವುಗಳು ಮುಂದಕ್ಕೆ ಒಯ್ದವು. ಆದರೆ ಅಂತಹ ಹರಿವುಗಳಿಗೆ ಆಧಾರ ಕಲ್ಪಿಸಿದ್ದು ಅನೇಕ ಪ್ರಮುಖ ನಿದರ್ಶನಗಳಲ್ಲಿ ನಿಯಂತ್ರಿತ ಅರ್ಥವ್ಯವಸ್ಥೆಯ ಆಳ್ವಿಕೆಗಳ ಅಡಿಯಲ್ಲಿಯೇ. ಪ್ರಸ್ತುತ, ಯುಎಸ್ ನೇತೃತ್ವದ ಬಣದ ಹೊರಗಿರುವ ದೇಶಗಳಲ್ಲಿ ಉತ್ಪಾದನೆಯ ಚದುರಿಕೆ ಬಂಡವಾಳಶಾಹಿಯ ಆಶ್ರಯದಲ್ಲಿ ನಡೆಯುತ್ತಿದೆ (ಚೀನಾದ್ದು ಸಹಜವಾಗಿ ಒಂದು ಪ್ರತ್ಯೇಕ ಪ್ರಕರಣ).

ಚದುರಿಕೆ ಆಗಿದೆ, ಆದರೆ 'ಒಮ್ಮುಖ' ಅಲ್ಲ

ಇದರಿಂದ ಉದ್ಭವಿಸುವ ಪ್ರಶ್ನೆಯೆಂದರೆ, ಪ್ರಸ್ತುತ ಸಂದರ್ಭದಲ್ಲಿ ನಾವು ಸಾಮ್ರಾಜ್ಯಶಾಹಿಯ ಬಗ್ಗೆ ಯಾವ ಅರ್ಥದಲ್ಲಿ ಮಾತನಾಡಬಹುದು ಎಂಬುದು. ಸಾಮ್ರಾಜ್ಯಶಾಹಿ ಎಂಬ ಪದವು ವಿಶ್ವ ಆರ್ಥವ್ಯವಸ್ಥೆಯಲ್ಲಿ ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ (ಮೆಟ್ರೋಪಾಲಿಟನ್) ದೇಶಗಳು ಮತ್ತು ಅಭಿವೃದ್ಧಿಯಾಗದ ಪರಿಧಿಯಲ್ಲಿದ್ದ ದೇಶಗಳ ನಡುವಣ ವ್ಯತ್ಯಾಸಕ್ಕೆ ಸಂಬಂಧಿಸಿರುವಂತದ್ದು. ಈ ವ್ಯತ್ಯಾಸ ಈಗ ಅಳಿಸಿ ಹೋಗುತ್ತಿರುವಾಗ, ಪರಿಧಿಗೆ ಸೇರಿದ ದೇಶಗಳು ಈಗ ಮೆಟ್ರೋಪಾಲಿಟನ್ ದೇಶಗಳಿಗಿಂತಲೂ ವೇಗವಾಗಿ ಉತ್ಪಾದನೆಯ ಬೆಳವಣಿಗೆಯ ದರವನ್ನು ಕಾಣುತ್ತಿದ್ದರೆ, ಈಗಲೂ ನಾವು ಸಾಮ್ರಾಜ್ಯಶಾಹಿ ಎಂದು ಮಾತನಾಡಲು ಸಾಧ್ಯವೇ? ತದ್ವಿರುದ್ಧವಾಗಿ, ಈಗ ಜಾಗತಿಕ ದಕ್ಷಿಣಕ್ಕೆ ಸೇರಿದ ದೇಶಗಳು ಜಾಗತಿಕ ಉತ್ತರದ ದೇಶಗಳೊಂದಿಗೆ, ಅದೂ ಬಂಡವಾಳಶಾಹಿಯ ಅಡಿಯಲ್ಲಿಯೇ (ಇಲ್ಲಿಯೂ ಚೀನವನ್ನು ಬಿಟ್ಟು) ಸ್ಪರ್ಧಿಸುತ್ತಿರುವಾಗ ವಾಸ್ತವತೆಯು ಪರಸ್ಪರ ಮಿಳನಗೊಂಡು "ಒಮ್ಮುಖ"ಗೊಂಡಿರುವಂತೆ ತೋರುತ್ತದೆ, ಬಂಡವಾಳಶಾಹಿಯು ಈಗ ಪ್ರಪಂಚವನ್ನು ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದದ ದೇಶಗಳು ಎಂಬ ವಿಭಜನೆಯನ್ನು ಶಾಶ್ವತಗೊಳಿಸುತ್ತಿರುವ ಅಪರಾಧಿಯಾಗಿ ಕಾಣಿಸುತ್ತಿಲ್ಲ. ಇದು ನಿಜವೇ ಎಂಬುದೇ ನಮ್ಮ ಮುಂದಿರುವ ಪ್ರಶ್ನೆ.

ಮೊದಲನೆಯದಾಗಿ, ಚದುರಿಕೆ ಖಂಡಿತವಾಗಿಯೂ ಅಗಿದೆ. ಆದರೆ "ಒಮ್ಮುಖ"ವಾಗಿದೆ ಎನ್ನುವುದು ಯಾವುದೇ ರೀತಿಯಲ್ಲಿ ಸರಿಯಲ್ಲ. ಇದಕ್ಕೆ ಕಾರಣ ಭಾಗಶಃ, ಏಕೆಂದರೆ ಚದುರಿಕೆಯ ವಿದ್ಯಮಾನವನ್ನೇ ಉತ್ಪ್ರೇಕ್ಷೆ ಮಾಡಲಾಗಿದೆ ಎಂಬ ಸಂಗತಿ. ಅಂತಹ ಚದುರಿಕೆಯನ್ನು ಕಂಡ ದೇಶಗಳು ಈಗಲೂ ಕೆಲವು ಮಾತ್ರ ಮತ್ತು ಅವುಗಳಲ್ಲಿಯೂ ಹಲವು ಮುಂದಿನ ದಿನಗಳಲ್ಲಿ ಹಿನ್ನಡೆಗಳನ್ನು ಕಾಣಬಹುದು; ನವ ಉದಾರವಾದದ ಬಿಕ್ಕಟ್ಟು ಅವರನ್ನು "ಹಣಕಾಸಿನ ಮಿತವ್ಯಯ", ಆಂತರಿಕ ಹಣದಿಳಿಕೆ ಮತ್ತು ಆದ್ದರಿಂದ ಆರ್ಥಿಕ ಸ್ಥಗಿತತೆ ಮತ್ತು ಹಿಂಜರಿತವನ್ನು ಉಂಟುಮಾಡುವ ಸಾಲದ ಬಲೆಗಳಲ್ಲಿ ಸಿಲುಕಿಸುವುದರಿಂದ ಇದು ಸಂಭವಿಸಲಿದೆ. ಇತಿಹಾಸದಲ್ಲಿ ಇಂತಹ ಹಿನ್ನಡೆಗಳಿಗೆ ಸಾಕಷ್ಟು ಸಾಕ್ಷ್ಯವಿದೆ, ವಿಶೇಷವಾಗಿ ಖನಿಜ–ಸಮೃದ್ಧ ದೇಶಗಳಲ್ಲಿ ಬಹಳ ಹೆಚ್ಚಾಗಿ ಕಂಡಿದೆ. ಮ್ಯಾನ್ಮಾರ್ ಇದಕ್ಕೆ ಒಂದು ಅತ್ಯುತ್ತಮ ಉದಾಹರಣೆಯಾಗಿದೆ. ಇದನ್ನು ಒಮ್ಮೆ ಸಮೃದ್ಧಿಯ ಹೊಸ್ತಿಲಲ್ಲಿದೆ ಎಂದು ಪರಿಗಣಿಸಲಾಗಿತ್ತು, ಆದರೆ ಈಗ ಅದು "ಕಡಿಮೆ ಅಭಿವೃದ್ಧಿ ಹೊಂದಿದ ದೇಶ"ಗಳ ಪಟ್ಟಿಯಲ್ಲಿದೆ. ನಮ್ಮ ನೆರೆಹೊರೆಯಲ್ಲಿಯೇ ಹೊರ ಸಾಲಗಳ ಹೊರೆಯಿಂದಾಗಿ ದೇಶಗಳು ಹಿಂದಕ್ಕೆ ಹೋಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ.

ವಿಭಜನೆಯಲ್ಲಿ ಪಲ್ಲಟ

ಎರಡನೆಯ ಕಾರಣವೆಂದರೆ, "ಒಮ್ಮುಖ"ಗೊಂಡಿದೆ ಎಂಬ ಪ್ರಶ್ನೆಯೇ ನಿಖರವಾಗಿ ಸಾಮ್ರಾಜ್ಯಶಾಹಿಯಲ್ಲೇ ಇದೆ. ಇದನ್ನು ನೋಡಲು ನಾವು ವಿಶ್ವ ಅರ್ಥವ್ಯವಸ್ಥೆಯನ್ನು ನಿರೂಪಿಸುವ ಎರಡನೆಯ ವಿದ್ಯಮಾನವನ್ನು ಸಹಜವಾಗಿಯೇ ಗಮನಿಸಬೇಕಾಗಿದೆ. ಅದರ ಬದಲು, ವಿಶ್ವ ಬ್ಯಾಂಕ್‌ನಂತಹ ಸಂಸ್ಥೆಗಳು ಅದನ್ನು ಮರೆಮಾಚುವ ಪ್ರಯತ್ನದಲ್ಲಿ ಅವು ಚದುರಿಕೆಯ ಸಂಗತಿಯನ್ನು ಮಾತ್ರ ಒತ್ತಿಹೇಳುತ್ತವೆ. ನವ ಉದಾರವಾದಿ ಯುಗದಲ್ಲಿ ಬಂಡವಾಳಶಾಹಿಯ ಆಶ್ರಯದಲ್ಲಿ ಜಾಗತಿಕ ಉತ್ತರದಿಂದ, ಜಾಗತಿಕ ದಕ್ಷಿಣಕ್ಕೆ ಆರ್ಥಿಕ ಚಟುವಟಿಕೆಗಳ ಚದುರಿಕೆ ನಡೆದಾಗ ಈ ದಕ್ಷಿಣದ ದೇಶಗಳಲ್ಲಿ ಉತ್ತರಕ್ಕೆ ಹೋಲಿಸಿದರೆ ಸರಾಸರಿ ಜಿಡಿಪಿಯ ಬೆಳವಣಿಗೆಯ ದರ ಹೆಚ್ಚಾಗಿರುವುದು ಕಾಣುತ್ತದೆಯಾದರೂ, ಅದರೊಂದಿಗೇ ಈ ದೇಶಗಳಲ್ಲಿ ಪೌಷ್ಠಿಕಾಂಶದ ಕೊರತೆಯ ಪ್ರಮಾಣದಲ್ಲಿಯೂ ಹೆಚ್ಚಳ ಕಂಡುಬಂದಿದೆ. ಮತ್ತು ಪೌಷ್ಠಿಕಾಂಶದ ಕೊರತೆ ಒಟ್ಟಾರೆ ಅಭಾವದ ಪ್ರತಿಬಿಂಬವೆಂದು ಪರಿಗಣಿಸಿದರೆ, ಜಾಗತಿಕ ದಕ್ಷಿಣದ ದೇಶಗಳಲ್ಲಿ ಆದಾಯದ ಮಟ್ಟದಲ್ಲಿ ಬಹಳಷ್ಟು ಇಳಿಕೆಯಾಗಿರುವ ಪುರಾವೆಗಳಿವೆ, ಅಂದರೆ ಒಟ್ಟು ಬಡತನದ ಪ್ರಮಾಣದಲ್ಲಿ ಹೆಚ್ಚಳ ಕಂಡುಬಂದಿದೆ. ನಿಜ, ಈ ದೇಶಗಳು ಉತ್ತಮ ರಸ್ತೆಗಳು, ವಿದ್ಯುತ್ ಮತ್ತು ಇತರ ಮೂಲಸೌಕರ್ಯಗಳ ಬೆಳವಣಿಗೆಯನ್ನು ಕಂಡಿವೆ, ಜನಗಳು ಅದರ ಪ್ರಯೋಜನವನ್ನು ಪಡೆದಿದ್ದಾರೆ ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಜನಗಳ ಖಾಸಗೀ ಬಳಕೆಯ ಪ್ರಮಾಣ ಇಳಿದಿರುವುದು ಸಮಾಜವಾದ ಮತ್ತು ಸಮಾಜವಾದ–ಬೆಂಬಲಿತ, ತುಲನಾತ್ಮಕವಾಗಿ ಹೆಚ್ಚು ಸ್ವಾಯತ್ತ ನಿಯಂತ್ರಿತ ಆಡಳಿತ ವ್ಯವಸ್ಥೆ ಕುಸಿದುಬಿದ್ದ ಮತ್ತು ವಿಶ್ವ ಅರ್ಥವ್ಯವಸ್ಥೆಯ ಮೇಲೆ ನವ ಉದಾರವಾದಿ ಬಂಡವಾಳಶಾಹಿಯು ಪ್ರಾಬಲ್ಯವನ್ನು ಸ್ಥಾಪಿಸಿದ ಅವಧಿಯಲ್ಲಿಯೇ ಎಂಬುದನ್ನು ಗಮನಿಸಬೇಕು.

ಆದ್ದರಿಂದ "ಒಮ್ಮುಖತೆ" ಎಂದೆಲ್ಲ ಪ್ರತಿಪಾದಿಸುವುದು ಪರಿಸ್ಥಿತಿಯನ್ನು ತಪ್ಪಾಗಿ ಅರ್ಥೈಸಿಕೊಂಡದ್ದರಿಂದಲೇ ಆಗಿದೆ. ಬಂಡವಾಳ ಶಾಹಿ ಜಗತ್ತಿನಲ್ಲಿ ಅಭಿವೃದ್ಧಿ ಹೊಂದಿರುವ ಮತ್ತು ಅಭಿವೃದ್ಧಿಯ ಪರಿಧಿಯ ದೇಶಗಳ ನಡುವೆ ಇದ್ದ ವಿಭಜನಾ ರೇಖೆಯು, ಈಗ ಭೌಗೋಳಿಕವಾಗಿ, ಪರಿಧಿಯಲ್ಲಿರುವ ದೇಶಗಳ ಒಳಗಿರುವ ವಿಭಜನೆಯಾಗಿ ಪಲ್ಲಟಗೊಂಡಿದೆ ಎಂದು ಹೇಳಬಹುದು. ಅಂದರೆ, ಈ ದೇಶಗಳ ಹಿರಿ ಬೂರ್ಜ್ವಾ ಮತ್ತು ಉಚ್ಚವರ್ಗಗಳ ಮಂದಿ ತಮ್ಮನ್ನು ಈಗ ಈ ವಿಭಜನಾ ರೇಖೆಯ ಆಚೆಯ ಮುಂದುವರೆದ ದೇಶಗಳ ಉಚ್ಚ ವರ್ಗಗಳ ಮಂದಿಯೊಂದಿಗೆತಮ್ಮನ್ನುಗುರುತಿಸಿಕೊಳ್ಳುತ್ತಿದ್ದಾರೆ. ವಸಾಹತುಶಾಹಿ–ವಿರೋಧಿ ಹೋರಾಟದ ಸಮಯದಲ್ಲಿ ಸಾಮಾನ್ಯವಾಗಿ ಇದ್ದಂತೆ ತಮ್ಮ ದೇಶಗಳ ಜನರ ಜೊತೆಗೆ ಇಲ್ಲ.

ಸಾಮ್ರಾಜ್ಯಶಾಹಿ ಎಂಬ ಪದವು ಎಂದೂ ಭೌಗೋಳಿಕ ವಿಭಜನೆಯನ್ನು ಸೂಚಿಸುವಂತದ್ದು ಆಗಿರಲಿಲ್ಲ. ಅದು ತನ್ನ ಸುತ್ತಮುತ್ತಲಿನ ಮೇಲೆ ಬಂಡವಾಳಶಾಹಿ ಉತ್ಪಾದನಾ ವಿಧಾನವನ್ನು ಚಲಾಯಿಸುವ ಬಲವಂತವನ್ನು ಸೂಚಿಸುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ ಅದನ್ನು ಭಿನ್ನವಾಗಿಸಿರುವುದು ರಾಜಕೀಯ ಅರ್ಥಶಾಸ್ತ್ರವೇ ಹೊರತು, ಭೌಗೋಳಿಕ ಗಡಿಗಳಲ್ಲ. ಈ ರಾಜಕೀಯ ಅರ್ಥಶಾಸ್ತ್ರದ ಕೆಲವು ಅಂಶಗಳನ್ನು ಮತ್ತೆ ನೆನಪಿಸಿಕೊಳ್ಳುವುದು ಸೂಕ್ತ.

ಬಂಡವಾಳಶಾಹಿಯ ದಬ್ಬಾಳಿಕೆ

ಬ್ರಿಟನ್‌ನಲ್ಲಿ ಹತ್ತಿ ಜವಳಿ ಉದ್ಯಮದಲ್ಲಿ ಸಂಭವಿಸಿದ ಕೈಗಾರಿಕಾ ಪುಟ 15 ಕ್ಕೆ

ದಕ್ಷಿಣ ಆಫ್ರಿಕಾವು ಬಡತನ ಮತ್ತು ಅಸಮಾನತೆಯ ತೊಡೆದು ಹಾಕಿ ಕ್ಷಿಪ್ರ ಪ್ರಗತಿಯನ್ನು ಸಾಧಿಸುತ್ತದೆಯೇ ಮತ್ತು ಏಕಧ್ರುವೀಯ US ಪ್ರಾಬಲ್ಯವನ್ನು ಕೊನೆಗೊಳಿಸುವ ಹೋರಾಟವನ್ನು ಮುನ್ನಡೆಸುವ ಪಾತ್ರವನ್ನು ವಹಿಸುತ್ತದೆಯೇ ಅಥವಾ ಬಿಳಿಯ ಬಲಪಂಥೀಯ ಶಕ್ತಿಗಳ, ಪಾಶ್ಚಿಮಾತ್ಯ ಒತ್ತಡಕ್ಕೆ ಸಿಲುಕಿ ಬಹುಸಂಖ್ಯಾತ ಕರಿಯರ ಹಿತಾಸಕ್ತಿ ಕಾಪಾಡುವಲ್ಲಿ ಸೋಲುತ್ತದೆಯೆ? ಎಂಬ ಕೂಡುದಾರಿಯಲ್ಲಿ ಇಂದು ನಿಂತಿದೆ.



ದಕ್ಷಿಣ ಆಫ್ರಿಕಾದಲ್ಲಿ ANC ಯ ‘ರಾಷ್ಟ್ರೀಯ ಸರಕಾರ’

ಜಗದ ಸುತ್ತ

ಎನ್.ಕೆ.ವಸಂತರಾಜ್

1994 ರಲ್ಲಿ ಮೊದಲ ಪ್ರಜಾಸತ್ತಾತ್ಮಕ ಚುನಾವಣೆಯ ಮೂವತ್ತು ವರ್ಷಗಳ ನಂತರ, ದಕ್ಷಿಣ ಆಫ್ರಿಕಾವು ರಾಜಕೀಯ ಕೂಡುದಾರಿಯಲ್ಲಿ ನಿಂತಿದೆ. 2024 ರ ಚುನಾವಣೆಯು ಆಳುವ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ (ANC) ನ ಮತದಲ್ಲಿ ಕುಸಿತವನ್ನು ಕಂಡಿತು. ANC ಕೇವಲ ಶೇ.40 ಮತಗಳನ್ನು ಗಳಿಸಿತು. 2019 ಕ್ಕಿಂತ ಶೇ.17 ಮತ ಕಡಿಮೆಯಾಗಿದೆ. ಮೊದಲ ಬಾರಿಗೆ ಬಹುಮತ ಕಳೆದುಕೊಂಡಿದೆ. ಮತದಾನವೂ ಕೇವಲ ಶೇ.58 ರಷ್ಟಾಗಿದ್ದು ಶೇ.6 ರಷ್ಟು ಕಡಿಮೆಯಾಗಿದೆ. ಗಂಭೀರ ಭ್ರಷ್ಟಾಚಾರದ ಆಪಾದನೆ, ಕೋರ್ಟು ಪ್ರಕರಣಗಳು ಮತ್ತು ಪಕ್ಷದ ಶಿಸ್ತುಕ್ರಮ ಎದುರಿಸಿದ ಮಾಜಿ ಅಧ್ಯಕ್ಷ ಜಾಕೋಬ್ ಜುಮಾ ಅವರು ANC ಬಿಟ್ಟು ತಮ್ಮದೇ ಹೊಸ ಪಕ್ಷ (ಎಂಕೆ ಪಾರ್ಟಿ) ರಚಿಸಿ ಚುನಾವಣೆ ಸ್ಪರ್ಧೆ ಮಾಡಿ ಶೇ.15 ಮತ ಗಳಿಸಿದ್ದು ಬಹುಶಃ ಈ ಮತ ಕುಸಿತಕ್ಕೆ ಪ್ರಮುಖ ಕಾರಣವಾಗಿದೆ.

ಈ ಚುನಾವಣೆಯ ನಂತರ ವಿವಿಧ ಬಲಪಂಥೀಯ ಪಕ್ಷಗಳ ಪಾತ್ರವನ್ನು ದೇಶದ ರಾಜಕೀಯದಲ್ಲಿ ಹೆಚ್ಚಿಸಿದೆ. ಫಲಿತಾಂಶಗಳ ಹಿನ್ನೆಲೆಯಲ್ಲಿ ವರ್ಣಭೇದ ನೀತಿಯ ಅಂತ್ಯದ ನಂತರ ಮೊಟ್ಟಮೊದಲ ಸಮ್ಮಿಶ್ರ ಸರ್ಕಾರಕ್ಕಾಗಿ ANC ಎಲ್ಲ ಪಕ್ಷಗಳ ಜತೆ ಮಾತುಕತೆ ನಡೆಸಬೇಕಾಯಿತು. ಅಂತಿಮವಾಗಿ ANC, ಪ್ರಮುಖ ವಿರೋಧ ಪಕ್ಷವಾದ ಅಲ್ಪಸಂಖ್ಯಾತ ಬಿಳಿಯರ ಪಕ್ಷ ಡೆಮಾಕ್ರಟಿಕ್ ಅಲೈಯನ್ಸ್ (DA) ಸೇರಿದಂತೆ ಹಲವು ಪಕ್ಷಗಳ ಬೆಂಬಲಿತ ‘ರಾಷ್ಟ್ರೀಯ ಸರಕಾರ’ ರಚಿಸಲಿದೆ. ANC ಯ ಸಿರಿಲ್ ರಾಂಫೋಸಾ ಅಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ. ANC ಯ ಭಾಗವಾಗಿದ್ದು ಹೊರ ಹೋದ ಎಡಪಂಥೀಯ ಪಕ್ಷಗಳಾದ ಆರ್ಥಿಕ ಸ್ವಾತಂತ್ರ್ಯ ಹೋರಾಟಗಾರರು (EFF) ಮತ್ತು ಜುಮಾ ಅವರ ಹೊಸ ಪಕ್ಷ uMkhonto we Sizwe (MKP) ಹಲವು ‘ಅಸ್ವೀಕಾರಾರ್ಹ’ ಷರತ್ತುಗಳನ್ನು ಹಾಕಿದ್ದು ANC ಅವನ್ನು ಒಪ್ಪದ್ದರಿಂದ ಅವು ಬೆಂಬಲಿಸುತ್ತಿಲ್ಲ. MKP ಸಿರಿಲ್ ರಾಂಫೋಸಾ ಅಧ್ಯಕ್ಷರಾಗುವಂತಿಲ್ಲ ಅಂತ ಷರತ್ತು ಹಾಕಿತ್ತು. ಅಲ್ಪಸಂಖ್ಯಾತ ಸ್ಥಿತಿಯಿಂದಾಗಿ ANC ಯ ‘ರಾಷ್ಟ್ರೀಯ ಸರಕಾರ’ ತನ್ನ ನೀತಿಗಳನ್ನು ಅನುಸರಿಸಲು ಇತರ ಪಕ್ಷಗಳಿಂದ ಅಡೆತಡೆ ಎದುರಿಸಬಹುದು.

ದಕ್ಷಿಣ ಆಫ್ರಿಕಾವು ಬಡತನ ಮತ್ತು ಅಸಮಾನತೆಯ ತೊಡೆದು ಹಾಕಿ ಕ್ಷಿಪ್ರ ಪ್ರಗತಿಯನ್ನು ಸಾಧಿಸುತ್ತದೆಯೇ ಮತ್ತು ಏಕಧ್ರುವೀಯ US ಪ್ರಾಬಲ್ಯವನ್ನು ಕೊನೆಗೊಳಿಸುವ ಹೋರಾಟವನ್ನು ಮುನ್ನಡೆಸುವ ಪಾತ್ರವನ್ನು ವಹಿಸುತ್ತದೆಯೇ ಅಥವಾ ಬಿಳಿಯ ಬಲಪಂಥೀಯ ಶಕ್ತಿಗಳ, ಪಾಶ್ಚಿಮಾತ್ಯ ಒತ್ತಡಕ್ಕೆ ಸಿಲುಕಿ ಬಹುಸಂಖ್ಯಾತ ಕರಿಯರ ಹಿತಾಸಕ್ತಿ ಕಾಪಾಡುವಲ್ಲಿ ಸೋಲುತ್ತದೆಯೆ? ಎಂಬ ಕೂಡುದಾರಿಯಲ್ಲಿ ಇಂದು ನಿಂತಿದೆ. ANC, ದಕ್ಷಿಣ ಆಫ್ರಿಕಾದ ಕಮ್ಯುನಿಸ್ಟ್ ಪಕ್ಷ ಮತ್ತು ಟ್ರೇಡ್ ಯೂನಿಯನ್ ಕೇಂದ್ರ COSATU ತ್ರಿಪಕ್ಷೀಯ ಕೂಟ ರಚಿಸಿದ್ದು, ಚುನಾವಣೆಯಲ್ಲಿ ANC ಯನ್ನು ಬೆಂಬಲಿಸುತ್ತವೆ. ಹೀಗಾಗಿ, ಎರಡನೆಯ ಸಾಧ್ಯತೆ ಕಡಿಮೆ. ಆದರೆ ಮೊದಲನೆಯ ಸಾಧ್ಯತೆ ಜಾರಿಗೆ ತೀವ್ರ ಅಡೆತಡೆ ನಿರೀಕ್ಷಿತವಾಗಿದೆ.

ಫಲಿತಾಂಶ

ಮತದಾನ ಮಾಡಿದ ನಾಗರಿಕರಲ್ಲಿ 4 ಅಗ್ರ ಪಕ್ಷಗಳು ANC 159 ಸೀಟು (40.2% ಮತ), DA 87 ಸೀಟು (21.8% ಮತ), MKP 58(14.6%, ಮತ) EFF 39 ಸೀಟು (9.5%ಮತ) ಗಳಿಸಿವೆ.

ದಕ್ಷಿಣ ಆಫ್ರಿಕಾದ ಮತದಾರರ ವಯಸ್ಸಿನ ಸಂಖ್ಯೆ ಸುಮಾರು 4.2 ಕೋಟಿ. ಅವರಲ್ಲಿ ಕೇವಲ 2.7 ಕೋಟಿ ಜನರು ನೋಂದಾಯಿಸಿಕೊಂಡಿದ್ದಾರೆ. 1.60 ಕೋಟಿ ನೋಂದಾಯಿತ ಮತದಾರರು ಮತ ಚಲಾಯಿಸಿದ್ದಾರೆ. ಯಾವುದೇ ರಾಜಕೀಯ ಪಕ್ಷವು ವಯಸ್ಕ ಜನಸಂಖ್ಯೆಯ 16% ಕ್ಕಿಂತ ಹೆಚ್ಚು ಜನರನ್ನು ಪ್ರತಿನಿಧಿಸುತ್ತದೆ ಎಂದು ಹೇಳಿಕೊಳ್ಳುವಂತಿಲ್ಲ. ಮತದಾನದ ವಯಸ್ಸಿನ ಜನಸಂಖ್ಯೆಯ ದೃಷ್ಟಿಯಿಂದ ಇಲ್ಲಿ ಅಗ್ರ 4 ಪಕ್ಷಗಳು, ANC 15.5%, DA 8.4%, MKP 5.6%, EFF 3.6% ಮತ ಮಾತ್ರ ಪಡೆದಿವೆ.

ಬಂಡವಾಳಶಾಹಿ ಮಾಧ್ಯಮಗಳು ಮುಖ್ಯವಾಗಿ ಚುನಾವಣೆಯನ್ನು ANC ಸರ್ಕಾರದ ಮತ್ತು ನೀತಿಗಳ ನಿರಾಕರಣೆ ಎಂದು ನಿರೂಪಿಸುತ್ತಿವೆ. ಆದರೆ ಫಲಿತಾಂಶಗಳು ವಾಸ್ತವದಲ್ಲಿ, ಇಡೀ ರಾಜಕೀಯ ವ್ಯವಸ್ಥೆಯ ಮತ್ತು ಮತದಾನವು ಸಕಾರಾತ್ಮಕ ಬದಲಾವಣೆಯನ್ನು ತರಬಹುದು ಎಂಬ ಕಲ್ಪನೆಯ ನಿರಾಕರಣೆಯಾಗಿದೆ. ಇದು ದೇಶದ ಭೀಕರ ಸ್ಥಿತಿಯ ಪ್ರತಿಬಿಂಬವಾಗಿದೆ.

ದಕ್ಷಿಣ ಆಫ್ರಿಕಾದ ಖನಿಜ ಸಂಪತ್ತು ವರ್ಷಕ್ಕೆ ಕನಿಷ್ಠ 125 ಶತಕೋಟಿ ಡಾಲರ್ ಉತ್ಪಾದಿಸುತ್ತಿದೆ, ಕನಿಷ್ಠ 2.4 ಟ್ರಿಲಿಯನ್ ಡಾಲರ್ ಮೌಲ್ಯದ ಖನಿಜಗಳು ಇನ್ನೂ ನೆಲದಲ್ಲಿ ಉಳಿದಿವೆ. ಆಫ್ರಿಕಾದ ಅತಿ ದೊಡ್ಡ ಜೋಹಾನ್ಸ್ ಬರ್ಗ್ ಶೇರು ಮಾರುಕಟ್ಟೆಯಲ್ಲಿರುವ ಕಂಪನಿಗಳು 2023 ರಲ್ಲಿ ಸರಿಸುಮಾರು 1 ಟ್ರಿಲಿಯನ್ ಡಾಲರ್ ಮೌಲ್ಯದ್ದಾಗಿದ್ದವು.

ಆದಾಗ್ಯೂ, ಜನಸಂಖ್ಯೆಯ 10% ಜನರು 80% ಸಂಪತ್ತನ್ನು ಹೊಂದಿದ್ದಾರೆ. ನಿರುದ್ಯೋಗವು ಅಧಿಕೃತವಾಗಿ 32.9% ರಷ್ಟಿದೆ, 15–34 ವಯೋಮಾನದವರಲ್ಲಿ 45.5%. 55% ಕುಟುಂಬಗಳು ನೀರು ಪೂರೈಕೆ ಹೊಂದಿಲ್ಲ ಮತ್ತು 34% ಇನ್ನೂ ಫ್ಲಶ್ ಶೌಚಾಲಯಗಳನ್ನು ಹೊಂದಿಲ್ಲ. ಅಧಿಕೃತ ಅಂಕಿಅಂಶಗಳ ಪ್ರಕಾರ ದೇಶದ 50% ಬಡತನದಲ್ಲಿ ವಾಸಿಸುತ್ತಿದ್ದಾರೆ, ಗ್ರಾಮೀಣ ಪ್ರದೇಶಗಳಲ್ಲಿ 65% ಬಡತನವಿದೆ, ಇದಲ್ಲದೆ, ಕೆಲವು ಕ್ರಮಗಳ ಪ್ರಕಾರ, ದಕ್ಷಿಣ ಆಫ್ರಿಕಾವು ಭೂಮಿಯ ಮೇಲಿನ ಆದಾಯದ ಅಸಮಾನತೆಯ ಅತ್ಯುನ್ನತ ಮಟ್ಟವನ್ನು ಹೊಂದಿದೆ. ಇದರ ಜೊತೆಗೆ, ಶೇ.75 ಕೃಷಿ ಭೂಮಿ ಇನ್ನೂ ಬಿಳಿಯರ ಒಡೆತನದಲ್ಲಿದೆ.

ಇದು ಫಲಿತಾಂಶಗಳಲ್ಲಿಯೂ ಪ್ರತಿಫಲಿಸುತ್ತದೆ. ಮತ ಚಲಾಯಿಸಲು ಆಯ್ಕೆ ಮಾಡಿದವರಲ್ಲಿ ಶೇ.64.2 ಜನರು ANC, MK ಅಥವಾ EFF ಗಳನ್ನು (ಇವೆಲ್ಲ ಹೆಚ್ಚು ಕಡಿಮೆ ANC ಕಾರ್ಯಕ್ರಮವನ್ನೇ ಹೊಂದಿವೆ) ಬೆಂಬಲಿಸಿದ್ದಾರೆ. ಅವರೆಲ್ಲರೂ ಈ ಸಮಸ್ಯೆಗಳನ್ನು ಪರಿಹರಿಸಲು ದೃಢವಾಗಿ ಕೆಲಸ ಮಾಡುವ ಇರಾದೆಯವರು. ANC 2030 ರ ವೇಳೆಗೆ ಬಡತನವನ್ನು ಕೊನೆಗೊಳಿಸುತ್ತೇವೆ ಎಂದು ಮತದಾರರಿಗೆ ತಿಳಿಸಿದರು. MK ಮತ್ತು EFF ಮತದಾರರಿಗೆ ಪರಿಹಾರವಿಲ್ಲದೆ ಭೂಮಿಯನ್ನು ವಶಪಡಿಸಿಕೊಳ್ಳುವುದಾಗಿ ಮತ್ತು ಗಣಿ ಮತ್ತು ಬ್ಯಾಂಕುಗಳನ್ನು ರಾಷ್ಟ್ರೀಕರಣಗೊಳಿಸುವುದಾಗಿ ಭರವಸೆ ನೀಡಿದರು. ಉಚಿತ ಆರೋಗ್ಯ ರಕ್ಷಣೆ, ವಸತಿ ಮತ್ತು ಶಿಕ್ಷಣಕ್ಕೆ ಗಮನಾರ್ಹವಾಗಿ ವಿಸ್ತರಿಸಿದ ಪ್ರವೇಶದ ಬಗ್ಗೆ ಮೂವರೂ ಪ್ರಚಾರ ಮಾಡುತ್ತಾರೆ. ಅಂತಾರಾಷ್ಟ್ರೀಯವಾಗಿ ಮೂವರೂ ಕ್ಯೂಬಾ, ಪ್ಯಾಲೆಸ್ತೀನ್, ವೆನೆಜುವೆಲಾ ಮತ್ತು ಚೀನಾಕ್ಕೆ ಬೆಂಬಲ ನೀಡುತ್ತಿದ್ದಾರೆ.

ನಿರ್ದಿಷ್ಟ ಪಕ್ಷಗಳು ಅಥವಾ ಯೋಜನೆಗಳ ಪ್ರಾಮಾಣಿಕತೆ ಅಥವಾ ಕಾರ್ಯಸಾಧ್ಯತೆ ಪ್ರಶ್ನಾತೀತವಲ್ಲದಿರಬಹುದು. ಆದರೆ ದಕ್ಷಿಣ ಆಫ್ರಿಕಾದ ಬಹುಪಾಲು ಮತದಾರರು ಅಂತರರಾಷ್ಟ್ರೀಯ ಸಂಬಂಧಗಳಲ್ಲಿ ಸಾಮ್ರಾಜ್ಯಶಾಹಿ–ವಿರೋಧಿ ವಿಧಾನವನ್ನು ಅನುಸರಿಸುವ ಹಾಗೂ, ಬಡತನ ಮತ್ತು ವಸಾಹತುಶಾಹಿಯ ಪರಂಪರೆಯನ್ನು ಗಂಭೀರವಾಗಿ ಹಿಮ್ಮೆಟ್ಟಿಸುವ ನೀತಿಗಳನ್ನು ಹುಡುಕುತ್ತಿದ್ದಾರೆ.

ಆಳುವವರ ಜನರ ನಡುವಿನ ಹೊಸ ಬಲಾಬಲ

ಈ ನಡುವೆ ಶೇ.27 ರಷ್ಟು ಮತದಾರರು ಬಂಡವಾಳಶಾಹಿ–ಪರ, ಸಾಮ್ರಾಜ್ಯಶಾಹಿ–ಪರ ಪ್ರವೃತ್ತಿಯನ್ನು ಸ್ಪಷ್ಟವಾಗಿ ಪ್ರತಿನಿಧಿಸುವ ರಾಜಕೀಯ ಪಕ್ಷಗಳನ್ನು ಬೆಂಬಲಿಸಿದ್ದಾರೆ. ಇದು 2019 ರ ಚುನಾವಣೆಗಿಂತ ಸರಿಸುಮಾರು ಶೇ. 3–4 ಹೆಚ್ಚಳವಾಗಿದೆ.

ಏರುತ್ತಿರುವ ಬಲಪಂಥೀಯ ಶಕ್ತಿಗಳು ANC ಆಳ್ವಿಕೆಯ ಅಡಿಯಲ್ಲಿ ಬಂಡವಾಳ ಮತ್ತು ಪ್ರಭುತ್ವ ನಡುವಿನ ವೈರುಧ್ಯಗಳನ್ನು ಪರಿಹರಿಸಲು ಆಳುವ ವರ್ಗಗಳ ಪ್ರಯತ್ನವನ್ನು ಪ್ರತಿನಿಧಿಸುತ್ತವೆ. ವರ್ಣಭೇದ ನೀತಿಯ ಶಾಂತಿಯುತ ಅಂತ್ಯದ ಬೆಲೆಯಾಗಿ ಬಿಳಿಯ ಶ್ರೀಮಂತರ ಆರ್ಥಿಕ ಬಲವನ್ನು ಹಾಗೆ ಬಿಡಬೇಕಾಯಿತು. ಆದಾಗ್ಯೂ ಇದು ಬಿಳಿಯ ಶ್ರೀಮಂತರಿಗೆ ಸೂಕ್ತ ಪರಿಸ್ಥಿತಿಯಾಗಿರಲಿಲ್ಲ. ಅವರು ಹಲವು ಒತ್ತಡಗಳಿಗೆ ಮಣಿಯಬೇಕಾಯಿತು. “ಗಣ್ಯ” ಮತ್ತು “ಮಧ್ಯಮ ವರ್ಗ” ಹಂತಗಳಲ್ಲಿ ಕರಿಯರ ಸೇರ್ಪಡೆಗಾಗಿ ಬೇಡಿಕೆ, ಮತ್ತು ANC ಆಂತರಿಕ ರಾಜಕೀಯದಲ್ಲಿ ಮಹತ್ವದ ಪಾತ್ರ ವಹಿಸುವ ಬಡವರು, ಕಾರ್ಮಿಕ ಸಂಘಗಳು ಮತ್ತು ಕಮ್ಯುನಿಸ್ಟರ ಕನಿಷ್ಠ ಕೆಲವು ಬೇಡಿಕೆಗಳನ್ನು ಪರಿಹರಿಸುವ ಅಗತ್ಯತೆಗಳಿಗೆ ಮಣಿಯಬೇಕಾಯಿತು.

ANC ಯ ರಾಜಕೀಯ ಪ್ರಾಬಲ್ಯವು ಹದಗೆಟ್ಟಂತೆ, “ಗಣ್ಯ” ಶಕ್ತಿಗಳು ತಮ್ಮ ಪರವಾಗಿ ಅಧಿಕಾರದ ಸಮತೋಲನವನ್ನು ಹೆಚ್ಚು ಬದಲಾಯಿಸುವ ಪ್ರಯತ್ನದಲ್ಲಿ ವಿರೋಧ ಪಕ್ಷಗಳ ಒಂದು ವಿಭಾಗಕ್ಕೆ ಹೆಚ್ಚು ಹಣವನ್ನು ನೀಡಿವೆ. ಇದರ ಕೇಂದ್ರದಲ್ಲಿ DA ಪಕ್ಷ ಇದೆ. ಇದಕ್ಕೆ ಆಡಳಿತ ವರ್ಗದ ಕುಟುಂಬಗಳು, ಜೂಜಿನ “ಹೊಸ” ಹಣ ಮತ್ತು, ಜರ್ಮನಿ ಮತ್ತು ಡೆನ್ಮಾರ್ಕ್‌ನ ಕೆಲವು ದೊಡ್ಡ ವ್ಯಾಪಾರ–ಪರ ರಾಜಕೀಯ ಪಕ್ಷಗಳಿಂದ ಧನಸಹಾಯ ಹರಿಯುತ್ತಿದೆ.

ಇದೇ ರೀತಿಯ ದಾನಿಗಳು ActionSA ಮತ್ತು ‘ಬಿಲ್ಡ್ ಒನ್ ಸೌತ್ ಆಫ್ರಿಕಾ’ ದಂತಹ ಪಕ್ಷಗಳಿಗೆ ಬೆಂಬಲವಾಗಿ ಅದ್ದೂರಿಯಾಗಿ ಖರ್ಚು ಮಾಡಿದ್ದಾರೆ. ಅದು DA–ತರಹದ ನೀತಿಗಳ ಮೇಲೆ ಹೆಚ್ಚು “ಕರಿಯ” ಮುಖವನ್ನು ಪ್ರಸ್ತುತ ಪಡಿಸಲು ಪ್ರಯತ್ನಿಸುತ್ತದೆ. ‘ದೇಶಭಕ್ತ ಒಕ್ಕೂಟ’ ದಂತಹ ಇತರರು, ವ್ಯಾಪಾರ ಸಮುದಾಯದ ಬೆಂಬಲದಿಂದ ಹೊರಹೊಮ್ಮುತ್ತಾರೆ, ಹೆಚ್ಚು ಬಲಪಂಥೀಯ “ಜನಮರುಳು” ವಿಧಾನದಲ್ಲಿ ಬೇರೂರಿದ್ದಾರೆ, ಕಪ್ಪು ಬಡವರಿಗೆ ಹೆಚ್ಚು ಮನವಿ ಮಾಡಲು ವಿನ್ಯಾಸಗೊಂಡ ನಿರ್ದಿಷ್ಟವಾಗಿ ವಲಸೆ–ವಿರೋಧಿ ರಾಜಕೀಯವನ್ನು ಒತ್ತಿ ಹೇಳುತ್ತಾರೆ.



ಈ ಬಂಡವಾಳಶಾಹಿ–ಪರ ಪ್ರವಾಹಗಳು ANC ಯ ಅವನತಿ ಮತ್ತು ವಿಭಜನೆಯನ್ನು ಬಳಸಿಕೊಳ್ಳಲು ANC ಅನ್ನು ಆಳುವ ವರ್ಗಗಳ ಜತೆ ಸಮಜಾಯಿಷಿಗೆ ಪ್ರಯತ್ನಿಸುತ್ತಿವೆ. ಅವರನ್ನು “ಮಾರುಕಟ್ಟೆ”ಯ ➚

ಗೋರ್ ಮಾಟಿ..........

ಪುಟ 16 ರಿಂದ

ಜಾಣ್ಮೆಯು ಕಠಿಣವೂ ನಿರ್ಧಯಿಯೂ ಆಗಿದೆ. ನಾವು ತುಂಬಾ ಯೋಚಿಸುತ್ತೇವೆ ಆದರೆ ಕಡಿಮೆ ಪ್ರೀತಿಸುತ್ತೇವೆ. ಯಂತ್ರಗಳಿಗಿಂತ ಹೆಚ್ಚು ನಮಗೆ ಮಾನವೀಯತೆಯ ಅವಶ್ಯಕತೆ ಇದೆ. ಜಾಣ್ಮೆಗಿಂತ ಹೆಚ್ಚು ದಯೆ, ಸಭ್ಯತೆಯ ಅವಶ್ಯಕತೆ ಇದೆ. ಈ ಗುಣಗಳಿಲ್ಲದೇ ಹೋದರೆ ಬದುಕು ಹಿಂಸಾಮಯವಾಗುವುದು ಮತ್ತು ವಿನಾಶವಾಗುವುದು.

ವಿಮಾನ ಮತ್ತು ರೇಡಿಯೋಗಳು ನಮ್ಮನ್ನು ಹತ್ತಿರಕ್ಕೆ ತಂದಿವೆ. ಈ ಸಂಶೋಧನೆಗಳ ತಥ್ಯವೇ ಮನುಷ್ಯನ ಒಳ್ಳೆಯತನವನ್ನು ಕೂಗಿ ಹೇಳುತ್ತಿವೆ. ವಿಶ್ವ ಭ್ರಾತೃತ್ವಕ್ಕಾಗಿ ಒಟ್ಟಾಗಿ ಮೊರೆಯಿಡುತ್ತಿವೆ. ಈಗಲೂ ಸಹ ನನ್ನ ಧ್ವನಿಯು ಮಿಲಿಯಗಟ್ಟಲೆ ಜನರನ್ನು ತಲುಪುತ್ತಿದೆ. ನಿರ್ಗತಿಕ ಗಂಡಸರು, ಹೆಂಗಸರು, ಪುಟ್ಟ ಪುಟ್ಟ ಮಕ್ಕಳು ವ್ಯವಸ್ಥೆಯ ಬಲಿಪಶುಗಳು. ಮುಗ್ಧ ಜನರನ್ನು ಚಿತ್ರಹಿಂಸೆ ನೀಡಿ ಬಂಧನದಲ್ಲಿರಿಸುವ ವ್ಯವಸ್ಥೆ!

ಯಾರಿಗೆ ನನ್ನ ಮಾತುಗಳು ಕೇಳಿಸುತ್ತಿವೆಯೋ ಕೇಳಿರಿ, ಧೃತಿಗೆಡದಿರಿ. ನಮ್ಮ ಮೇಲಿರುವ ಈ ವಿಷಾದ, ಸ್ವಾರ್ಥ ಸಾಗುತ್ತಿರುವ ಈ ಹೊತ್ತು ಮಾನವ ಪ್ರಗತಿಯ ಬಗ್ಗೆ ಭಯಪಟ್ಟ ಮನುಷ್ಯರ ಕಹಿ ಭಾವನೆಗಳವು. ಮಾನವ ದ್ವೇಷವು ಕೊನೆಗೊಳ್ಳಲಿದೆ, ಸರ್ವಾಧಿಕಾರಿಯ ಅಂತ್ಯವಾಗಲಿದೆ. ಜನರ ಕೈಗಳಿಂದ ಕಿತ್ತುಕೊಂಡ ಅಧಿಕಾರವು ಮರಳಿ ಜನರ ಕೈಗಳಿಗೆ ಮರಳಲಿದೆ.

ಸಂಗಾತಿಗಳೆ ನಿಮ್ಮತನವನ್ನು ದುಷ್ಟರಿಗೆ ಬಿಟ್ಟುಕೊಡದಿರಿ. ನಿಮ್ಮನ್ನು ಶೋಷಿಸುವವರಿಗೆ, ನಿಮ್ಮನ್ನು ದಾಸ್ಯಕ್ಕೆ ದೂಡುವವರಿಗೆ, ನಿಮ್ಮ ಬದುಕುಗಳನ್ನು ನಿಯಂತ್ರಿಸುವವರಿಗೆ, ನೀವು ಯಾವುದನ್ನು ಯೋಚಿಸಬೇಕು ಪ್ರೀತಿಸಬೇಕು ಎನ್ನುವವರಿಗೆ,ನಿಮ್ಮನ್ನದುಡಿಸಿದವರಿಗೆ,ಪಶುಗಳಂತೆ ನಡೆಸಿಕೊಂಡವರಿಗೆ, ನಿಮ್ಮನ್ನು ಫಿರಂಗಿಗಳ ಮದ್ದಾಗಿ ಬಳಸಿದವರಿಗೆ, ಮನುಷ್ಯರಲ್ಲದವರಿಗೆ ನಿಮ್ಮತನವನ್ನು ಬಿಟ್ಟುಕೊಡದಿರಿ.

ಯಾಂತ್ರಿಕ ಮನುಷ್ಯರಿಗೆ, ಯಾಂತ್ರಿಕ ಮನಸ್ಸುಗಳಿಗೆ

ನೀವು ಯಂತ್ರಗಳಲ್ಲ, ನೀವು ದನಗಳಲ್ಲ!! ನೀವು ಮನುಷ್ಯರು ನಿಮ್ಮ ಹೃದಯದಲ್ಲಿ ಮಾನವತೆಯ ಪ್ರೇಮವಿದೆ.

ನೀವು ದ್ವೇಷಿಸಲಾರಿರಿ, ಪ್ರೀತಿಸಲ್ಪಡದವನು ಮಾತ್ರ ದ್ವೇಷಿಸುತ್ತಾನೆ. ಸೈನಿಕರೆ ದಾಸ್ಯಕ್ಕಾಗಿ ಹೋರಾಡದಿರಿ, ಸ್ವಾತಂತ್ರ್ಯಕ್ಕಾಗಿ ಹೋರಾಡಿ.

ಸಂತ ಲೂಕನ 17 ನೇ ಅಧ್ಯಾಯದಲ್ಲಿ ಹೀಗಿದೆ.

"ದೇವರ ಸಾಮ್ರಾಜ್ಯವು ಮಾನವನ ಹೃದಯದಲ್ಲಿದೆ". ಒಬ್ಬನ ಹೃದಯದಲ್ಲಲ್ಲ, ಯಾವುದೋ ಗುಂಪಿನ ಹೃದಯದಲ್ಲಲ್ಲ, ಎಲ್ಲರ ಹೃದಯದಲ್ಲಿಯೂ.

ಆ ಶಕ್ತಿ ನಿಮ್ಮಲ್ಲಿದೆ. ಯಂತ್ರಗಳನ್ನು ತಯಾರಿಸುವ ಶಕ್ತಿ! ಸಂತೋಷವನ್ನು ತಯಾರಿಸುವ ಶಕ್ತಿ! ಈ ಬದುಕನ್ನು ಮುಕ್ತವೂ, ಸುಂದರವೂ ಆಗಿಸುವ ಶಕ್ತಿ ನಿಮಗಿದೆ! ಈ ಬದುಕನ್ನು ಅದ್ಭುತ ಸಾಹಸವನ್ನಾಗಿಸಿ! ಪ್ರಜಾಪ್ರಭುತ್ವದ ಹೆಸರಿನಲ್ಲಿ ಆ ಶಕ್ತಿಯನ್ನು ಬಳಸೋಣ!

ಒಟ್ಟಾಗೋಣ ಹೊಸ ವಿಶ್ವಕ್ಕಾಗಿ ಹೋರಾಡೋಣ. ಆ ಸಭ್ಯ ಜಗತ್ತಿಗಾಗಿ, ಎಲ್ಲಾ ಜನರಿಗೆ ಉದ್ಯೋಗ ನೀಡುವ, ಯುವಜನರಿಗೆ ಭವಿಷ್ಯವನ್ನೂ, ವೃದ್ಧರಿಗೆ ರಕ್ಷಣೆಯನ್ನೂ ನೀಡುವ ಆ ಜಗತ್ತಿಗೋಸ್ಕರ!

ಈ ಸುಳ್ಳು ಆಶ್ವಾಸನೆಗಳ ಮೂಲಕವೇ ಭ್ರಷ್ಟರು ಅಧಿಕಾರಕ್ಕೆ ಬಂದಿದ್ದಾರೆ. ಅದು ಸುಳ್ಳು! ಆ ಆಶ್ವಾಸನೆಗಳನ್ನು ಈಡೇರಿಸಲಾರರು ಎಂದೆಂದಿಗೂ!!! ಸರ್ವಾಧಿಕಾರಿಗಳು ತಮ್ಮನ್ನು ತಾವು ಮುಕ್ತಿಗೊಳಿಸುತ್ತಾರೆ. ಆದರೆ ಜನರನ್ನು ಗುಲಾಮರನ್ನಾಗಿಸುತ್ತಾರೆ.

ನಾವು ಆ ಆಶ್ವಾಸನೆಗಳಿಗೋಸ್ಕರ ಹೋರಾಡೋಣ. ಮುಕ್ತ ಜಗತ್ತಿಗೋಸ್ಕರ, ರಾಷ್ಟ್ರ ಬಂಧಗಳ ವಿಮುಕ್ತಿಗೋಸ್ಕರ. ಸ್ವಾರ್ಥ, ದ್ವೇಷ, ಅಸಹನೆಗಳ ಅಳಿವಿಗೋಸ್ಕರ!! ವೈಚಾರಿಕ ಜಗತ್ತಿಗಾಗಿ ಹೋರಾಡೋಣ! ವಿಜ್ಞಾನ ಮತ್ತು ಅಭಿವೃದ್ಧಿಯು ಎಲ್ಲಾ ಮನುಷ್ಯರನ್ನು ಸಂತೋಷದೆಡೆಗೆ ಸಾಗಿಸುವುದು.

ಸಂಗಾತಿಗಳೆ ಪ್ರಜಾಪ್ರಭುತ್ವದ ಹೆಸರಿನಲ್ಲಿ ನಾವೆಲ್ಲರೂ ಒಂದಾಗೋಣ.

ಯಾರೂ ಯಾರಿಗೂ ಗುಲಾಮರೂ ಅಲ್ಲಾ, ಯಾರೂ ಯಾರನ್ನೂ ಶೋಷಣೆ ಮಾಡಬಾರದು. ಪ್ರೀತಿಯಿಂದ ಎಲ್ಲವನ್ನು ಗೆಲ್ಲಲು ಸಾಧ್ಯ, ಮತ ಧರ್ಮಗಳ ಶ್ರೇಷ್ಠತೆಯಿಂದ ಹೊರಬಂದು ಎಲ್ಲರೂ ಸೋದರರಂತೆ ಬದುಕಬೇಕಿದೆ.”

ಚಾರ್ಲಿಯ ಬಾಯಿಂದ ಬರುವ ಈ ಮಾತುಗಳು ಇಂದಿಗೂ ನಾವೆಲ್ಲರು ಅನುಭವಿಸುತ್ತಿರುವುದೇ ಆಗಿದೆ.

‘ಗೋರ್‌ಮಾಟಿ’ ರೂಪಕದಲ್ಲಿ ಶಾಂತಾನಾಯಕ್‌ರ ಕಾದಂಬರಿ 'ಗೋರ್‌ಮಾಟಿ'ಯ ಕೆಲವು ಅಧ್ಯಾಯಗಳನ್ನು ಬಿ.ಟಿ. ಲಲಿತನಾಯಕ್‌ರವರ 'ತಾಂಡಾಯಣ', 'ಹಬ್ಬ ಮತ್ತು ಬಲಿ' ಸಣ್ಣ ಕಥೆಗಳ ಜೊತೆಗೆ ಚರಿತ್ರೆಯಲ್ಲಿ ಮುಖ್ಯವಾಗಿರುವ ಲಕ್ಕಿಸಾ ಬಂಜಾರ, ವಸಾಹತುಶಾಹಿಯ ಅಡಿಯಲ್ಲಿ ಬಂಜಾರರ ದಮನಿತ ಸಂಕಥನಗಳನ್ನು ಹಾಗೂ ಸಂತ ಸೇವಾಲಾಲರ ಧರ್ಮ ಬೋಧನೆಯ ಅಂಶಗಳನ್ನು ಬೆಸೆಯಲಾಗಿದೆ.

ರಂಗಾಯಣದ ರೆಪರ್ಟರಿಯ ನುರಿತ ಕಲಾವಿದರು ಅಭಿನಯಿಸಿರುವ "ಗೋರ್ ಮಾಟಿ" ನಾಟಕವನ್ನು ರಂಗಭೂಮಿಯಲ್ಲಿ ಹಲವು ಪ್ರಯೋಗಗಳಿಗೆ ಹೆಸರಾಗಿ ಸತತವಾಗಿ 9 ಗಂಟೆಗಳ ಕಾಲ ಕುವೆಂಪುರವರ ಮಹಾಕಾದಂಬರಿ ಮಲೆಗಳಲ್ಲಿ ಮದುಮಗಳನ್ನು ನಿರ್ದೇಶಿಸಿದ ಸಿ.ಬಸವಲಿಂಗಯ್ಯನವರ ಪರಿಕಲ್ಪನೆ ಮತ್ತು ನಿರ್ದೇಶಕತ್ವದಲ್ಲಿ ಅಚ್ಚುಕಟ್ಟಾಗಿ ಮೂಡಿಬಂದಿದೆ. ಡಾ.ಶರಗಾನಹಳ್ಳಿ ಶಾಂತಾನಾಯಕ್ ರವರ ರಂಗರೂಪಕ, ಶಶಿಧರ ಅಡಪ ಅವರ ರಂಗವಿನ್ಯಾಸ, ಪ್ರಮೋದ್ ಶಿಗ್ಗಾವ್ ಮತ್ತು ಶಶಿಕಲಾ ಬಿ.ಎನ್ ಅವರ ವಸ್ತ್ರ ವಿನ್ಯಾಸ, ಕೃಷ್ಣಕುಮಾರ್ ನಾರ್ಣಕಜೆ ಅವರ ಬೆಳಕಿನ ವಿನ್ಯಾಸ, ಧನಂಜಯ ಅವರ ಸಂಗೀತ ಪ್ರೇಕ್ಷಕರನ್ನು ಆಚೀಚೆ ಅಲುಗಾಡದಂತೆ ಹಿಡಿದಿಟ್ಟಲು ಯಶಸ್ವಿಯಾಗಿದೆ. ●

ಉತ್ಪಾದನೆಯ ಚದುರಿಕೆ.......

ಪುಟ 13 ರಿಂದ

ಕ್ರಾಂತಿಯೊಂದಿಗೆ ಬಂಡವಾಳಶಾಹಿ ಉತ್ಪಾದನಾ ವಿಧಾನವು ಪ್ರವರ್ಧಮಾನಕ್ಕೆ ಬಂದಿತು. ಆದರೆ ಬ್ರಿಟನ್ ಯಾವುದೇ ಕಚ್ಚಾ ಹತ್ತಿಯನ್ನು ಬೆಳೆಯಲು ಸಾಧ್ಯವಿಲ್ಲ. ಆದರೆ ತನ್ನ ನೆಲದಲ್ಲೇ ಬೆಳೆಸಲಾರದ ಅಥವಾ ಸಾಕಷ್ಟು ಪ್ರಮಾಣದಲ್ಲಿ ಅಥವಾ ವರ್ಷಪೂರ್ತಿ ಬೆಳೆಯಲು ಸಾಧ್ಯವಾಗದ ಈ ಎಲ್ಲ ಪ್ರಾಥಮಿಕ ಸರಕುಗಳನ್ನು ಅದು ಲಭ್ಯವಾಗಿಸಿಕೊಳ್ಳಬೇಕಾಗಿತ್ತು. ಅವುಗಳು ಸಾಮಾನ್ಯವಾಗಿ ಪ್ರಪಂಚದ ಉಷ್ಣವಲಯದ ಮತ್ತು ಅರೆ-ಉಷ್ಣವಲಯದ ಪ್ರದೇಶಗಳಲ್ಲಿ ಲಕ್ಷಾಂತರ ರೈತರು ಮತ್ತು ಸಣ್ಣ ಉತ್ಪಾದಕರು ಬೆಳೆಯುವಂತದ್ದು, ಐತಿಹಾಸಿಕವಾಗಿ ಇವು ಜನನಿಬಿಡ ಪ್ರದೇಶಗಳು, ಬಹುಮಟ್ಟಿಗೆ ಮೇಲೆ ಉಲ್ಲೇಖಿಸಿರುವ ಪರಿಧಿಯಲ್ಲಿನ ಪ್ರದೇಶಗಳೂ ಕೂಡ ಇವೇ ಆಗಿದ್ದವು. ಬಂಡವಾಳಶಾಹಿ ಈ ಪ್ರದೇಶಗಳಿಗೆ ಹರಡಿದಾಗಲೂ ಸಹ, ಇವು ಈ ಸ್ಥಳೀಯ ಬಂಡವಾಳಶಾಹಿ ಮತ್ತು ಮುಂದುವರೆದ ದೇಶಗಳ ಬಂಡವಾಳಶಾಹಿಗಳೂ ಈ ಕೋಟ್ಯಂತರ ಬಂಡವಾಳಶಾಹಿಯಲ್ಲದ ಉತ್ಪಾದಕರನ್ನೇ ಅವಲಂಬಿಸಬೇಕು. ಇವನ್ನು ಅವರು ಪಡೆಯುವುದು ಕೇವಲ ಹೆಚ್ಚಾಗದ ಬೆಲೆಗಳಲ್ಲಿ ಮಾತ್ರವೇ ಅಲ್ಲ, ಇವು ವಾಸ್ತವವಾಗಿ ಡಾಲರ್ ಲೆಕ್ಕಾಚಾರದಲ್ಲಿ ಹಲವು ದಶಕಗಳಿಂದ ಸಂಪೂರ್ಣ ಕುಸಿತವನ್ನೇ ತೋರಿಸಿವೆ.

ಈ ಸರಕುಗಳ ವಿನಿಮಯ ಮೌಲ್ಯವು ತುಲನಾತ್ಮಕವಾಗಿ ಕಡಿಮೆ, ಇದು ಈ ಸರಕುಗಳ ಸಣ್ಣ ಉತ್ಪಾದಕರನ್ನು ವರ್ಷಗಳಿಂದ ತೀವ್ರವಾಗಿ ಹಿಂಡಿರುವ ಪರಂಪರೆಗೆ ಸೇರಿದ್ದು. ಆದ್ದರಿಂದ ಈ ಸರಕುಗಳು ವ್ಯವಸ್ಥೆಗೆ ಸಾಕಷ್ಟು ಮುಖ್ಯವೇನಲ್ಲ ಎಂಬ ಸಂಪೂರ್ಣ ತಪ್ಪಾದ ಭಾವನೆ ಸೃಷ್ಟಿಯಾಗಿದೆ. ಏಕೆಂದರೆ ಬಂಡವಾಳಶಾಹಿಗೆ ಅವುಗಳು ಬಳಕೆ-ಮೌಲ್ಯಗಳಾಗಿ ಬೇಕೇ ಬೇಕು. ಈಗ, ಅಂತಹ ಸರಕುಗಳನ್ನು, ವಿಶೇಷವಾಗಿ ಉಷ್ಣವಲಯದ ಮತ್ತು ಅರೆ-ಉಷ್ಣವಲಯದ ಕೃಷಿ ಸರಕುಗಳನ್ನು ಈಗಾಗಲೇ ಹೆಚ್ಚು ಕಡಿಮೆ ಸಂಪೂರ್ಣವಾಗಿ ಬಳಸಿರುವ ಭೂ-ಸಮೂಹದಿಂದ ಪಡೆಯಬೇಕಾಗಿದೆ. ಅಲ್ಲಿ ನೆಲೆಗೊಂಡಿರುವ ಸಣ್ಣ ಉತ್ಪಾದಕರು "ಭೂಮಿ-ವರ್ಧನೆ" (ಅಂದರೆ ಇಳುವರಿಯನ್ನು ಹೆಚ್ಚಿಸುವ ಕ್ರಮಗಳನ್ನು) ಮತ್ತು ನವೀನ ವಿಧಿ-ವಿಧಾನಗಳನ್ನು ಬಳಸುವಂತಾದರೆ ಬಲವಂತದ ಅಗತ್ಯವಿರುವುದಿಲ್ಲ ಆದರೆ ಅಂತಹ ಆವಿಷ್ಕಾರಗಳು ಮತ್ತು ಅಭ್ಯಾಸಗಳು, ನೀರಾವರಿಯಾಗಿರಲಿ ಅಥವಾ ಹೆಚ್ಚಿನ ಇಳುವರಿ ನೀಡುವ ಬೀಜ ಪ್ರಭೇದಗಳ ಸಂಶೋಧನೆ ಮತ್ತು ಜನಪ್ರಿಯಗೊಳಿಸಲು ಸಾಮಾನ್ಯವಾಗಿ ಪ್ರಭುತ್ವದ ಪ್ರಯತ್ನ ಗಣನೀಯವಾಗಿ ಅಗತ್ಯವಿರುತ್ತದೆ, ಆಧರೆ ಇದು ಬಂಡವಾಳಶಾಹಿಯ, ವಿಶೇಷವಾಗಿ ನವ ಉದಾರವಾದಿ ಬಂಡವಾಳಶಾಹಿಯ ತೀವ್ರ ಅಸಮಾಧಾನಕ್ಕೆ ತುತ್ತಾಗಿಸುವ ಸಂಗತಿ. ಅದು ಅಂತರರಾಷ್ಟ್ರೀಯ ಬಂಡವಾಳ ಮತ್ತು ಅದರ ಸ್ಥಳೀಯ ಮಿತ್ರರು. ಜಾಗತಿಕ ದಕ್ಷಿಣದ ಕಾರ್ಪೊರೇಟ್-ಹಣಕಾಸು ಕೂಟಗಳನ್ನು ಬಿಟ್ಟು ಬೇರೆಯವರ ಹಿತಾಸಕ್ತಿಗಳನ್ನು ಉತ್ತೇಜಿಸುವ ಯಾವುದೇ ಚಟುವಟಿಕೆಯಲ್ಲಿ ಪ್ರಭುತ್ವವು ತೊಡಗಿಸಿಕೊಳ್ಳುವುದನ್ನು ಅದು ಬಯಸುವುದಿಲ್ಲ, ರೈತರು ಮತ್ತು ಸಣ್ಣ ಉತ್ಪಾದಕರ ಹಿತಾಸಕ್ತಿಗಳನ್ನು ಉತ್ತೇಜಿಸುವುದನ್ನಂತೂ ಖಂಡಿತವಾಗಿಯೂ ಬಯಸುವುದಿಲ್ಲ, ಅದಕ್ಕಾಗಿಯೇ "ಭೂಮಿ-ವರ್ಧನೆ" ಮುಂತಾದ ಕ್ರಮಗಳನ್ನು ಕೈಬಿಟ್ಟು ಸ್ಥಳೀಯ ಆದಾಯವನ್ನು ಸಂಕುಚಿತಗೊಳಿಸುವ ಮತ್ತು ಆಮೂಲಾಕ ಆ ಸರಕುಗಳಿಗೆ ಆಂತರಿಕ ಬೇಡಿಕೆಯನ್ನು ಕಡಿತಗೊಳಿಸಿ, ತನ್ನ ಪ್ರಾಥಮಿಕ ಸರಕುಗಳ ಅಗತ್ಯ ಪೂರೈಕೆಗಳನ್ನು ಪಡೆಯುತ್ತದೆ. ಇಂತಹ ಕಡಿತ ದಬ್ಬಾಳಿಕೆಯಿಲ್ಲದೆ ಅಸಾಧ್ಯ.

ಜಾಗತಿಕ ದಕ್ಷಿಣದಲ್ಲಿ ತಲಾವಾರು ಆಹಾರಧಾನ್ಯ ಉತ್ಪಾದನೆಯಲ್ಲಿನ ಕುಸಿತ, ಮತ್ತು ಅದಕ್ಕಿಂತ ತೀವ್ರವಾಗಿ ತಲಾವಾರು ಆಹಾರಧಾನ್ಯಗಳ ಲಭ್ಯತೆಯಲ್ಲಿ ಕುಸಿತ (ಇತ್ತೀಚಿನ ವರ್ಷಗಳಲ್ಲಿ ಜೈವಿಕ ಇಂಧನಗಳ ಕಡೆಗೆ ಆಹಾರಧಾನ್ಯಗಳನ್ನು ತಿರುಗಿಸಲಾಗುತ್ತಿದೆ) ಈ ದಬ್ಬಾಳಿಕೆಯ ಪರಿಣಾಮವಾಗಿದೆ. ಪೌಷ್ಟಿಕಾಂಶದ ಕೊರತೆ ಕಂಡು ಬಂದಿರುವುದು ಇದರ ಒಂದು ಅಭಿವ್ಯಕ್ತಿಯಾಗಿದೆ. ಆದ್ದರಿಂದ ಜಾಗತಿಕ ದಕ್ಷಿಣಕ್ಕೆ ಉತ್ಪಾದನೆಯ ಚದುರಿಕೆಯು ಸಾಮ್ರಾಜ್ಯಶಾಹಿ ಎಂಬ ವಿದ್ಯಮಾನವನ್ನು ಯಾವುದೇ ರೀತಿಯಲ್ಲಿ ತೊಡೆದು ಹಾಕುವುದಿಲ್ಲ.

ಅನು: ಕೆ.ವಿ.

➔ಬೇಡಿಕೆಗಳಿಗೆ ಸ್ಪಂದಿಸುವಂತೆ ಮತ್ತು ಭವಿಷ್ಯದಲ್ಲಿ ಚುನಾವಣೆಗಳಲ್ಲಿ ಹಿಂದಿಕ್ಕಲು ವೇದಿಕೆಯನ್ನು ಸಿದ್ಧಪಡಿಸುತ್ತಿವೆ.

ಜಾಗತಿಕ ಸಾಮ್ರಾಜ್ಯಶಾಹಿ ಆರ್ಥಿಕತೆ ಯೊಂದಿಗೆ ದಕ್ಷಿಣ ಆಫ್ರಿಕಾದ ಆರ್ಥಿಕತೆ ಹೆಣೆದುಕೊಂಡಿರುವುದು ಮತ್ತು ಆರ್ಥಿಕ ರೂಪಾಂತರವನ್ನು ತ್ವರಿತವಾಗಿ ವೇಗಗೊಳಿಸಲು ಅದರ ಸದಸ್ಯರ, ಬೆಂಬಲಿಗರ ಬಯಕೆಯ ನಡುವೆ ತನ್ನದೇ ಆದ ಸಮತೋಲನ ಪ್ರಕ್ರಿಯೆಯಲ್ಲಿ ANC ತೊಡಗಿದೆ. ANC, ದಕ್ಷಿಣ ಆಫ್ರಿಕಾದ ಕಮ್ಯುನಿಸ್ಟ್ ಪಕ್ಷ ಮತ್ತು ಟ್ರೇಡ್ ಯೂನಿಯನ್ ಕೇಂದ್ರ COSATU ಗಳ ತ್ರಿಪಕ್ಷೀಯ ಕೂಟ ಈ ಬಂಡವಾಳಶಾಹಿ-ಪರ ಶಕ್ತಿಗಳ ಪ್ರಯತ್ನಕ್ಕೆ ತೀವ್ರ ಪ್ರತಿರೋಧ ಒಡ್ಡುತ್ತಿವೆ.

‘ರಾಷ್ಟ್ರೀಯ ಸರಕಾರ’ ದ ರಾಜಕೀಯ ಭವಿಷ್ಯ

ಇದು ಈಗ ಅಧಿಕಾರ ವಹಿಸಿಕೊಂಡಿರುವ ANC ಯ ‘ರಾಷ್ಟ್ರೀಯ ಸರಕಾರ’ ರಚನೆಯ ರಾಜಕೀಯ ಸನ್ನಿವೇಶವಾಗಿದೆ. “ಮಾರುಕಟ್ಟೆಗಳು” ಮತ್ತು ಉದ್ಯಮಗಳು ANC ಮತ್ತು DA ನಡುವೆ ಸಮ್ಮಿಶ್ರ ಸರ್ಕಾರವನ್ನು ಬಯಸುತ್ತದೆ. ಇದು ಬಲಪಂಥೀಯತೆಯತ್ತ ನಿರ್ಣಾಯಕ ಬದಲಾವಣೆಯಾಗಿದ್ದು ಅದು ನಿಸ್ಸಂದೇಹವಾಗಿ ಸರ್ಕಾರಿ ಸ್ವಾಮ್ಯದ ಕಂಪನಿಗಳ ಮತ್ತಷ್ಟು ಖಾಸಗೀಕರಣ, ಕಠಿಣ ಬಜೆಟ್‌ಗಳ ಅನುಷ್ಠಾನ, ಹಾಗೆಯೇ BRICS, ಕ್ಯೂಬಾ ಮತ್ತು ಪ್ಯಾಲೆಸ್ಟೈನ್ ಜತೆಗಿನ ಸಂಬಂಧಗಳನ್ನು ಸಡಿಲಿಸುವತ್ತ ಹೋಗುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಶೇ.60 ಕ್ಕಿಂತ ಹೆಚ್ಚು ಮತದಾರರು ದೇಶ ಎಲ್ಲಿಗೆ ಹೋಗಬೇಕೆಂದು ಬಯಸುತ್ತಾರೋ ಅದಕ್ಕೆ ವಿರುದ್ಧ ದಿಕ್ಕಿನಲ್ಲಿ ಕೊಂಡೊಯ್ಯುವ ಸಾಧ್ಯತೆಯಿದೆ.

EFF ಮತ್ತು MK ಎರಡೂ ANC ಯಿಂದ ಬೇರ್ಪಟ್ಟ ಪಕ್ಷಗಳು. ANC ಯಲ್ಲಿನ ಬಂಡವಾಳಶಾಹಿ-ಪರ ಶಕ್ತಿಗಳು ಎರಡೂ ಪಕ್ಷಗಳೊಂದಿಗಿನ ಮೈತ್ರಿಯ ಸರ್ಕಾರದಲ್ಲಿ ಸಮಾಜವಾದಿ ವಿಚಾರಗಳ ಕೈಯನ್ನು ಬಲಪಡಿಸುತ್ತದೆ ಎಂದು ಭಯಪಡುತ್ತಾರೆ. ಈ ಪಕ್ಷಗಳ ನಡುವೆ ಇರುವ ವೈಷಮ್ಯ ‘ರಾಷ್ಟ್ರೀಯ ಸರಕಾರ’ ದ ಜತೆ ಅಸಹಕಾರ ತೋರಿಸುವ ಮೂಲಕ DA ಮೇಲಿನ ANCಯ ಅವಲಂಬನೆ ಹೆಚ್ಚಿಸಬಹುದು.

ಹಲವಾರು ANC ನಾಯಕರು ಮತ್ತು ಕಮ್ಯುನಿಸ್ಟ್ ಪಕ್ಷವು DA ಯೊಂದಿಗಿನ ಮೈತ್ರಿಗೆ ಸಾರ್ವಜನಿಕವಾಗಿ ವಿರುದ್ಧವಾಗಿದೆ ಮತ್ತು ಅಂತಹ ಒಪ್ಪಂದವು ಸಂಘಟನೆಯಲ್ಲಿ ಮತ್ತಷ್ಟು ಸಮಸ್ಯೆ ಸೃಷ್ಟಿಸುವ ಸಾಧ್ಯತೆಯಿದೆ.

ಹೀಗಾಗಿ ದಕ್ಷಿಣ ಆಫ್ರಿಕಾವು ಬಡತನ ಮತ್ತು ಅಸಮಾನತೆಯನ್ನು ತೊಡೆದು ಹಾಕಿ ಕ್ಷಿಪ್ರ ಪ್ರಗತಿಯನ್ನು ಸಾಧಿಸುತ್ತದೆಯೇ ಮತ್ತು ಏಕಧ್ರುವೀಯ US ಪ್ರಾಬಲ್ಯವನ್ನು ಕೊನೆಗೊಳಿಸುವ ಹೋರಾಟವನ್ನು ಮುನ್ನಡೆಸುವ ಪಾತ್ರವನ್ನು ವಹಿಸುತ್ತದೆಯೇ ಅಥವಾ ಬಿಳಿಯ ಬಲಪಂಥೀಯ ಶಕ್ತಿಗಳ, ಪಾಶ್ಚಿಮಾತ್ಯ ಒತ್ತಡಕ್ಕೆ ಸಿಲುಕಿ ಬಹುಸಂಖ್ಯಾತ ಕರಿಯರ ಹಿತಾಸಕ್ತಿ ಕಾಪಾಡುವಲ್ಲಿ ಸೋಲುತ್ತದೆಯೇ? ಎಂಬ ಕೂಡುದಾರಿಯಲ್ಲಿ ಇಂದು ನಿಂತಿದೆ. ●

NEW No. MAG(3)/NPP/205/2021-2022
JANASHAKTHI KANNADA VARA PATRIKE June 24-30, 2024 Price: Rs. 10/- Date of Publication: 21 June 2024 RNI No. KARKAN /2006/17926 Posted on 26-06-2024
Posted at BG PSO, BG - 560026 **Posted at Periodical Rate -** Rs. 2





‘ಗೋರ್ ಮಾಟಿ’

ಬರಿ ನಾಟಕವಲ್ಲ ಬಂಜಾರ ಜನಾಂಗದ ಕಲೆ, ಸಂಸ್ಕೃತಿ ಮತ್ತು ಬದುಕು ಬವಣೆಗಳ ಅನಾವರಣ

ಎಚ್.ಆರ್.ನವೀನ್ ಕುಮಾರ್, ಹಾಸನ

ಬಂಜಾರ ಸಮುದಾಯ ಬೆಳೆದು ಬಂದ ರೀತಿ, ಅವರು ಬದುಕು ಕಟ್ಟಿಕೊಂಡ ಪರಿ, ಬದುಕಿನ ವಿಧಾನ, ಇದುವರೆಗೂ ಅನುಭವಿಸಿದ್ದ ಕಷ್ಟಗಳು, ಈಗಲೂ ಅನುಭವಿಸುತ್ತಿರುವ ಸಂಕಷ್ಟಗಳು, ಅವರ ಮೇಲಿನ ದಾಳಿ ದಬ್ಬಾಳಿಕೆ, ಇವೆಲ್ಲವನ್ನೂ ಮೀರಿ ಈ ಸಮುದಾಯದಿಂದ ಬೆಳೆದುಬಂದ ಹಲವು ಪ್ರತಿಭೆಗಳು.... ಹೀಗೇ ಬಂಜಾರ ಸಮುದಾಯ ಬದುಕು ಕಟ್ಟಿಕೊಂಡ ರೀತಿಯನ್ನು ತೆರೆಯ ಮೇಲೆ ಎರಡು ಗಂಟೆ ನಲವತ್ತೈದು ನಿಮಿಷಗಳ ಕಾಲ ಅತ್ಯಂತ ಪರಿಣಾಮಕಾರಿಯಾಗಿ ರಂಗಕ್ಕಿಳಿಸಲಾಗಿದೆ.

ನಾಗರೀಕತೆಯ ಬೆಳವಣಿಗೆಯಲ್ಲಿ ಜನಾಂಗಗಳು ಹುಟ್ಟುತ್ತವೆ, ಆದರೆ ಈ ‘ಜನಾಂಗಗಳು ಜಾತಿಗಳಾಗದೆ ಜ್ಯೋತಿಗಳಾಗಬೇಕು’ ಎಂಬ ನಾಟಕದಲ್ಲಿ ಬರುವ ಈ ಮಾತು ಇಂದಿಗೆ ಬಹಳ ಪ್ರಸ್ತುತವಾಗಿದೆ. ನಾಟಕದ ನಿರ್ದೇಶಕರಾದ ಸಿ.ಬಸವಲಿಂಗಯ್ಯನವರ ಮಾತುಗಳಲ್ಲೇ ಹೇಳುವುದಾದರೆ “ಭಾರತದ ಉದ್ದಗಲಕ್ಕೂ ಮೊದಲೇ ರೂಪುಗೊಂಡ ‘ಲಮಾಣ್ ಮಾರ್ಗ’ ಬಂಜಾರರ ವ್ಯಾಪಾರಿ ರಸ್ತೆಗಳು! ಮನುಷ್ಯರು ನಡೆದಾಡಲು ಅಸಾಧ್ಯವಾದ ಗೊಂಡಾರಣ್ಯ ಮಾರ್ಗಗಳಲ್ಲಿ ಪ್ರಾಣವನ್ನು ಪಣಕ್ಕಿಟ್ಟು, ತಮ್ಮ ಎತ್ತು ಹೇರುಗಳ ಮೇಲೆ ಲದೇಣಿಯ ಸಾಗಿಸಿ, ಗುರಿ ತಲುಪುವ ಸಾಹಸಿ ಶ್ರಮಿಕ ವರ್ಗದ ಬಂಜಾರರಿಗೆ ಸಹಜವಾಗಿಯೇ ಬಹುಬೇಡಿಕೆ ಇತ್ತು. ಯುದ್ಧಭೂಮಿಗೆ ಆಹಾರ ಪದಾರ್ಥ, ಧವಸ ಧಾನ್ಯ, ಮದ್ದುಗುಂಡು, ಕತ್ತಿ ಗುರಾಣಿ ಇತ್ಯಾದಿ ಸಲಕರಣೆಗಳನ್ನು ಸಕಾಲಕ್ಕೆ ಸರಬರಾಜು ಮಾಡಿ ಉತ್ತಮ ಸೇವೆ ಸಲ್ಲಿಸುವ ನಂಬುಗೆಯ ಜನರು ಬಂಜಾರರಾಗಿದ್ದರು ಎಂಬ ಪ್ರತೀತಿ ಇದೆ. ಇದರಿಂದ ಆರ್ಥಿಕವಾಗಿ ಬಲಾಢ್ಯರಾಗುತ್ತಿದ್ದ ಆ ಜನ ಮುಂದೆ ವ್ಯಾಪಾರ ವಹಿವಾಟಿನಲ್ಲಿ ತಮಗೆ ಪ್ರತಿಸ್ಪರ್ಧಿಗಳಾಗಬಹುದೆಂಬ ಭೀತಿಯಿಂದ ಆಳುವ ದೊರೆಗಳು (ನಿಜಾಮರು, ಬ್ರಿಟಿಷರು) ಅವರನ್ನು ‘ಕೊಳ್ಳೆಹೊಡೆಯುವ ಸಮುದಾಯ’ ಎಂಬ ಸುಳ್ಳು ಆರೋಪ ಹೊರಿಸಿ ಖಾಯಂ ಅಪರಾಧಿ ಪಟ್ಟಿಗೆ ಸೇರಿಸುತ್ತಾರೆ.

ಸಂಚಾರಿ ವ್ಯಾಪಾರ ಕೈತಪ್ಪಿದ ಬಳಿಕ ಶ್ರಮಜೀವಿಗಳಾದ ಲಂಬಾಣಿಗರು ಉತ್ತಮ ಕೃಷಿಕರಾಗಿ ಹೊರಹೊಮ್ಮುತ್ತಾರೆ. ಆದರೆ ಅವರು ಅಲ್ಲಿಯೂ ನೆಮ್ಮದಿಯಿಂದ ವ್ಯವಸಾಯ ಮಾಡಿಕೊಂಡಿರಲು ಸಾಧ್ಯವಾಗುವುದಿಲ್ಲ. ಭೂಮಾಲೀಕರು, ಆಳುವವರ್ಗ, ಗೂಂಡಾಗಳು ಕಾಲಕಾಲಕ್ಕೆ ನಾನಾ ರೀತಿಯಲ್ಲಿ ಕಿರುಕುಳ ಕೊಡುತ್ತಾರೆ.” ಮೂಲತಃ ದುಡಿಯುವ ವರ್ಗವಾದ ಬಂಜಾರರು ದನಗಳನ್ನು ಸಾಕುತ್ತಾ, ಅವುಗಳನ್ನೇ ಬಳಸಿ ಒಂದು ಜಾಗದಿಂದ ಮತ್ತೊಂದು ಜಾಗಕ್ಕೆ ಸಾಮಾನು ಸರಂಜಾಮುಗಳನ್ನು ಸಾಗಿಸಲು, ರಾಜರುಗಳಿಗೆ, ಆನಂತರ ಬ್ರಿಟೀಷರಿಗೆ ಕೆಲಸ ಮಾಡಿದ ಇವರು ತಮ್ಮ ದುಡಿಮೆಯನ್ನೇ ನಂಬಿ ಬದುಕಿದವರು. ನಂತರದಲ್ಲಿ ಬ್ರಿಟಿಷರು ತಮ್ಮ ಲೂಟಿಯ ವೇಗವನ್ನು ಹೆಚ್ಚಿಸಲು ರಸ್ತೆ ಮತ್ತು ರೈಲು ಮಾರ್ಗಗಳ ನಿರ್ಮಾಣ ಕಾರ್ಯ ಆರಂಬಿಸಿದಾಗ ಇದರಲ್ಲಿ ದುಡಿದವರು ಬಹುತೇಕರು ಬಂಜಾರರು.

ತಮ್ಮ ಕುಲದ ಸಮಸ್ಯೆಗಳನ್ನು ತಾವೇ ಕುಳಿತು ಬಗೆಹರಿಸಿಕೊಳ್ಳುವ ಬುಡಕಟ್ಟುಗಳ ನ್ಯಾಯಪಂಚಾಯತಿ ವ್ಯವಸ್ಥೆಯನ್ನು ಇಂದಿಗೂ ಬಂಜಾರರು ತಮ್ಮ ತಾಂಡಾಗಳಲ್ಲಿ ಮುಂದುವರೆಸಿಕೊಂಡು ಬಂದಿದ್ದಾರೆ. ಇವುಗಳ ಜೊತೆಗೆ ಅನಕ್ಷರತೆ, ಮೌಢ್ಯ ಅತಿ ಹೆಚ್ಚಾಗಿದ್ದ ಈ ಸಮುದಾಯ, ಉಳ್ಳವರಿಂದ ಇನ್ನಿಲ್ಲದ ಶೋಷಣೆಯನ್ನ ಅನುಭವಿಸುತ್ತಾ ಬಂದಿದೆ. ಹಬ್ಬ/ಜಾತ್ರೆ ಮಾಡುವ ಸಲುವಾಗಿ ಧಣಿಗಳಿಂದ ಸಾಲಪಡೆದು ಅದನ್ನು ತೀರಿಸಲಾಗದೆ ತನ್ನನ್ನೇ ಜೀತದಾಳಾಗಿ ಬಲಿಕೊಟ್ಟುಕೊಳ್ಳುವ ಪ್ರಕರಣಗಳು ಮತ್ತು ತಮ್ಮ ಸಮುದಾಯದಲ್ಲೇ ಇದ್ದ ಉಳ್ಳವರು ಇಲ್ಲದವರ ಮಕ್ಕಳಿಗೆ ಶಿಕ್ಷಣವನ್ನು ನಿರಾಕರಿಸುವ ರೀತಿ ಹೀಗೆ ಹತ್ತು ಹಲವು ಒಳನೋಟಗಳನ್ನು ನಾಟಕ ಬಿಂಬಿಸುತ್ತದೆ.

ಬುಡಕಟ್ಟು ಸಮುದಾಯಗಳು ಮೂಲತಃ ಮಹಿಳಾ ಪ್ರಧಾನವಾದವುಗಳು. ಆದರೆ ಕ್ರಮೇಣ ಬೆಳವಣಿಗೆಯ ಹಂತದಲ್ಲಿ ಪುರೋಹಿತಶಾಹಿ ವ್ಯವಸ್ಥಿತ ಪಿತೂರಿಯ ಭಾಗವಾಗಿ ಮಹಿಳೆಗೆ ಯಾವ ಸ್ಥಾನವನ್ನೂ ನೀಡದೆ ಆಕೆಯನ್ನು ಎರಡನೇ ದರ್ಜೆಯ ಪ್ರಜೆಯನ್ನಾಗಿ ನಾಗರೀಕ ಸಮಾಜ ಅನಾಗರೀಕವಾಗಿ ಕಾಣುತ್ತಿರುವ ಈ ಕಾಲಘಟ್ಟದಲ್ಲೂ ಬಂಜಾರ ಸಮುದಾಯ ಮಹಿಳೆಯರಿಗೆ ಪುರುಷರಷ್ಟೇ ಎಲ್ಲಾ ರೀತಿಯಲ್ಲೂ ಸಮಾನ ಅವಕಾಶಗಳನ್ನು ಕಲ್ಪಸಲಾಗಿದೆ. ಈ ನಾಟಕದ ಒಂದು ದೃಶ್ಯದಲ್ಲಿ ತಾಂಡಾದ ನ್ಯಾಯ ಪಂಚಾಯತಿಯಲ್ಲಿ ಇಬ್ಬರೂ ವಿವಾಹಿತರು ಪರಸ್ಪರ ಬೇರೆಯವರನ್ನು ಇಷ್ಟಪಟ್ಟಿರುತ್ತಾರೆ. ಇವರಿಬ್ಬರ ಸಂಬಂಧದ ಕುರಿತಾಗಿ ನ್ಯಾಯ ಪಂಚಾಯತಿ ನಡೆಯುತ್ತಿರುತ್ತದೆ. ಎಲ್ಲರೂ ಅವರವರ ರೀತಿ ತಮ್ಮ ವಿಚಾರಗಳನ್ನು, ಅಭಿಪ್ರಾಯಗಳನ್ನು ಮಂಡಿಸುತ್ತಿರುತ್ತಾರೆ. ಆದರೆ ಈ ಪಂಚಾಯತಿಯ ಕೇಂದ್ರ ಬಿಂದುವಾದ ಮಹಿಳೆಗೆ ಮಾತನಾಡಲು ಅವಕಾಶ ಕಲ್ಪಿಸಿ, ಅವಳ ಅಭಿಪ್ರಾಯದಂತೆ ತಾಂಡಾದ ನಾಯಕರು ತೀರ್ಪು ನೀಡುತ್ತಾರೆ. ಇದು ಇಂದಿನ ಪುರುಷ ಪ್ರಧಾನ ಸಮಾಜಕ್ಕೆ, ಅದರ ದೌರ್ಜನ್ಯಕ್ಕೆ ಹಿಡಿದ ಕನ್ನಡಿಯಂತೆ ಕಾಣುತ್ತದೆ.

ಬಂಜಾರ ಸಮುದಾಯದ ಮೂಲದಿಂದ ಬಂದು ಜಗತ್ತಿನ ವಿವಿಧ ದೇಶಗಳಲ್ಲಿ ಮತ್ತು ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಭರತನಾಟ್ಯ ಕಲಾವಿಧೆ ವೆಂಕಟಲಕ್ಷ್ಮಿ, ಮಿಂಚಿನ ಓಟಗಾರ ಮಿಲ್ಖಾಸಿಂಗ್, ಪಾಕಿಸ್ತಾನದ ಹಾಡುಗಾರ್ತಿ ರೇಷ್ಮಾ, ವಿಶ್ವವಿಖ್ಯಾತ ಹಾಸ್ಯನಟ ಚಾರ್ಲಿ ಚಾಪ್ಲಿನ್ ಇವರುಗಳ ಪರಿಚಯವನ್ನು ಮಾಡುವ ಮೂಲಕ ಸಂಖ್ಯೆಯಲ್ಲಿ ಚಿಕ್ಕಸಮುದಾಯವಾದರೂ ಸಮಾಜಕ್ಕೆ ಮಹತ್ವದ ಕೊಡುಗೆಯನ್ನು ಕೊಟ್ಟಿದ್ದೇವೆ ಮತ್ತು ಕೊಡಲು ಸಾದ್ಯವಿದೆ ಎಂಬುದನ್ನು ಬಿಂಬಿಸಲಾಗಿದೆ.



ಇಡೀ ನಾಟಕದಲ್ಲಿ ವಸ್ತ್ರ ವಿನ್ಯಾಸ, ಬೆಳಕು ಮತ್ತು ಸಂಗೀತ ಇವುಗಳು ಬಂಜಾರರ ಕಲೆ ಮತ್ತು ಸಾಂಸ್ಕೃತಿಕ ವೈಭವವನ್ನು ನಾವು ಅವರ ನಡುವೆಯೇ ಇದ್ದೇವೇನೋ ಎಂಬಂತೆ ನೈಜವಾಗಿ ತೆರೆಯ ಮೇಲೆ ತರಲಾಗಿದೆ. ಇನ್ನು ರಂಗಾಯಣದ ಕಲಾವಿಧರು ಎಂದರೆ ಕೇಳಬೇಕ, ಪಾತ್ರಗಳನ್ನು ಮೈಮೇಲೆ ಆವರಿಸಿಕೊಂಡವರಂತೆ ಸಹಜವಾಗಿ ನಟನೆ ಮಾಡುತ್ತಾರೆ. ಒಟ್ಟಾರೆಯಾಗಿ ‘ಗೋರ್ ಮಾಟಿ’ ಬರಿ ನಾಟಕವಲ್ಲ ಬಂಜಾರ ಜನಾಂಗದ ಕಲೆ, ಸಂಸ್ಕೃತಿ ಬದುಕು ಬವಣೆಗಳ ಅನಾವರಣ.

ನಾಟಕದ ಕೊನೆಯ ದೃಶ್ಯ ಇಂದಿನ ಸಮಾಜಕ್ಕೆ ನೀಡುವ ಸ್ಪಷ್ಟ ಸಂದೇಶದಂತಿದೆ. ಈ ದೃಶ್ಯದಲ್ಲಿ ಇದೇ ಸಮುದಾಯಕ್ಕೆ ಸೇರಿದ ತನ್ನ ಹಾಸ್ಯ ನಟನೆಯ ಮೂಲಕ ಸಮಾಜದ ಓರೆ ಕೋರೆಗಳನ್ನು ವಿಡಂಬಿಸುವ ನಟ ಚಾರ್ಲಿ ಚಾಪ್ಲಿನ್ "ದಿ ಗ್ರೇಟ್ ಡಿಕ್ಟೇಟರ್" ಸಿನಿಮಾದ ಕೊನೆಯ ದೃಶ್ಯದಲ್ಲಿ ಅವನು ಜನರನ್ನು ಉದ್ದೇಶಿಸಿ ಮಾಡುವ ಭಾಷಣವನ್ನು ರಂಗದ ಮೇಲೆ ಅತ್ಯಂತ ಪರಿಣಾಮಕಾರಿಯಾಗಿ ನಮ್ಮೆಲ್ಲರಿಗೂ ತಲುಪಿಸಲು ಮಾಡಿರುವ ಪ್ರಯತ್ನ ಯಶಸ್ವಿಯಾಗಿದೆ. ಆ ಮಾತುಗಳನ್ನು ಮತ್ತೊಮ್ಮೆ ಗಮನಿಸಿ ಇಂದಿನ ಸಾಮಾಜಿಕ, ರಾಜಕೀಯ ಪರಿಸರಕ್ಕೆ ಅನ್ವಯಿಸಿಕೊಂಡು ಯೋಚಿಸುವಂತೆ ಮಾಡುತ್ತದೆ. ಇದೇ ನಾಟಕಕ್ಕಿರುವ ಶಕ್ತಿ. ಈ ಸಿನಿಮಾದಲ್ಲಿ ಚಾಪ್ಲಿನ್ ಆಡುವ ಮಾತುಗಳೇ ನಾಟಕದ ಕೊನೆಯ ಮಾತುಗಳಾಗಿವೆ ಮತ್ತು ಇದು ನಾಟಕದ ಒಟ್ಟು ಸಾರವನ್ನು ಕಟ್ಟಿಕೊಟ್ಟಿದೆ.

“ಕ್ಷಮಿಸಿ ನಾನು ಸರ್ವಾಧಿಕಾರಿಯಾಗಲು ಬಯಸುವುದಿಲ್ಲ. ನಾನು ಯಾರನ್ನೂ ಗೆಲ್ಲಲೂ ಅಥವಾ ಆಳಲು ಬಯಸುವುದಿಲ್ಲ. ಸಾಧ್ಯವಾದರೆ ಎಲ್ಲರಿಗೂ ಸಹಾಯ ಮಾಡಲು ಬಯಸುತ್ತೇನೆ. ಜೂಗಳು, ಯಹೂದಿಗಳು, ಕರಿಯರು, ಬಿಳಿಯರು ಎಲ್ಲರೂ ಒಬ್ಬರಿಗೊಬ್ಬರು ಸಹಾಯ ಮಾಡಬೇಕು ಮನುಷ್ಯರೇ ಹಾಗೆ.

ನಾವು ಪರಸ್ಪರ ಸಂತೋಷಕ್ಕಾಗಿ ಬದುಕಬೇಕೆ ಹೊರತು ಇತರರ ಸುಖಕ್ಕಾಗಿ ನಾವು ಒಬ್ಬರನ್ನೊಬ್ಬರು ದ್ವೇಷಿಸಲೇ ಕೂಡದು, ಈ ಭೂಮಿಯಲ್ಲಿ ಎಲ್ಲರಿಗೂ ಸ್ಥಳವಿದೆ, ಈ ಭೂಮಿ ಎಲ್ಲರನ್ನೂ ಪೊರೆಯುವಷ್ಟು ಸಮೃದ್ಧವಾಗಿದೆ.

ಈ ಬದುಕಿನ ಹಾದಿಯು ಸ್ವತಂತ್ರವೂ ಸುಂದರವೂ ಆಗಿರಲು ಸಾಧ್ಯ. ಆದರೆ ನಾವು ಹಾದಿ ತಪ್ಪಿದ್ದೇವೆ. ಸ್ವಾರ್ಥವು ಮನುಷ್ಯನ ಆತ್ಮವನ್ನೇ ಕಲುಷಿತಗೊಳಿಸಿದೆ. ಜಗತ್ತನ್ನು ದ್ವೇಷದ ಬೆಂಕಿಯಿಂದ ಬಂಧಿಸಿದೆ. ದುಃಖ ಮತ್ತು ರಕ್ತಪಾತದೆಡೆಗೆ ಸಾಗುತ್ತಿದೆ. ನಾವು ವೇಗವನ್ನು ಅಭಿವೃದ್ಧಿ ಪಡಿಸಿದ್ದೇವೆ. ಆದರೆ ನಮ್ಮನ್ನು ನಾವು ಬಂಧಿಸಿದ್ದೇವೆ.

ನಮ್ಮನ್ನು ಮುಕ್ತಗೊಳಿಸಿರುವ ಯಂತ್ರಗಳು ನಮ್ಮನ್ನು ಆಸೆಯ ಕೂಪದಲ್ಲಿರಿಸಿವೆ. ಜ್ಞಾನವು ನಮ್ಮನ್ನು ಸಿನಿಕರನ್ನಾಗಿಸಿದೆ. ನಮ್ಮ

ಪುಟ 15 ಕ್ಕೆ

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**